ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 5 ಬುಧವಾರ 2023

ಸಂಪುಟ: 43 | ಸಂಚಿಕೆ: 345 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಒಳಪುಟಗಳಲ್ಲಿ

ಸಿದ್ದರಾಮಯ್ಯ–ಡಿಕೆಶಿ ಹಗ್ಗಜಗ್ಗಾಟ

40 ಕ್ಷೇತ್ರ ಅಭ್ಯರ್ಥಿಗಳ ಆಯ್ಕೆ ಕಗ್ಗಂಟು

ಬೆಂಗಳೂರು, ಏ.4–(ಕೆಂಓಶಿ) ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಡುವಿನ ಹಗ್ಗ ಜಗ್ಗಾಟದಿಂದ 40 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಕಾಂಗ್ರೆಸ್ ವರಿಷ್ಠರು ವಿಫಲವಾಗಿದ್ದಾರೆ.



ರಾಜ್ಯದ ಉಳಿದ ನೂರು ವಿಧಾನ ಸಭಾ ಕ್ಷೇತ್ರಗಳಿಗೆ ಪಕ್ಷದ ಅಭ್ಯರ್ಥಿಗಳ ಆಯ್ಕೆ ಮಾಡುವ ಸಂಬಂಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ಇಂದು ನಡೆದ ಸಂಸದೀಯ ಮಂಡಳಿ ಸಭೆಯಲ್ಲಿ ಕೇವಲ 60 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗಿದೆ. ಅಂತಿಮಗೊಂಡಿರುವ ಎರಡನೇ ಪಟ್ಟಿ ಯಾವುದೇ ಕ್ಷಣದಲ್ಲಿ ಹೊರಬೀಳಲಿದೆ. ಈಗಾಗಲೇ 124 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಎಐಸಿಸಿ ಪಟ್ಟಿ ಬಿಡುಗಡೆ ಮಾಡಿದೆ. ಉಳಿದ ನೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂಬಂಧ ಸ್ಕ್ರೀನಿಂಗ್ ಕಮಿಟಿ ರಾಜ್ಯದಲ್ಲೇ ಮೂರು ದಿನ ಕಸರತ್ತು ನಡೆಸಿತ್ತು. ಈ ಸಂದರ್ಭದಲ್ಲಿ ವಿವಾದವಲ್ಲದ 60 ಕ್ಷೇತ್ರಗಳಿಗೆ ಒಂದೇ ಹೆಸರನ್ನು ಎಐಸಿಸಿಗೆ ಶಿಫಾರಸ್ಸು ಮಾಡಲಾಗಿತ್ತು.

ಉಳಿದ 40 ಕ್ಷೇತ್ರಗಳಿಗೆ ಎರಡರಿಂದ ಮೂರು ಹೆಸರುಗಳನ್ನು ಶಿಫಾರಸ್ಸು ಮಾಡಿ ವರಿಷ್ಠರ ನಿರ್ಧಾರಕ್ಕೆ ಸ್ಕ್ರೀನಿಂಗ್ ಕಮಿಟಿ ಕಳುಹಿಸಿ ಕೊಟ್ಟಿತ್ತು. ಈ ಪಟ್ಟಿಯನ್ನೇ ಮುಂದಿಟ್ಟುಕೊಂಡು ಸಂಸದೀಯ ಮಂಡಳಿ ಸಭೆಯಲ್ಲಿ ಇಡೀ ದಿನ ಚರ್ಚೆ ಮಾಡಿ ಕೇವಲ 60 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ. ಸಿದ್ದರಾಮಯ್ಯ ವರುಣಾ ವಿಧಾನಸಭಾ ಕ್ಷೇತ್ರದ ಜತೆಗೆ ಕೋಲಾರ ಕ್ಷೇತ್ರದಿಂದ ಸ್ಪರ್ಧಿಸುವುದಕ್ಕೆ ಸಭೆಯಲ್ಲಿ ಅಪಸ್ವರ ಎದ್ದಿದೆ. ಸ್ವತಃ ಎಐಸಿಸಿ ಅಧ್ಯಕ್ಷರೇ ವರುಣಾದಿಂದ ಆಯ್ಕೆ ಖಚಿತ ಇರುವಾಗ ಕೋಲಾರ ಏಕೆ ಎಂದಿದ್ದಾರೆ.

ಕ್ಷೇತ್ರವನ್ನು ಕಾರ್ಯಕರ್ತರೊಬ್ಬರಿಗೆ ಸ್ಪರ್ಧಿಸಲು ಅವಕಾಶ ಮಾಡಿಕೊಡೋಣ ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಅವರಿಗೆ ಎರಡು ಕ್ಷೇತ್ರಗಳಲ್ಲಿ ಅವಕಾಶ ಮಾಡಿಕೊಟ್ಟರೆ, ಡಾ.ಪರಮೇಶ್ವರ್ ಸೇರಿದಂತೆ ಕೆಲವರು ಇದೇ ಬೇಡಿಕೆಯನ್ನು ಇಡಬಹುದು. ಇದರಲ್ಲಿ ಗೊಂದಲ ಬೇಡ ಎಂದು ತಳ್ಳಿಹಾಕಿದ್ದಾರಂತೆ. ಆದರೆ, ಅಂತಿಮವಾಗಿ ಸಭೆ ತೀರ್ಮಾನ ಕೈಗೊಂಡಿರುವ ಬಗ್ಗೆ ಪೂರ್ಣ ಮಾಹಿತಿ ಲಭ್ಯವಿಲ್ಲ.

ಸಿದ್ದರಾಮಯ್ಯ ಸ್ಪಷ್ಟನೆ: ಡಿ.ಕೆ.ಶಿವಕುಮಾರ್ ಸಿಎಂ ಆಗಲು ಹೈಕಮಾಂಡ್ ಒಪ್ಪುವುದಿಲ್ಲ ಎಂಬ ಹೇಳಿಕೆ ನೀಡಿಲ್ಲ ಎಂದು ಸಿದ್ದರಾಮಯ್ಯ ಸಭೆಯಲ್ಲಿ ಸ್ಪಷ್ಟನೆ ನೀಡಿದ್ದಾರೆ.

ಪಟ್ಟಿಯಿಂದ ಮತದಾರರ ಹೆಸರು ಬಿಟ್ಟು ಹೋಗದಂತೆ ಎಚ್ಚರ ವಹಿಸಿ

ಬೂತ್ ಮಟ್ಟದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸೂಚನೆ

ಮೈಸೂರು, ಏ.4(ಆರ್‌ಕೆ)–ಮತದಾರರ ಪಟ್ಟಿಯಿಂದ ಯಾರ ಹೆಸರೂ ಕೈಬಿಟ್ಟು ಹೋಗದಂತೆ ಎಚ್ಚರ ವಹಿಸುವಂತೆ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಬೂತ್ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ನಂಜನಗೂಡು ತಾಲೂಕು ಕಚೇರಿಯ ಚುನಾವಣಾಧಿಕಾರಿ ಕಚೇರಿಯಲ್ಲಿ ಇಂದು ಸೆಕ್ಟರಲ್ ಅಧಿಕಾರಿಗಳು, ಸ್ಥಿರ ನಿಗಾ ತಂಡ ಹಾಗೂ ಬೂತ್ ಲೆವೆಲ್ ಅಧಿಕಾರಿ ಗಳ ಸಭೆ ನಡೆಸಿದ ಅವರು, ಮತದಾರರ ಪಟ್ಟಿಯಲ್ಲಿ ಹೆಸರು ಬಿಟ್ಟು ಹೋಗಿದ್ದರೆ ಅಥವಾ ಹೊಸದಾಗಿ ಹೆಸರು ಸೇರಿಸಲು ಏಪ್ರಿಲ್ 11ರವರೆಗೆ ಅವಕಾಶವಿರುವುದರಿಂದ ತಡ ಮಾಡದೇ ಬರುವ ಅರ್ಜಿಗಳನ್ನು ಪರಿಶೀಲಿಸಿ ಪಟ್ಟಿಯಲ್ಲಿ ಸೇರಿಸಬೇಕೆಂದು ತಿಳಿಸಿದರು.

ಅದೇ ರೀತಿ ಮರಣ ಹೊಂದಿರುವವರ ಹೆಸರನ್ನು ಪಟ್ಟಿಯಿಂದ ಡಿಲೀಟ್ ಮಾಡುವ ಜೊತೆಗೆ 80 ವರ್ಷ ಮೇಲ್ಪಟ್ಟವರಿಗೆ 12ಡಿ ಮೂಲಕ ಅವರಿರುವ ಸ್ಥಳದಿಂ ದಲೇ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ. ಅಂತಹವರಿಗೆ ಅಧಿಕಾರಿಗಳು ಆಸಕ್ತಿ ವಹಿಸಿ ಸೌಲಭ್ಯ ಕಲ್ಪಿಸಬೇಕು ಎಂದು ಬೂತ್ ಮಟ್ಟದ ಅಧಿಕಾರಿಗಳಿಗೆ ●9ನೇ ಪುಟಕ್ಕೆ



ನಂಜನಗೂಡು ತಾಲೂಕು ಕಚೇರಿಯ ಚುನಾವಣಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಮೈಸೂರು ಜಿಲ್ಲಾಧಿ ಕಾರಿ ಡಾ. ಕೆ.ವಿ.ರಾಜೇಂದ್ರ, ಸೆಕ್ಟರಲ್ ಅಧಿಕಾರಿಗಳು, ಸ್ಥಿರ ನಿಗಾ ತಂಡ ಹಾಗೂ ಬೂತ್ ಲೆವೆಲ್ ಅಧಿಕಾರಿ ಗಳ ಸಭೆ ನಡೆಸಿದರು. ಜಿಪಂ ಸಿಇಓ ಕೆ.ಎಂ. ಗಾಯತ್ರಿ ಇನ್ನಿತರರಿದ್ದಾರೆ.

ಬ್ಯಾಂಕ್‌ಗಳಲ್ಲಿ ನಗದು ವಹಿವಾಟಿನ ಮೇಲೆ ನಿಗಾ ವಹಿಸಿ: ಸಿಇಓ

ಮೈಸೂರು, ಏ. 4(ಆರ್‌ಕೆ)–ಚುನಾವಣಾ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಬ್ಯಾಂಕ್‌ಗಳಲ್ಲಿ ನಗದು ವಹಿ ವಾಟಿನ ಮೇಲೆ ತೀವ್ರನಿಗಾ ಇರಿಸುವಂತೆ ನೀತಿ ಸಂಹಿತೆ ನೋಡಲ್ ಅಧಿಕಾರಿ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಬ್ಯಾಂಕ್ ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ. ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಲೀಡ್ ಬ್ಯಾಂಕ್ ಅಧಿಕಾರಿಗಳ ಸಭೆ ನಡೆಸಿದ ಅವರು, ಗ್ರಾಹಕರ ಬ್ಯಾಂಕ್ ಖಾತೆಯ ವಹಿವಾಟುಗಳನ್ನು ಗಮನಿಸುತ್ತಿರಬೇಕು. ನಿರಂತರವಾಗಿ ●9ನೇ ಪುಟಕ್ಕೆ

ಕಾಂಗ್ರೆಸ್, ಬಿಜೆಪಿಯೊಂದಿಗೆ ಚುನಾವಣೋತ್ತರ ಮೈತ್ರಿಗೆ ಕುಮಾರಸ್ವಾಮಿ ಸಿದ್ಧರಿಲ್ಲ

■ಮಾಜಿ ಪ್ರಧಾನಿ ದೇವೇಗೌಡರ ಸ್ಪಷ್ಟನೆ ■ಕುಮಾರಸ್ವಾಮಿ ಮುಖ್ಯಮಂತ್ರಿ ಆಗಲು ಹೋರಾಡುತ್ತಿಲ್ಲ ಜನಪರ ಯೋಜನೆಗಳ ಜಾರಿಗೆ ಶ್ರಮಿಸುತ್ತಿದ್ದಾರೆ ■ತೆಲಂಗಾಣ, ತಮಿಳ್ನಾಡು, ಆಂಧ್ರದಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಮನ್ನಣೆ; ನಮ್ಮಲ್ಲೇಕಿಲ್ಲ: ವಿಷಾದ

ನವದೆಹಲಿ, ಏ.4– ಯಾವುದೇ ಪಕ್ಷದ ಜೊತೆ ಮೈತ್ರಿಗೆ ಹೆಚ್.ಡಿ.ಕುಮಾರಸ್ವಾಮಿ ಸಿದ್ಧರಿಲ್ಲ ಎಂದು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರು ಸ್ಪಷ್ಟಪಡಿಸಿದ್ದಾರೆ. ಖಾಸಗಿ ವಾಹಿನಿ ಜೊತೆ ಮಾತನಾಡಿ ಕಾಂಗ್ರೆಸ್ ಅಥವಾ ಬಿಜೆಪಿಯೊಂದಿಗೆ ಚುನಾವಣೋತ್ತರ ಮೈತ್ರಿಯನ್ನು ತಳ್ಳಿ ಹಾಕಿದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಯಾವುದೇ ಪಕ್ಷದ ಜೊತೆ ಮೈತ್ರಿಗೆ ಸಿದ್ಧರಿಲ್ಲ. ಸ್ವಂತ ಬಲದ ಮೇಲೆ ಪಕ್ಷವನ್ನು ಅಧಿಕಾರಕ್ಕೆ ತರುವುದೇ ಅವರ ಇಚ್ಛೆಯಾಗಿದೆ. ಈಗಾಗಲೇ ಪಕ್ಷದಿಂದ ಘೋಷಿಸಿರುವ ಭರವಸೆಗಳನ್ನು ●9ನೇ ಪುಟಕ್ಕೆ



ವರುಣಾದಲ್ಲಿ ಸಿದ್ದು ವಿರುದ್ಧ ಸೋಮಣ್ಣ?

ಮೈಸೂರು, ಏ.4(ಆರ್‌ಕೆ)– ಪ್ರತಿಷ್ಠಿತ ವರುಣಾ ವಿಧಾನ ಸಭಾ ಕ್ಷೇತ್ರದಲ್ಲಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ವಿರುದ್ಧ ವಸತಿ ಸಚಿವ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸಲು ಬಿಜೆಪಿ ನಿರ್ಧರಿಸಿದೆ ಎಂದು ಹೇಳಲಾಗುತ್ತಿದೆ.

ಮಾಜಿ ಮುಖ್ಯಮಂತ್ರಿ, ಲಿಂಗಾಯತ ಸಮುದಾಯದ ಪ್ರಬಲ ನಾಯಕ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ, ರಾಜ್ಯ ಬಿಜೆಪಿ ಉಪಾಧ್ಯಕ್ಷರೂ ಆದ ಬಿ.ವೈ. ವಿಜಯೇಂದ್ರ ವರುಣಾ ಕ್ಷೇತ್ರದಿಂದ ಸ್ಪರ್ಧಿಸುವುದು ಖಚಿತ ಎನ್ನಲಾಗಿತ್ತು. ಆದರೆ ಇತ್ತೀಚೆಗೆ ಮೈಸೂರಿನಲ್ಲಿ ಪ್ರತಿಕ್ರಿಯಿಸಿದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಶಿಕಾರಿಪುರ ಕ್ಷೇತ್ರದಿಂದಲೇ ವಿಜಯೇಂದ್ರ ಸ್ಪರ್ಧಿಸುವುದಾಗಿ ಸ್ಪಷ್ಟಪಡಿಸಿದ್ದರು. ವರುಣಾದಲ್ಲಿ ಸ್ಪರ್ಧೆ ವಿಚಾರದಲ್ಲಿ ಹೈಕಮಾಂಡ್ ನಿರ್ಧಾರಕ್ಕೆ ಬದ್ಧ ಎಂದು ವಿಜಯೇಂದ್ರ ಹೇಳಿದ್ದರು. ವಿಜಯೇಂದ್ರ ಶಿಕಾರಿಪುರ ಹಾಗೂ ವರುಣಾ, ಎರಡೂ ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಅವಕಾಶ ಕೇಳಿದ್ದಾರೆಂಬ ಮಾತುಗಳೂ ಕೇಳಿಬಂದಿದ್ದವು. ಈ ಎಲ್ಲಾ ಬೆಳವಣಿಗೆ ನಡುವೆಯೇ ಬಿಜೆಪಿ ಹೈಕಮಾಂಡ್ ಮತ್ತೋರ್ವ ಲಿಂಗಾಯತ ಪ್ರಭಾವಿ ನಾಯಕರಾದ, ವಸತಿ ಸಚಿವ ವಿ.ಸೋಮಣ್ಣ ಅವರನ್ನು ಪ್ರತಿಪಕ್ಷದ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕಣಕ್ಕಿಳಿಸಲು ನಿರ್ಧರಿಸಲಾಗಿದೆ ಎಂದು ಹೇಳಲಾಗುತ್ತಿದೆ. ಇದನ್ನು ಪುಷ್ಠೀಕರಿಸುವ ಚರ್ಚೆಗಳೂ ಆರಂಭವಾಗಿವೆ. ವರುಣಾ ಕ್ಷೇತ್ರದ ಚುನಾವಣಾ ಪ್ರಚಾರಕ್ಕೆ ಅನುಕೂಲವಾಗುವಂತೆ ಸೋಮಣ್ಣ ಕ್ಷೇತ್ರದಲ್ಲೇ ಸೂಕ್ತ ಮನೆಗೆ ಹುಡುಕಾಟ ನಡೆಸುತ್ತಿದ್ದಾರೆ ಎಂಬ ವದಂತಿಗಳೂ ಕೇಳಿಬರುತ್ತಿವೆ. 2019ರಲ್ಲಿ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನದ ಬಳಿಕ ಬಿಜೆಪಿ ಅಧಿಕಾರಕ್ಕೆ ಬಂದ ಆರಂಭದಲ್ಲಿ ಸೋಮಣ್ಣ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಕೊರೊನಾ ಸೋಂಕು ತೀವ್ರಗೊಂಡ ಹಿನ್ನೆಲೆಯಲ್ಲಿ ಕೆಲ ವಿವಾದಗಳು ಸೃಷ್ಟಿಯಾದ ●9ನೇ ಪುಟಕ್ಕೆ





ಗುರುವಾರದೊಳಗೆ ಜೆಡಿಎಸ್ 2ನೇ ಪಟ್ಟಿ: ಇದರಲ್ಲಿ ಹಾಸನ ಅಭ್ಯರ್ಥಿ ಹೆಸರು ಇರಲಿದೆ

ಬೆಂಗಳೂರು: ಜೆಡಿಎಸ್ ಅಭ್ಯರ್ಥಿಗಳ 2ನೇ ಪಟ್ಟಿ ಬುಧವಾರ ಅಥವಾ ಗುರುವಾರ ಬಿಡುಗಡೆ ಆಗಬಹುದು ಎಂದು ಮಾಜಿ ಮುಖ್ಯಮಂತ್ರಿ ಹೆಚ್‌ಡಿ ಕುಮಾರಸ್ವಾಮಿ ತಿಳಿಸಿದರು. ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಇಂದು ಮಂಗಳವಾರ ಆಗಿರುವುದರಿಂದ ಪಟ್ಟಿ ಬಿಡುಗಡೆ ಆಗಿಲ್ಲ. ದೇವೇಗೌಡರು ಬುಧವಾರ ಸಂಜೆ ದೆಹಲಿಯಿಂದ ವಾಪಸ್ ಆಗುತ್ತಾರೆ. ನಂತರ ಪಟ್ಟಿ ಹೊರಬರಲಿದೆ ಎಂದರು.



ನನಗಿಂತ ನಿಮಗೆ ಹಾಸನ ಟಿಕೆಟ್ ಘೋಷಣೆ ಬಗ್ಗೆ ಕುತೂಹಲವಿದೆ ಎಂದು ಮಾಧ್ಯಮಗಳಿಗೆ ಹೇಳಿದ ಅವರು, ಹಾಸನವನ್ನು ಸೇರಿಸಿ ಪಟ್ಟಿ ಬಿಡುಗಡೆ ಮಾಡುತ್ತೇವೆ. ಅದನ್ನು ಬಿಟ್ಟು ಮಾಡಿದರೆ ಇನ್ನೊಂದು ಕಥೆ ಹುಟ್ಟಿಕೊಳ್ಳುತ್ತದೆ. ಆದ್ದರಿಂದ ಆ ಪಟ್ಟಿಯಲ್ಲಿ ಹಾಸನದ್ದೂ ಒಳಗೊಂಡಂತೆ ತೀರ್ಮಾನ ಮಾಡುತ್ತೇವೆ ಎಂದು ಅವರು ತಿಳಿಸಿದರು. ಮೊದಲ ಪಟ್ಟಿ ಬಿಡುಗಡೆಯಾದಾಗಲೂ ಯಾವುದೇ ಸಮಸ್ಯೆ ಇರಲಿಲ್ಲ. 2ನೇ ಪಟ್ಟಿ ವೇಳೆ ಹಾಸನದ್ದು ಹೆಚ್ಚು ಪ್ರಚಾರವಾಗಿದೆ. ಹಾಸನ ವಿಚಾರದಿಂದ ಜನತಾದಳಕ್ಕೂ ಹೆಚ್ಚು ಪ್ರಚಾರವಾಗಿದೆ. ಇದರಿಂದ ರಾಜ್ಯದಲ್ಲಿ ಜೆಡಿಎಸ್ ಪಕ್ಷಕ್ಕೆ ಶೇ.2–3 ರಷ್ಟು ಮತ ಪ್ರಮಾಣ ಹೆಚ್ಚಾಗಲಿದೆ. ನಮ್ಮ ಗುರಿ ಮುಟ್ಟೋದಕ್ಕೆ ನಾವು ಯಾವುದೇ ದುಡುಕಿನ ತೀರ್ಮಾನ ಮಾಡಲ್ಲ. ಕಾರ್ಯಕರ್ತರ ಅಪೇಕ್ಷೆ ಗೆಲ್ಲುವ ಮಾನದಂಡದಲ್ಲೇ ಟಿಕೆಟ್ ಕೊಡುತ್ತೇವೆ ಎಂದು ಅವರು ಉತ್ತರ ನೀಡಿದರು. ಕಾಂಗ್ರೆಸ್ ಪಟ್ಟಿ ರಿಲೀಸ್ ಆಗದ ಹಿನ್ನೆಲೆ ಜೆಡಿಎಸ್ ಪಟ್ಟಿ ●9ನೇ ಪುಟಕ್ಕೆ

ಜೆಡಿಎಸ್ 120 ಸ್ಥಾನ ಗೆದ್ದರೆ ರಾಜಕೀಯವಾಗಿ ನಿವೃತ್ತಿ

ಚಿಕ್ಕಬಳ್ಳಾಪುರ: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ 120 ಸ್ಥಾನಗಳಲ್ಲಿ ಗೆಲುವು ಸಾದಿಸಿದ್ರೇ ಆದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಹೇಳಿದರು. ರಾಜ್ಯದಲ್ಲಿ ಹಲವು ಬಾರಿ ಸಮ್ಮಿಶ್ರ ಸರ್ಕಾರಗಳ ಆಡಳಿತವನ್ನು ಕಂಡು ರೋಸಿಹೋಗಿರುವ ರಾಜ್ಯದ ಜನತೆ, ಈ ಬಾರಿ ಬಿಜೆಪಿಗೆ ಸ್ಪಷ್ಟ ಬಹುಮತ ನೀಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಲಿದ್ದಾರೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. 8 ಸ್ಥಾನಗಳಲ್ಲಿ ಕಮಲ ಅರಳಿಸುವ ಪಣ: ಹಳೇ ಮೈಸೂರು ಭಾಗದ ಕೋಲಾರ, ಚಿಕ್ಕಬಳ್ಳಾಪುರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಒಟ್ಟು 15 ವಿಧಾನಸಭಾ ಕ್ಷೇತ್ರಗಳಲ್ಲಿ ತಾವು ಜವಾಬ್ದಾರಿ ವಹಿಸಿದ್ದು, ಸಚಿವರಾದ ಮುನಿರತ್ನ, ಎಂಟಿಬಿ ನಾಗರಾಜ್, ಮತ್ತು ಈ ಭಾಗದ ಸಂಸದರೊಂದಿಗೆ ಸೇರಿ ಶ್ರಮಿಸುತ್ತಿದ್ದೇವೆ. ಈ ಕ್ಷೇತ್ರಗಳಲ್ಲಿ ಈವರೆಗೂ ಶೂನ್ಯ ಸಾಧನೆಯಲ್ಲಿ ಬಿಜೆಪಿ ಇದ್ದು, ಈ ಬಾರಿ ಕನಿಷ್ಠ 5 ರಿಂದ 8 ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಿಸುವುದಾಗಿ ವಿಶ್ವಾಸ ವ್ಯಕ್ತಪಡಿಸಿದರು.



ಸುಧಾಕರ್ ಹಣದ ದಾಹ: ಸಚಿವ ಡಾ.ಕೆ.ಸುಧಾಕರ್ ಹಣದ ದಾಹ ಪ್ರತಿ ಹಳ್ಳಿಗೂ ಗೊತ್ತಿದೆ ಎಂದು ಜೆಡಿಎಸ್ ನಾಯಕ ಹೆಚ್‌ಡಿ ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ 120 ಸ್ಥಾನಗಳಲ್ಲಿ ●9ನೇ ಪುಟಕ್ಕೆ

651 ಅಗತ್ಯ ಔಷಧಿ ದರ ಕಡಿತ

ನವದೆಹಲಿ, ಏ.4–ಕೇಂದ್ರ ಸರ್ಕಾರ ಬಹುತೇಕ ಅನುಸೂಚಿತ ಔಷಧಿಗಳ (ಶೆಡ್ಯೂಲ್ಡ್ ಡ್ರಗ್ಸ್) ಗರಿಷ್ಠ ದರಗಳಿಗೆ ಮಿತಿ ನಿಗದಿಪಡಿಸಿದ್ದು, 651 ಅಗತ್ಯ ಔಷಧಿಗಳ ದರ ಸರಾಸರಿ ಶೇ.6.73 ರಷ್ಟು ಕಡಿಮೆಯಾಗಿವೆ.

ಈ ಕುರಿತು ರಾಷ್ಟ್ರೀಯ ಔಷಧಿಗಳ ದರ ನಿಗದಿ ಪ್ರಾಧಿಕಾರ(ಎನ್‌ಪಿಪಿಎ) ಟ್ವೀಟ್ ಮಾಡಿದ್ದು, ರಾಷ್ಟ್ರೀಯ ಅಗತ್ಯ ಔಷಧಿಗಳ ಪಟ್ಟಿ(ಎನ್‌ಎಲ್‌ಇಎಂ) ಯಲ್ಲಿರುವ 870 ಅನುಸೂಚಿತ ಔಷಧಿಗಳ ಪೈಕಿ, ಈವರೆಗೆ 651 ಔಷಧಿಗಳ ಗರಿಷ್ಠ ದರಗಳ ಮೇಲೆ ಮಿತಿ ಹೇರಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿದೆ ಎಂದು ತಿಳಿಸಲಾಗಿದೆ. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಎನ್‌ಎಲ್‌ಇಎಂ ತಿದ್ದುಪಡಿ ಮಾಡಿದ್ದರ ಪರಿಣಾಮ 651 ಅಗತ್ಯ ಔಷಧಿಗಳ ದರ ಶೇ.12.12ರಷ್ಟು ಹೆಚ್ಚಳವಾಗಬೇಕಿತ್ತು. ಆದರೆ ಇದೀಗ ದರ ಹೆಚ್ಚಳಕ್ಕೆ ಸಂಬಂಧಿಸಿ ಮಿತಿ ಹೇರಿರುವುದರಿಂದ ಏಪ್ರಿಲ್ 1ರಿಂದ ಶೇ 6.73ರಷ್ಟು ದರ ಕಡಿಮೆಯಾಗಿವೆ. ಸಗಟು ದರ ●9ನೇ ಪುಟಕ್ಕೆ

ಏ.9ರಂದು ಪ್ರಧಾನಿ ನರೇಂದ್ರ ಮೋದಿ ಭೇಟಿ ಹಿನ್ನೆಲೆ

ಬಂಡೀಪುರದಲ್ಲಿ ಎಡಿಜಿಪಿ ಅಲೋಕ್‌ಕುಮಾರ್ ಪರಿಶೀಲನೆ


ಹೆಲಿಪ್ಯಾಡ್ ನಿರ್ಮಾಣ, ಭದ್ರತೆ ಕುರಿತು ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ



ಮೈಸೂರು, ಏ.4(ಆರ್‌ಕೆ)– ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಏಪ್ರಿಲ್ 9ರಂದು ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲೂಕು ಬಂಡೀಪುರ ರಾಷ್ಟ್ರೀಯ ಉದ್ಯಾನವನಕ್ಕೆ ಭೇಟಿ ನೀಡುವರು.

ಪ್ರಧಾನಿಗಳ ಭೇಟಿ ಹಿನ್ನೆಲೆಯಲ್ಲಿ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಇಂದು ಬಂಡೀಪುರಕ್ಕೆ ಭೇಟಿ ನೀಡಿ, ಮೇಲುಕಮನಹಳ್ಳಿ ಸಮೀಪ ಹೆಲಿಪ್ಯಾಡ್ ನಿರ್ಮಿಸಲು ಉದ್ದೇಶಿಸಿರುವ ಸ್ಥಳವನ್ನು ಅಧಿಕಾರಿಗಳೊಂದಿಗೆ ಪರಿಶೀಲಿಸಿದರು. ಪ್ರಧಾನ ಮಂತ್ರಿಗಳು ಆಗಮಿಸುವ ಹೆಲಿಕಾಪ್ಟರ್ ಸುರಕ್ಷಿತವಾಗಿ ಭೂಸ್ಪರ್ಶವಾಗಲು ವ್ಯವಸ್ಥಿತ ಹೆಲಿಪ್ಯಾಡ್‌ಗೆ ಕ್ರಮ ವಹಿಸಬೇಕೆಂದು ಅವರು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಚಾಮರಾಜನಗರ ಜಿಲ್ಲಾಧಿಕಾರಿ ಡಾ.ರಮೇಶ್, ದಕ್ಷಿಣ ವಲಯ ಐಜಿಪಿ ಪ್ರವೀಣ್ ಮಧುಕರ್ ಪವಾರ್, ಎಸ್ಪಿ ಪದ್ಮಿನಿ ಸಾಹೋ, ಡಿವೈಎಸ್ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಸ್ಥಳ ಪರಿಶೀಲನೆ ವೇಳೆ ಉಪಸ್ಥಿತರಿದ್ದರು. ನಂತರ ಅಲೋಕ್ ಕುಮಾರ್ ಬಂಡೀಪುರದ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್‌ನಲ್ಲಿ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಪ್ರಧಾನಿಗಳು ಆಗಮಿಸುತ್ತಿರುವುದರಿಂದ ಏಪ್ರಿಲ್ 9ರಂದು ಬೆಳಗ್ಗೆ ●7ನೇ ಪುಟಕ್ಕೆ



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ಕಾನೂನು–ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ (ಹಸಿರು ಸಮವಸ್ತ್ರಧಾರಿ) ಮಂಗಳವಾರ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹೆಲಿಪ್ಯಾಡ್‌ಗೆ ಗುರ್ತಿಸಿರುವ ಸ್ಥಳ ಪರಿಶೀಲಿಸಿದರು.

ಆರ್‌ಎಸ್‌ಎಸ್ ಕೃಪಾ ಪೋಷಿತ ನಾಟಕ ಮಂಡಳಿಯ ನಟ ಛಲವಾದಿ ನಾರಾಯಣಸ್ವಾಮಿ

ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ವ್ಯಂಗ್ಯ



ಮೈಸೂರು,ಏ.4(ಪಿಎಂ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವಿನಾಕಾರಣ ಟೀಕಿಸುತ್ತಿರುವ ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣಸ್ವಾಮಿಯವರು ಆರ್‌ಎಸ್‌ಎಸ್ ಕೃಪಾ ಪೋಷಿತ ನಾಟಕ ಮಂಡಳಿಯ ನಟ ಎಂದು ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್ ವ್ಯಂಗ್ಯವಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಛಲವಾದಿ ನಾರಾಯಣಸ್ವಾಮಿ ಮೊನ್ನೆ ಮೈಸೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ಸಿದ್ದರಾಮಯ್ಯ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಸ್ಪರ್ಧೆಗೆ ಕ್ಷೇತ್ರ ಆಯ್ಕೆ ಮಾಡಿಕೊಳ್ಳುವ ಸಂಬಂಧ ಸಿದ್ದರಾಮಯ್ಯ ಅವರನ್ನು ಅಲೆಮಾರಿ ಎಂದಿದ್ದು, ಇದು ಖಂಡನಾರ್ಹ. ಬಿಜೆಪಿ ನಾಯಕ ಪ್ರಧಾನಿ ನರೇಂದ್ರ ಮೋದಿಯವರು ಗುಜರಾತಿನ ವಡೋದರ ಹಾಗೂ ವಾರಾಣಸಿ ಸೇರಿದಂತೆ ಎರಡು ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿರಲಿಲ್ಲವೇ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯನವರು ರಾಜ್ಯದ ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಗೆಲ್ಲುತ್ತಾರೆ. ಮೈಸೂರು ನಗರಕ್ಕೆ ಭೇಟಿ ನೀಡಿದಾಗಲೆಲ್ಲಾ ಛಲವಾದಿ ನಾರಾಯಣಸ್ವಾಮಿಯವರು ವಿನಾಕಾರಣ ಸಿದ್ದರಾಮಯ್ಯರನ್ನು ಟೀಕಿಸುತ್ತಾರೆ. ಆದರೆ ಮೈಸೂರಿನಲ್ಲಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಳಿಸಲು ತಮ್ಮದೇ ಬಿಜೆಪಿ ಸರ್ಕಾರದ ಗಮನ ಸೆಳೆಯಲಿಲ್ಲ ಎಂದು ದೂರಿದರು.

ಬಿಜೆಪಿ ಸರ್ಕಾರ ಖಾಸಗೀಕರಣದ ಮೂಲಕ ಎಸ್‌ಸಿ, ಎಸ್‌ಟಿ, ಓಬಿಸಿ ಹಾಗೂ ಅಲ್ಪಸಂಖ್ಯಾತರ ಉದ್ಯೋಗ ಮೀಸಲಾತಿ ಕಸಿದುಕೊಳ್ಳುತ್ತಿದೆ. ಆದರೂ ಈ ಬಗ್ಗೆ ಧ್ವನಿ ಎತ್ತದೇ ಛಲವಾದಿ ನಾರಾಯಣಸ್ವಾಮಿ ಅಧಿಕಾರಕ್ಕಾಗಿ ಮೌನ ವಹಿಸಿದ್ದಾರೆ. ಇವರು ಆರ್‌ಎಸ್‌ಎಸ್ ಕೈಗೊಂಬೆಯಾಗಿ ದಲಿತರ ಸ್ವಾಭಿಮಾನಕ್ಕೆ ಧಕ್ಕೆ ತರುವ ಸ್ವಾರ್ಥ ವ್ಯಕ್ತಿಯಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಪಕ್ಷದ ಮುಖಂಡರಾದ ಪ್ರವೀಣ್‌ಕುಮಾರ್, ಕುರುಬಾರಹಳ್ಳಿ ಪ್ರಕಾಶ್, ಶಶಿಕುಮಾರ್ ಗೋಷ್ಠಿಯಲ್ಲಿದ್ದರು.

ಜೂನ್ 24, ರಾಷ್ಟ್ರೀಯ ಲೋಕ್ ಅದಾಲತ್

ಮೈಸೂರು,ಏ.4– ಜೂನ್ 24ರಂದು ರಾಜ್ಯಾದ್ಯಂತ ರಾಷ್ಟ್ರೀಯಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿದೆ. ಈ ಲೋಕ್ ಅದಾಲತ್‌ನಲ್ಲಿ ಸಾರ್ವಜನಿಕರು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಇಚ್ಛಿಸಿದ್ದಲ್ಲಿ ಮುಂಚಿತವಾಗಿ ಸಂಬಂಧಪಟ್ಟ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ/ತಾಲೂಕು ಕಾನೂನು ಸೇವೆಗಳ ಸಮಿತಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು.

ಲೋಕ್ ಅದಾಲತ್‌ನಲ್ಲಿ ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ ಪ್ರಕರಣಗಳು, ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು, ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿನ ಪ್ರಕರಣಗಳು, ಖಾಯಂ ಜನತಾ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು, ಚೆಕ್ಕು ಅಮಾನ್ಯದ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ಕಾರ್ಮಿಕ ವಿವಾದಗಳು, ವಿದ್ಯುತ್, ನೀರಿನ ಶುಲ್ಕಗಳು, ಭೂಸ್ವಾಧೀನ ಪ್ರಕರಣಗಳು, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಸೇವಾ ಪಿಂಚಣಿ ಪ್ರಕರಣಗಳು, ಸಾರ್ವಜನಿಕ ಉಪಯುಕ್ತತೆ ಸೇವೆಗಳ ಸಂಬಂಧಿತ ಪ್ರಕರಣಗಳು, ರಾಜಿಯಾಗಬಲ್ಲ ಸಿವಿಲ್ ಮತ್ತು ಇತರೆ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ www.kslsa.kar.nic.in ಅಥವಾ ನಿಮ್ಮ ಹತ್ತಿರದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ತಾಲೂಕು ಕಾನೂನು ಸೇವೆಗಳ ಸಮಿತಿಗಳ ಸದಸ್ಯ ಕಾರ್ಯದರ್ಶಿ ಅವರನ್ನು (ಸಹಾಯವಾಣಿ ಸಂಖ್ಯೆ : 1800–425–90900/1800–425–0131) ಸಂಪರ್ಕಿಸಬಹುದಾಗಿದೆ.

ಪ್ರಧಾನಿ ಮೋದಿ ಮೈಸೂರು ಭೇಟಿ: ಓವೆಲ್ ಮೈದಾನದಲ್ಲಿ ಹೆಲಿಪ್ಯಾಡ್

ಎಸ್‌ಪಿಜಿ ಅಧಿಕಾರಿಗಳೊಂದಿಗೆ ಸ್ಥಳೀಯ ಅಧಿಕಾರಿಗಳ ಪರಿಶೀಲನೆ



ಮೈಸೂರು,ಏ.4(ಎಸ್‌ಪಿಎನ್)–ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಏ.8 ಮತ್ತು ಏ.9 ರಂದು ಮೈಸೂರು ಮತ್ತು ಬಂಡೀಪುರದಲ್ಲಿ ಹಮ್ಮಿಕೊಂಡಿರುವ ವಿವಿಧ ಕಾರ್ಯಕ್ರಮದಲ್ಲಿ ಭಾಗಿಯಾಗುವ ಹಿನ್ನೆಲೆಯಲ್ಲಿ ಮೈಸೂರು ವಿವಿ ಅಥ್ಲೆಟಿಕ್ ಮೈದಾನ(ಓವೆಲ್)ದಲ್ಲಿ ತಾತ್ಕಾಲಿಕ ಹೆಲಿಪ್ಯಾಡ್ ನಿರ್ಮಾಣಕ್ಕೆ ಮೈಸೂರು ಜಿಲ್ಲಾಡಳಿತ ಸಿದ್ಧತೆ ನಡೆಸಿದೆ.

ಈ ಹಿನ್ನೆಲೆಯಲ್ಲಿ ಅಪರ ಜಿಲ್ಲಾಧಿಕಾರಿ ಕವಿತಾ, ಗುಪ್ತ ವಾರ್ತೆ ಎಸ್ಪಿ ಅಮರನಾಥ್ ರೆಡ್ಡಿ, ಅರಣ್ಯಾಧಿಕಾರಿ ಮಾಲತಿ ಪ್ರಿಯಾ, ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಮುತ್ತುರಾಜ್, ಸಂಚಾರ ಮತ್ತು ಅಪರಾಧ ವಿಭಾಗದ ಡಿಸಿಪಿ ಜಾಹ್ನವಿ, ಮೈಸೂರು ಡಿಎಚ್‌ಓ ಡಾ.ಪ್ರಸಾದ್ ಸೇರಿದಂತೆ ಇತರೆ ಅಧಿಕಾರಿಗಳು, ಎಸ್‌ಪಿಜಿ ಅಧಿಕಾರಿ ನವೀನ್ ಕುಮಾರ್ ಮೆಹ್ತಾ ನೇತೃತ್ವದಲ್ಲಿ ಓವೆಲ್ ಮೈದಾನವನ್ನು ಸುಮಾರು ಅರ್ಧಗಂಟೆ ಪರಿಶೀಲನೆ ನಡೆಸಿದರು. ನಂತರ ಕರ್ನಾಟಕ ರಾಜ್ಯ ಮುಕ್ತ ವಿವಿ ಆವರಣದ ಘಟಿಕೋತ್ಸವ ಭವನದಲ್ಲಿ ಅಧಿಕಾರಿಗಳ ಸಭೆ ನಡೆಸಿ, ಪ್ರಧಾನಿ ನರೇಂದ್ರ ಮೋದಿ ಅವರು ಮೈಸೂರಿನ ವಿವಿಧ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಈ ವೇಳೆ ಪ್ರಧಾನಿ ಭದ್ರತೆ ಸೇರಿದಂತೆ ಕಾರ್ಯಕ್ರಮಗಳ ಬಗ್ಗೆ ಈಗಾಗಲೇ ವಹಿಸಿರುವ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡಿದರೆನ್ನಲಾಗಿದೆ.

ಆಯೋಗದಿಂದ ಅನುಮತಿ: ಪ್ರಧಾನಿ ಮೋದಿ ಏ.9ರಂದು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಬಂಡೀಪುರದಲ್ಲಿ ಅರಣ್ಯ ಇಲಾಖೆಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಮಾದರಿ ನೀತಿಸಂಹಿತೆ ಜಾರಿಯಲ್ಲಿರುವುದರಿಂದ, ರಾಜ್ಯ ಚುನಾವಣಾ ಆಯೋಗದಿಂದ ಅನುಮತಿ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜಾನುವಾರು ವ್ಯಾಪಾರಿ ಹತ್ಯೆ: ಪುನೀತ್ ಕೆರೆಹಳ್ಳಿ ಬಂಧನಕ್ಕಾಗಿ ನಾಲ್ಕು ತಂಡ ರಚನೆ

ಬೆಂಗಳೂರು: ಕನಕಪುರದ ಸಾತನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ಮುಂಜಾನೆ ಜಾನುವಾರು ಸಾಗಟ ವಾಹನದ ಸಹಾಯಕ ಚಾಲಕ ಇದ್ರೀಸ್ ಪಾಷಾ (39) ಎಂಬಾತನನ್ನು ಹತ್ಯೆಗೈದ ಆರೋಪ ಹೊತ್ತಿರುವ ಬಲಪಂಥೀಯ ಕಾರ್ಯಕರ್ತ ಪುನಿತ್ ಕೆರೆಹಳ್ಳಿ ಬಂಧಿಸಲು ರಾಮನಗರ ಜಿಲ್ಲಾ ಪೊಲೀಸರು 4 ತಂಡಗಳನ್ನು ರಚಿಸಿದ್ದಾರೆ.

ಕೇಂದ್ರ ವಲಯದ ಪೊಲೀಸ್ ಮಹಾನಿರೀಕ್ಷಕ (ಐಜಿಪಿ) ಬಿ.ಆರ್. ರವಿಕಾಂತೇಗೌಡ ಮಾತನಾಡಿ, ಆರೋಪಿಗಳನ್ನು ಇನ್ನೂ ಬಂಧಿಸಿಲ್ಲ. ಫೋರೆನ್ಸಿಕ್ ಮೆಡಿಸಿನ್ ವಿಭಾಗದ ವೈದ್ಯರ ತಂಡ ಮರಣೋತ್ತರ ಪರೀಕ್ಷೆಯನ್ನು ನಡೆಸಿದೆ ಮತ್ತು (ಪಾಶಾ) ಸಾವಿಗೆ ನಿಖರವಾದ ಕಾರಣ ತಿಳಿಯಲು ವರದಿಗಾಗಿ ಕಾಯುತ್ತಿದ್ದೇವೆ. ಮರಣೋತ್ತರ ಪರೀಕ್ಷೆಯ ವರದಿಯಿಂದ ಸಾವಿಗೆ ನಿಖರವಾದ ಕಾರಣ ತಿಳಿದುಬರಲಿದೆ ಎಂದರು.

ಸಾತನೂರು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಒಂದು ತಂಡ ರಚನೆಯಾಗಿದ್ದರೆ, ಉಪವಿಭಾಗದ ಡಿವೈಎಸ್ಪಿ ಮತ್ತೊಂದು ತಂಡದ ನೇತೃತ್ವ ವಹಿಸಿದ್ದಾರೆ. ಉಪವಿಭಾಗದ ಪೊಲೀಸರು ನೇತೃತ್ವದಲ್ಲಿ ಮತ್ತೆರಡು ತಂಡ ರಚಿಸಲಾಗಿದೆ. ಸಾತನೂರು ಪೊಲೀಸ್ ಠಾಣೆಯಿಂದ ಸ್ವಲ್ಪ ದೂರದಲ್ಲಿ ಪಾಷಾ ಶವ ಪತ್ತೆಯಾದ ನಂತರ ಕೆರೆಹಳ್ಳಿ ಸೇರಿ ನಾಲ್ವರ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ.

ಉದ್ಯಮಿ ಮುಕೇಶ್ ಅಂಬಾನಿ ಮತ್ತೆ ಏಷ್ಯಾದ ಶ್ರೀಮಂತ ವ್ಯಕ್ತಿ



ಮುಂಬೈ: ಉದ್ಯಮಿ ಮುಕೇಶ್ ಅಂಬಾನಿ ಮತ್ತೆ ಏಷ್ಯಾದ ಅತ್ಯಂತ ಶ್ರೀಮಂತ ವ್ಯಕ್ತಿ ಎಂಬ ಪಟ್ಟ ಗಿಟ್ಟಿಸಿದ್ದಾರೆ. ಮಂಗಳವಾರ ಬಿಡುಗಡೆಯಾಗಿರುವ ಫೋರ್ಬ್ಸ್ ಬಿಲಿಯನೇರ್‌ಗಳ ಪಟ್ಟಿಯಲ್ಲಿ ಮುಕೇಶ್ ಅಗ್ರ ಸ್ಥಾನ ಕಾಯ್ದುಕೊಂಡಿದ್ದಾರೆ. ಹಿಂಡೆನ್‌ಬರ್ಗ್ ವರದಿ ಬಳಿಕ ಕಂಪನಿಗಳ ಷೇರುಗಳ ಬೆಲೆ ಕುಸಿತದಿಂದ ತತ್ತರಿಸಿರುವ ಅದಾನಿ 24ನೇ ಸ್ಥಾನಕ್ಕೆ ದೂಡಲ್ಪಟ್ಟಿದ್ದಾರೆ. 'ಜನವರಿ 24ರಂದು ಅದಾನಿ ಅವರ ಸಂಪತ್ತಿನ ನಿವ್ವಳ ಮೌಲ್ಯ ಸುಮಾರು 126 ಬಿಲಿಯನ್ ಡಾಲರ್ ಇತ್ತು. ಆಗ ಅವರು ವಿಶ್ವದ 3ನೇ ಶ್ರೀಮಂತ ವ್ಯಕ್ತಿಯಾಗಿದ್ದರು. ಹಿಂಡೆನ್‌ಬರ್ಗ್ ರಿಸರ್ಚ್ ವರದಿ ಬಳಿಕ ಅವರ ಕಂಪನಿಗಳ ಷೇರುಗಳ ಮೌಲ್ಯ ಕುಸಿದಿದೆ' ಎಂದು ಫೋರ್ಬ್ಸ್ ಹೇಳಿದೆ. ಅದಾನಿ ಸಂಪತ್ತಿನ ನಿವ್ವಳ ಮೌಲ್ಯವು ಈಗ 47.2 ಬಿಲಿಯನ್ ಡಾಲರ್ ಆಗಿದ್ದು, ಅಂಬಾನಿ ನಂತರದ ಎರಡನೇ ಶ್ರೀಮಂತ ಭಾರತೀಯ ರಾಗಿದ್ದಾರೆ. 83.4 ಬಿಲಿಯನ್ ಡಾಲರ್‌ನಿವ್ವಳ ಮೌಲ್ಯದ ಸಂಪತ್ತಿನೊಂದಿಗೆ, 65 ವರ್ಷದ ಅಂಬಾನಿ ವಿಶ್ವದ ಬಿಲಿಯನೇರ್‌ಗಳ ಪಟ್ಟಿಯಲ್ಲಿ 9ನೇ ಸ್ಥಾನದಲ್ಲಿದ್ದಾರೆ.

ಈ ಬಾರಿ ಜೆಡಿಎಸ್‌ಗೆ ಜನಾಶೀರ್ವಾದ

ಪಕ್ಷದ ಮುಖಂಡ ಅಯೂಬ್ ಖಾನ್ ವಿಶ್ವಾಸ



ಮೈಸೂರು,ಏ.4(ಪಿಎಂ)–ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಜನಾಶೀರ್ವಾದ ದೊರೆಯಲಿದ್ದು, ಅದರಲ್ಲೂ ರಾಜ್ಯದ ಮುಸ್ಲಿಂ ಸಮುದಾಯದಿಂದ ವ್ಯಾಪಕ ಬೆಂಬಲ ವ್ಯಕ್ತವಾಗಲಿದೆ ಎಂದು ಜೆಡಿಎಸ್ ಮುಖಂಡ ಅಯೂಬ್ ಖಾನ್ ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಜನತೆ ಬಿಜೆಪಿ ದುರಾಡಳಿತ, ಭ್ರಷ್ಟಾಚಾರ ನೋಡಿ ಬೇಸತ್ತಿದ್ದಾರೆ. ಜೊತೆಗೆ ಕಾಂಗ್ರೆಸ್ ಬಗ್ಗೆಯೂ ಜನರಲ್ಲಿ ವಿಶ್ವಾಸವಿಲ್ಲ. ಬಿಜೆಪಿ ಮುಸ್ಲಿಂ ಸಮುದಾಯವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದರೆ, ಕಾಂಗ್ರೆಸ್ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡಿಲ್ಲ. ಹಾಗಾಗಿ ಈ ಬಾರಿ ಜೆಡಿಎಸ್ ಬೆಂಬಲಿಸಲು ಮುಸ್ಲಿಂ ಸಮುದಾಯ ಮುಂದಾಗಿದೆ ಎಂದು ಹೇಳಿದರು. ಪಕ್ಷದ ಹಿರಿಯ ನಾಯಕರು ಬಯಸಿದರೆ ಎನ್‌ಆರ್ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಮುಖಂಡ ಸರ್ದಾರ್ ಸುದ್ದಿಗೋಷ್ಠಿಯಲ್ಲಿದ್ದರು.

ಡಾ.ಅಂಬೇಡ್ಕರ್ ಜನಿಸದೇ ಇದ್ದಿದ್ದರೆ ನಾವಿನ್ನೂ ಗುಲಾಮರಾಗಿರಬೇಕಿತ್ತು

● ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಅಭಿಮತ ● ಹಲವರು ಕಾಂಗ್ರೆಸ್ ಸೇರ್ಪಡೆ



ಮೈಸೂರು: ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಶೆಟ್ಟನಾಯಕನಹಳ್ಳಿ ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾವಿನಹಳ್ಳಿ ಸಿದ್ದೇಗೌಡ ಸಮ್ಮುಖದಲ್ಲಿ ಜನತಾದಳ ಮುಖಂಡರಾದ ಪುಟ್ಟರಾಜು, ರಾಧ, ಅಭಿಷೇಕ್, ಕಾಳಿಂಗ, ನಂದೀಶ, ವಿನೂತ, ದೊಡ್ಡ ಹನುಮಯ್ಯ, ಬಸವರಾಜು, ಶ್ರೀಕಂಠ, ಸುಜಾತ, ಬಸವಣ್ಣ, ಗೌರಿಶಂಕರ್, ಮಧುಕುಮಾರ್ ಕಾಂಗ್ರೆಸ್ ಸೇರ್ಪಡೆಗೊಂಡರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಕೆ.ಮರೀಗೌಡ ಮಾತನಾಡಿ, ಕಾಂಗ್ರೆಸ್ ಪಕ್ಷಕ್ಕೆ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಇತಿಹಾಸ ಇದೆ. 65 ವರ್ಷಗಳಲ್ಲಿ ದೇಶಾದ್ಯಂತ ಮೂಲಭೂತ ಸೌಕರ್ಯ ನೀಡಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಸರ್ವಜನಾಂಗದ ನಾಯಕರು. ಅವರು ದೇಶದಲ್ಲಿ ಹುಟ್ಟದಿದ್ದರೆ ನಾವು ಇನ್ನೂ ಗುಲಾಮಗಿರಿಯಲ್ಲೇ ಬದುಕಬೇಕಾಗಿತ್ತು ಎಂದರು.

ಬಿಜೆಪಿಯವರು ನಾವು ಸಂವಿಧಾನವನ್ನು ಬದಲಾಯಿಸುವುದಕ್ಕೆ ಅಧಿಕಾರಕ್ಕೆ ಬಂದಿರೋದು ಎನ್ನುತ್ತಾರೆ. ಇದನ್ನು ಎಲ್ಲರೂ ಖಂಡಿಸಬೇಕು. ಬಿಜೆಪಿ ಮತ್ತು ಜನತಾದಳದವರಿಗೆ ಒಂದು ಓಟನ್ನು ಹಾಕಬೇಡಿ. 2018ರ ಚುನಾವಣೆಯಲ್ಲಿ ಸಿದ್ದರಾಮಯ್ಯನವರಿಗೆ ಆದ ಸೋಲಿನ ನೋವನ್ನು, ಮಾವಿನಹಳ್ಳಿ ಸಿದ್ದೇಗೌಡರವರನ್ನು ಗೆಲ್ಲಿಸುವ ಮೂಲಕ ತೀರಿಸಿಕೊಳ್ಳಬೇಕು ಎಂದು ಕಾರ್ಯಕರ್ತರನ್ನು ಹುರಿದುಂಬಿಸಿದರು.

ಕಾಂಗ್ರೆಸ್ ಪಕ್ಷದ ಸಂಭಾವ್ಯ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡ ಮಾತನಾಡಿದರು. ಸಿದ್ದರಾಮಯ್ಯನವರ ತತ್ವ-ಸಿದ್ಧಾಂತ ಒಪ್ಪಿ, ಯಾವುದೇ ಷರತ್ತಿಲ್ಲದೆ ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದೇನೆ. ನಾನು ಗ್ರಾಮ ಪಂಚಾಯಿತಿ ಸದಸ್ಯನಾಗಿ, ಉಪಾಧ್ಯಕ್ಷನಾಗಿ, ಅಧ್ಯಕ್ಷನಾಗಿ, ಎಪಿಎಂಸಿ ಅಧ್ಯಕ್ಷನಾಗಿ, ಮೈಮುಲ್ ಅಧ್ಯಕ್ಷನಾಗಿ ಕೆಳಹಂತದಿಂದ ಕೆಲಸ ಮಾಡಿಕೊಂಡು ಬಂದಿದ್ದೇನೆ. ನಾನು ಕೂಡ ರೈತ ಕುಟುಂಬದವನಾಗಿದ್ದು, ಕೃಷಿ ಮಾಡುವುದರ ಜೊತೆಗೆ ಗ್ರಾಮೀಣ ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದೇನೆ. ಈ ಬಾರಿ ಚುನಾವಣೆಯಲ್ಲಿ ನನ್ನನ್ನು ಗೆಲ್ಲಿಸುವಂತೆ ಮನವಿ ಮಾಡಿಕೊಂಡರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಚೆನ್ನವೀರಪ್ಪ, ಸಿದ್ದಪ್ಪ, ಕಾಳಿಂಗಯ್ಯ, ಈಶ್ವರಚಾರಿ, ಪ್ರಭಾ, ರವಿ, ನಾಗಣ್ಣ, ರಾಜೇಗೌಡ, ಜಯರಾಂ ಇನ್ನಿತರರು ಉಪಸ್ಥಿತರಿದ್ದರು.

ಏ.8, 9ರಂದು ರೋಬೋಟಿಕ್ಸ್ ತಂತ್ರಜ್ಞಾನ ಕುರಿತು ಮಕ್ಕಳಿಗೆ ಉಚಿತ ಕಾರ್ಯಾಗಾರ



ಮೈಸೂರು,ಏ.4(ಪಿಎಂ)– ಎಕ್ಲೇಷಿಯಾ ಅಡ್ವಾನ್ಸ್ಡ್ ಕಂಪ್ಯೂಟರ್ ಟೆಕ್ನಾಲಜಿ ಮತ್ತು ಸ್ಟೆಂಪೀಡಿಯಾ ಜಂಟಿ ಆಶ್ರಯದಲ್ಲಿ 6ರಿಂದ 16 ವರ್ಷದೊಳಗಿನ ಮಕ್ಕಳಿಗೆ 'ಕೃತಕ ಬುದ್ಧಿವಂತಿಕೆ ಮತ್ತು ರೋಬೋಟಿಕ್ಸ್ ತಂತ್ರಜ್ಞಾನ' ಕುರಿತು ಏ.8 ಮತ್ತು 9ರಂದು ಉಚಿತ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಎಕ್ಲೇಷಿಯಾ ಅಡ್ವಾನ್ಸ್ಡ್ ಕಂಪ್ಯೂಟರ್ ಟೆಕ್ನಾಲಜಿ ಸಂಸ್ಥೆ ನಿರ್ದೇಶಕಿ ಸ್ನೇಹಲಕ್ಷ್ಮೀ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದೇವರಾಜ ಮೊಹಲ್ಲಾದಲ್ಲಿರುವ ಎಕ್ಲೇಷಿಯಾ ಅಡ್ವಾನ್ಸ್ಡ್ ಕಂಪ್ಯೂಟರ್ ಟೆಕ್ನಾಲಜಿ ಸಭಾಂಗಣದಲ್ಲಿ ಉಚಿತ ಕಾರ್ಯಾಗಾರ ನಡೆಯಲಿದ್ದು, 50 ಮಕ್ಕಳು ಪಾಲ್ಗೊಳ್ಳಲು ಅವಕಾಶವಿದೆ. ನೋಂದಣಿಗಾಗಿ ಮೊ.ಸಂ. 888 40 18883 ಅನ್ನು ಸಂಪರ್ಕಿಸಬಹುದು. ಜೊತೆಗೆ ಏ.10ರಿಂದ 30ರವರೆಗೆ ಮಕ್ಕಳಿಗಾಗಿ ರೋಬೋಟಿಕ್ಸ್ ತಂತ್ರಜ್ಞಾನ ಕುರಿತು ತರಬೇತಿ ಶಿಬಿರ ಏರ್ಪಡಿಸಲಾಗಿದೆ. ಶಿಬಿರಕ್ಕೆ 2 ಸಾವಿರ ರೂ. ಶುಲ್ಕ ನಿಗದಿ ಮಾಡಲಾಗಿದೆ ಎಂದರು. ಸ್ಟೆಂಪೀಡಿಯಾ ಪ್ರತಿನಿಧಿ ಕಿರಣ್, ತರಬೇತುದಾರರಾದ ಧನ್ಯಶ್ರೀ ರಾಜಶೇಖರ್, ತರಬೇತಿ ಪಡೆದಿರುವ ಮಕ್ಕಳು ಗೋಷ್ಠಿಯಲ್ಲಿದ್ದರು.



ಮೈಸೂರಿನ ದಿವಾನ್ಸ್ ರಸ್ತೆಯಲ್ಲಿ ಭಗವಾನ್ ಮಹಾವೀರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡ ಭಕ್ತಿ ನಮನ ಸಲ್ಲಿಸಿದರು. ಈ ವೇಳೆ ಜೈನ್ ಸಮಾಜದ ಮುಖಂಡರಾದ ಕಾಂತಿಲಾಲ್, ದಿನೇಶ್, ಕಮಲೇಶ್, ಶಾಂತಿಲಾಲ್ ರಮೇಶ್, ಮನೋಹರ್ ರಾಜು, ಮಲ್ಲು, ಆರ್.ವಿಜಯ್, ರಾಜೇಶ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ತಾಲೂಕಿನ ಪುರ ಗ್ರಾಮದ ಮಠದಲ್ಲಿ ನಡೆದ ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಉದ್ಯಮಿ ಹಾಗೂ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಮಠದ ಚಂದ್ರಶೇಖರ ಸ್ವಾಮೀಜಿ ಆತ್ಮೀಯವಾಗಿ ಅಭಿನಂದಿಸಿ, ಆಶೀರ್ವದಿಸಿದರು.

ಅಪರಿಚಿತ ಶವ ಪತ್ತೆ



ಮೈಸೂರು, ಏ.4–ಏ.2ರಂದು ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನದಲ್ಲಿನ ದಾಸೋಹ ಭವನದ ಹತ್ತಿರ ಸಂಜೆ 5 ಗಂಟೆಯಲ್ಲಿ ಮೃತಪಟ್ಟ ಅಪರಿಚಿತ ವ್ಯಕ್ತಿ ಶವ ದೊರೆತಿದ್ದು, ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತನ ಚಹರೆ: ಸುಮಾರು 55–60 ವರ್ಷವಿರುವ ಈ ವ್ಯಕ್ತಿಯು 5.4 ಅಡಿ ಎತ್ತರ, ಸಾಧಾರಣ ಮೈಕಟ್ಟನ್ನು ಹೊಂದಿರುತ್ತಾರೆ. ಎಣ್ಣೆಗೆಂಪು ಬಣ್ಣ, ಕೋಲು ಮುಖ, ಕಪ್ಪು ಬಿಳಿ ತಲೆಕೂದಲು ಇದ್ದು, ಎಡಭಾಗದ ಎದೆಯಲ್ಲಿ ಆಪರೇಷನ್ ಆಗಿರುವ ಹಳೆ ಗಾಯದ ಗುರುತು ಇದೆ. ಈ ವ್ಯಕ್ತಿಯು ಬಿಳಿ ಬಣ್ಣದ ಶರ್ಟ್, ಹಸಿರು ನೀಲಿ ಬಣ್ಣದ ಲುಂಗಿ ಧರಿಸಿರುತ್ತಾರೆ. ವಾರಸುದಾರರು ಇದ್ದಲ್ಲಿ ಮೈಸೂರು ಎಸ್.ಪಿ (ದೂ.ಸಂ:0821–2520040), ಕಂಟ್ರೋಲ್ ರೂಂ (ದೂ.ಸಂ:0821–2444800), ನಂ.ಗೂಡು ಪಟ್ಟಣ ಪೊಲೀಸ್ ಠಾಣೆ (ದೂ.ಸಂ:08221–228383) ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.4.2023 ಬುಧವಾರ, ಮಳೆ ನಕ್ಷತ್ರ: ರೇವತಿ, 31.03.2023 ರಿಂದ 13.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಚತುರ್ದಶಿ, ನಕ್ಷತ್ರ: ಉತ್ತರಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.40 ಅರಿವಿನ ಶಿಖರ, ಗಾಯನ– ಪಿ.ಎಸ್. ರಂಜನಿ, ಅಂಬಯ್ಯನುಲಿ, ವ್ಯಾಖ್ಯಾನ– ಡಾ.ಲತಾ ಮೈಸೂರು, 9.00 ಮನೋನಂದನ–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ ಮೈಸೂರು ಪ್ರಾಯೋಜಿತ ಕಾರ್ಯಕ್ರಮ, 10.00 ಹಿಂದೂಸ್ಥಾನಿ ಸಂಗೀತ–ವಿಶ್ವ ಮೋಹನ ಭಟ್–ಮೋಹನ ವೀಣಾ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಎನ್.ಶ್ರೀನಾಥ್, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಕನ್ನಡದ ಕಂಪು ಹೇಗೆ ಹರಡೋದು", ರಚನೆ–ಇ.ಆರ್. ರಾಮಚಂದ್ರನ್, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.00 ರಂಗಗೀತೆಗಳು–ಪ್ರೇಮಲೀಲಾ ಹಾಗೂ ಮಹಾಭಾರತ ನಾಟಕದ ಹಾಡುಗಳು, 1.20 ಭಾವಗೀತೆ–ಜಯಂತಿ ವಿ.ಭಟ್, 3.00 ಲಯ ಸಂಭ್ರಮ– "ಜನಪದ ಲಯಕ್ಕೆ ಹೊಸ ಜಾಯಮಾನ", ಭಾಗವಹಿಸುವವರು ಖ್ಯಾತ ಹಿನ್ನಲೆ ಗಾಯಕರಾದ ರಘು ದೀಕ್ಷಿತ್, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ. ಭಾಗವಹಿಸುವವರು–ಲೇಖಕಿ, ನಿವೃತ್ತ ಆಂಗ್ಲ ಉಪನ್ಯಾಸಕಿ ಹಾಗೂ ರಂಗಭೂಮಿ ಕಲಾವಿದೆ ಆರ್.ಪೂರ್ಣಿಮಾ, 6.50 ಕೃಷಿರಂಗ–ಕಿಸಾನ್‌ವಾಣಿ–ಬಹುಬೆಳೆ ಪದ್ಧತಿ ಹಾಗೂ ಫಲವತ್ತತೆ ಕುರಿತು ಆರ್.ರೋಹಿತ್ ಅವರೊಂದಿಗೆ ಸಂದರ್ಶನ, 9.30 ಹಿಂದೂಸ್ಥಾನಿ ಸಂಗೀತ–ರಶೀದ್ ಖಾನ್–ಸಿತಾರ್ ವಾದನ

■ **ಬಿಜಿಎಸ್ ಇಂಟರ್‌ನ್ಯಾಷನಲ್ ಫೌಂಡೇಷನ್ ಫಾರ್ ಹೆಲ್ತ್ ಸೈನ್ಸಸ್:** ಪದವೀಧರರ ದಿನಾಚರಣೆ ಹಾಗೂ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ, ಸಾನ್ನಿಧ್ಯ: ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸಮ್ಮುಖ: ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ವಿ.ಆರ್.ಶೈಲಜಾ, ಗೌರವ ಅತಿಥಿಗಳು: ಮೈಸೂರು ಮೆಡಿಕಲ್ ಕಾಲೇಜು ಡೀನ್ ಡಾ. ಕೆ.ಆರ್.ದಾಕ್ಷಾಯಿಣಿ, ಅಪೋಲೋ ಬಿಜಿಎಸ್ ಆಸ್ಪತ್ರೆ ಉಪಾಧ್ಯಕ್ಷ ಎನ್.ಜಿ. ಭರತೀಶ ರೆಡ್ಡಿ, ಸ್ಥಳ: ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ, ಕುವೆಂಪುನಗರ, ಬೆಳಗ್ಗೆ 10ಕ್ಕೆ

■ **ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ :** ಪ್ರಾಥಮಿಕ ಆರೋಗ್ಯಕರ ದಂತ ರಕ್ಷಣೆಯ ಶಿಕ್ಷಣ ಕುರಿತು ಶಿಕ್ಷಕರಿಗೆ ಕಾರ್ಯಾಗಾರ, ಮುಖ್ಯ ಅತಿಥಿಗಳು : ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪ್ರಸಾದ್, ಡಾ. ಸತ್ಯಪ್ರಕಾಶ್, ಜೆಎಸ್‌ಎಸ್ ಎಹೆಚ್‌ಇಆರ್ ಕುಲಸಚಿವ ಡಾ. ಬಿ. ಮಂಜುನಾಥ್, ಜೆಎಸ್‌ಎಸ್ ಡಿಸಿಹೆಚ್ ಪ್ರಾಂಶುಪಾಲರಾದ ಡಾ. ಎಂ.ಆರ್. ದಾಕ್ಷಾಯಿಣಿ, ಡಾ. ಬಿ. ನಂದನಾಲ್, ಸ್ಥಳ: ದಂತ ವೈದ್ಯಕೀಯ ಕಾಲೇಜಿನ ಗೌರಿಶಂಕರ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ:** ವಿಶ್ವ ರಂಗಭೂಮಿ ದಿನಾಚರಣೆ ಮತ್ತು ಪ್ರದರ್ಶನ ಕಲೆಗಳು: ಶಿಕ್ಷಣ ಮತ್ತು ಪ್ರಯೋಗ ಕುರಿತು 2 ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ, ಅಧ್ಯಕ್ಷತೆ: ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಉದ್ಘಾಟನೆ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಕುಲಪತಿ ಡಾ.ಶರಣಪ್ಪ ವಿ. ಹಲಸೆ, ಉಪಸ್ಥಿತರು: ಸಂಗೀತ ವಿವಿ ಕುಲಸಚಿವ ಪ್ರೊ.ದೇವರಾಜ, ಸ್ಥಳ: ಕೆಎಸ್‌ಜಿಎಚ್ ವಿಶ್ವವಿದ್ಯಾಲಯ ಆವರಣ, ಬೆಳಗ್ಗೆ 10.45ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಪ್ರಶಸ್ತಿ ಪ್ರದಾನ: ಜೆಎಸ್‌ಎಸ್ ಮಹಾವಿದ್ಯಾಪೀಠ ಹಣಕಾಸು ವಿಭಾಗದ ನಿರ್ದೇಶಕ ಎಸ್.ಪುಟ್ಟಸುಬ್ಬಪ್ಪ, ಪ್ರಶಸ್ತಿ ಪುರಸ್ಕೃತರು: ಹಿರಿಯ ವರದಿಗಾರ ಎಂ.ಎಸ್. ಕಾಶೀನಾಥ್, ಅಧ್ಯಕ್ಷತೆ: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಸ್ಥಳ: ಪತ್ರಕರ್ತರ ಭವನ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಡಾ. ಬಾಬು ಜಗಜೀವನರಾಂ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ :** ಡಾ.ಬಾಬು ಜಗಜೀವನರಾಂ ಅವರ 116ನೇ ಜಯಂತ್ಯುತ್ಸವದ ಅಂಗವಾಗಿ ವಿಶೇಷ ಉಪನ್ಯಾಸ ಹಾಗೂ ಪುಸ್ತಕ ಬಿಡುಗಡೆ ಸಮಾರಂಭ, ಉದ್ಘಾಟನೆ : ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರಾದ ಡಾ. ಶಾಂತ ಹೊಸಮನಿ, ವಿಶೇಷ ಉಪನ್ಯಾಸ : ಪ್ರೊ. ಕೆ. ಸದಾಶಿವ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು : ಕುಲಸಚಿವ ಪ್ರೊ. ಕೆ.ಎಲ್.ಎನ್. ಮೂರ್ತಿ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11.30ಕ್ಕೆ.


■ **ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ವಿಶೇಷ ಘಟಕ :** ಡಾ. ಬಾಬು ಜಗಜೀವನರಾಂ ಅವರ 116ನೇ ಜಯಂತ್ಯುತ್ಸವದ ಅಂಗವಾಗಿ ವಿಶೇಷ ಉಪನ್ಯಾಸ, ಉದ್ಘಾಟನೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ವಿ.ಆರ್. ಶೈಲಜ, ವಿಶೇಷ ಉಪನ್ಯಾಸ : ವಿಷಯ ತಜ್ಞರಾದ ಎನ್.ಸಿ. ಮುನಿಯಪ್ಪ, ಅಧ್ಯಕ್ಷತೆ : ಡಾ. ಬಾಬು ಜಗಜೀವನರಾಮ್ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ. ಆರ್. ತಿಮ್ಮರಾಯಪ್ಪ, ಉಪಸ್ಥಿತರು : ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ವಿಶೇಷ ಘಟಕದ ವಿಶೇಷ ಅಧಿಕಾರಿ ಪ್ರೊ. ಎಸ್. ಮಹದೇವಮೂರ್ತಿ, ಸ್ಥಳ: ಡಾ. ಬಾಬು ಜಗಜೀವನರಾಮ್ ಅಧ್ಯಯನ ಕೇಂದ್ರದ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ, ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಒಕ್ಕೂಟ :** ಎಸ್‌ಜೆಸಿಇ ಕಾಲೇಜಿನ ವಜ್ರ ಮಹೋತ್ಸವದ ಪ್ರಯುಕ್ತ ಅಖಿಲ ಭಾರತ ವಿಶ್ವವಿದ್ಯಾನಿಲಯ ಮಹಿಳೆಯರ ಕ್ರಿಕೆಟ್ ಪಂದ್ಯಾವಳಿ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಅಧ್ಯಕ್ಷತೆ : ಅಖಿಲ ಭಾರತ ವಿಶ್ವವಿದ್ಯಾನಿಲಯಗಳ ಒಕ್ಕೂಟದ ಜಂಟಿ ಕಾರ್ಯದರ್ಶಿ ಡಾ. ಬಲ್ಜಿತ್ ಸಿಂಗ್ ಸೆಖೋನ್, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ಸಲಹೆಗಾರ ಪ್ರೊ. ಎಂ.ಹೆಚ್. ಧನಂಜಯ, ನಿರ್ದೇಶಕ ಡಾ. ಬಿ. ಸುರೇಶ್, ಎಸ್‌ಜೆಸಿಇ ಕಾಲೇಜು ಉಪಕುಲಪತಿ ಡಾ. ಎ.ಎನ್. ಸಂತೋಷ್‌ಕುಮಾರ್, ಎಸ್‌ಜೆಸಿಇ ಕುಲಸಚಿವ ಡಾ. ಎಸ್.ಎ. ಧನರಾಜ್, ಪ್ರಾಂಶುಪಾಲರಾದ ಡಾ. ಎಸ್.ಬಿ. ಕಿವಾಡೆ, ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಸಿ. ರೇವಣ್ಣ, ಸ್ಥಳ: ಕೆಎಸ್‌ಸಿಯ ಮೈದಾನ, ಸಂಜೆ 4.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮಪುರಾಣ ಕುರಿತು ಪ್ರವಚನ, ಸ್ಥಳ: ಶ್ರೀರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಫರ್ಮಾಟ್‌ನ ಕೊನೆಯ ಪ್ರಮೇಯದ ಸಂಕ್ಷಿಪ್ತ ಇತಿಹಾಸ ಕುರಿತು ಪ್ರೊ. ಎಸ್. ಭಾರ್ಗವ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ

ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ



■ **ಶ್ರೀ ರಾಮ ಸೇವಾ ಚಾರಿಟಬಲ್ ಟ್ರಸ್ಟ್‌ನ ಅಂಗ ಸಂಸ್ಥೆ ಶ್ರೀ ರಾಮ ಸೇವಾ ಮಂಡಲಿ :** 70ನೇ ವರ್ಷದ ಶ್ರೀ ರಾಮೋತ್ಸವ, ಹಿನ್ನೆಲೆ ಗಾಯಕರಾದ ವಿದ್ವಾನ್ ಪಂಚಮ್ ಹಳಿಬಂಡಿ, ಬೆಂಗಳೂರು ಮತ್ತು ವೃಂದದವರಿಂದ ಸುಗಮ ಸಂಗೀತ, ಸ್ಥಳ: ಶ್ರೀ ಅವನಿ ಶಂಕರ ಮಠ, ವಿದ್ಯಾರಣ್ಯಪುರಂ,

■ **ಶ್ರೀ ಕಾಶೀಮಠದ ಶ್ರೀರಾಮ ಮಂದಿರ :** ರಾಮನವಮಿ ವಿಶೇಷ ಕಾರ್ಯಕ್ರಮ, ರಾಮಕೃಷ್ಣನಗರದ ಸುರಭಿ ಗಾಯನ ಸಮಾಜದವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀರಾಮ ಮಂದಿರ, ಶಿವರಾಮ ಪೇಟೆ, ಸಂಜೆ 6.30ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ, ವಿದುಷಿ ಐಶ್ವರ್ಯ ವಿದ್ಯಾ ರಘುನಾಥ್ ಅವರಿಂದ ಶಾಸ್ತ್ರೀಯ ಸಂಗೀತ, ವಿದುಷಿ ನಳಿನಾ ಮೋಹನ್–ಪಿಟೀಲು, ವಿದ್ವಾನ್ ಬಿ.ಎಸ್. ಪ್ರಶಾಂತ್–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ, ಸಂಜೆ 6.30ಕ್ಕೆ.

■ **ಶ್ರೀ ರಾಮ ಮಂದಿರ :** ಶ್ರೀ ರಾಮನವಮಿ, ಬೆಳಗ್ಗೆ ಶ್ರೀ ಮಹಾಗಣಪತಿ ಹೋಮ, ಸ್ಥಳ: ಶ್ರೀ ರಾಮ ಮಂದಿರ, ಜಯನಗರ.

■ **ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 107ನೇ ರಾಮನವಮಿ ವಾರ್ಷಿಕ ಪರಂಪರೆಯ ಸಂಗೀತೋತ್ಸವ, ವಿದ್ವಾನ್ ಡಾ. ವಿದ್ಯಾಭೂಷಣ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಸುಮಂತ್ ಮಂಜುನಾಥ್–ವಯೋಲಿನ್, ವಿದ್ವಾನ್ ಹೆಚ್ ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ರಘುನಂದನರಾವ್–ಘಟಂ, ವಿದ್ವಾನ್ ನಾಗರಾಜ್ ಎಂ. –ತಬಲ, ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6.15ಕ್ಕೆ.

‘ದೇವರಾಜ ಅರಸು’ ಆಳಿದ ನೆಲದಲ್ಲಿ ಯಾರ ಕನಸು ನನಸಾಗುವುದೋ...

–ಎಸ್.ಬಿ.ದೇವರಾಜ

ಹಿಂದುಳಿದ ವರ್ಗಗಳ ಅಭಿವೃದ್ಧಿ ಹರಿಕಾರ ಎನಿಸಿಕೊಂಡಿದ್ದ ಡಿ.ದೇವರಾಜ ಅರಸು ಅವರ ಕರ್ಮಭೂಮಿ ಹುಣಸೂರು ವಿಧಾನಸಭಾ ಕ್ಷೇತ್ರ, ಹಲವು ವಿಶೇಷತೆಗಳಿಂದ ಗಮನ ಸೆಳೆದಿದೆ. ಅವಿರೋಧವಾಗಿ ಶಾಸಕರ ಆಯ್ಕೆ, ಜಾತಿ ಲೆಕ್ಕಾಚಾರ ಮೀರಿದ ಫಲಿತಾಂಶ, ವಲಸೆ ಬಂದ ಅಭ್ಯರ್ಥಿಗಳಿಗೆ ಗೆಲುವು, ಹೆಚ್ಚು ಉಪಚುನಾವಣೆ ಹೀಗೆ ಹಲವು ಸಂಗತಿಗಳಿಗೆ ಹುಣಸೂರು ಸಾಕ್ಷಿಯಾಗಿದೆ. ನಾಲ್ಕು ಉಪ ಚುನಾವಣೆಗಳು ಸೇರಿ ಒಟ್ಟು 19 ಚುನಾವಣೆಗಳನ್ನು ಕಂಡಿದೆ. ಅದರಲ್ಲಿ 12 ಬಾರಿ ಕಾಂಗ್ರೆಸ್, 3 ಬಾರಿ ಜೆಡಿಎಸ್, 2 ಬಾರಿ ಜನತಾ ಪಕ್ಷ ಹಾಗೂ 2 ಬಾರಿ ಬಿಜೆಪಿ ಅಭ್ಯರ್ಥಿಗಳು ಜಯ ಗಳಿಸಿದ್ದಾರೆ. ಇದೀಗ ‘2023ರ ವಿಧಾನಸಭಾ ಸಾರ್ವತ್ರಿಕ ಚುನಾವಣೆ’ಗೆ ಅಖಾಡ ಸಜ್ಜಾಗಿದ್ದು, ಈ ಬಾರಿ ಜನ ಯಾವ ರೀತಿಯ ಫಲಿತಾಂಶ ನೀಡಲಿದ್ದಾರೆ ಎಂಬ ಕುತೂಹಲ ಹೆಚ್ಚಿದೆ.

ಹುಣಸೂರು ತಾಲೂಕು ಕಲ್ಲಹಳ್ಳಿಯ ಡಿ.ದೇವರಾಜ ಅರಸು ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿ ಕೆಲ ದಿಟ್ಟ ನಿರ್ಧಾರದ ಮೂಲಕ ರಾಜ್ಯ ರಾಜಕೀಯ ವಲಯದಲ್ಲಿ ಹೊಸ ಶಕೆ ಆರಂಭಿಸಿದವರು. ಮೂರು ದಶಕಗಳ ಕಾಲ ಹುಣಸೂರು ಕ್ಷೇತ್ರದ ಜನ, ಅರಸು ಅವರನ್ನು ಆಶೀರ್ವದಿಸಿದ್ದರು. ಈ ಮೂಲಕ ಅರಸು ಅವರ ಮಹತ್ವದ ನಿರ್ಧಾರಗಳು, ಸುಧಾರಣಾ ಕ್ರಮಗಳಿಗೆ ಒತ್ತಾಸೆಯಾದರು.

ಅವಿರೋಧ ಆಯ್ಕೆ: 1952ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಿ.ದೇವರಾಜ ಅರಸು ಅವರು ಪಕ್ಷೇತರ ಅಭ್ಯರ್ಥಿ ಬಿ.ಎಲ್. ಮರಿಗೌಡರ ವಿರುದ್ಧ ಗೆಲುವು ಸಾಧಿಸಿ ಹುಣಸೂರು ಕ್ಷೇತ್ರದ ಮೊದಲ ಶಾಸಕರಾಗಿ ಆಯ್ಕೆಯಾದರು. 1957ರ ಚುನಾವಣೆ ಯಲ್ಲಿ ಹುಣಸೂರು ದ್ವಿಸದಸ್ಯ ಕ್ಷೇತ್ರವಾಯಿತು. ಆ ಚುನಾವಣೆಯಲ್ಲಿ ಕಾಂಗ್ರೆಸ್‌ನ ಡಿ.ದೇವರಾಜ ಅರಸು ಹಾಗೂ ಎನ್.ರಾಚಯ್ಯ ಅವರು ಗೆಲುವು ಪಡೆದರು. 1968ರಲ್ಲಿ ಮತ್ತೆ ಏಕಸದಸ್ಯ ಕ್ಷೇತ್ರವಾದಾಗ ಡಿ.ದೇವರಾಜ ಅರಸು ಅವರು ಅವಿರೋಧವಾಗಿ ಆಯ್ಕೆಯಾದರು. 1967ರಲ್ಲಿ ಪಕ್ಷೇತರರಾದ ತಿಮ್ಮಪ್ಪ ಅವರನ್ನು ಮಣಿಸಿ ದೇವರಾಜ ಅರಸು ಮತ್ತೆ ಆಯ್ಕೆಯಾದರು.

ಮುಖ್ಯಮಂತ್ರಿಯಾದ ಸಂದರ್ಭ: ಡಿ.ದೇವರಾಜ ಅರಸು ಅವರು ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಕಾರಣ 1972ರ ಚುನಾವಣೆಯಲ್ಲಿ ಡಿ.ದೇವರಾಜ ಅರಸು ಅವರು ಸ್ಪರ್ಧಿಸದೆ, ರಾಜ್ಯಾದ್ಯಂತ ಪ್ರವಾಸ ನಡೆಸಿದ್ದರು. ಆ ಚುನಾವಣೆಯಲ್ಲಿ ಹುಣಸೂರಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಡಿ.ಕರಿಯಪ್ಪ ಅವರನ್ನು ಕಣಕ್ಕಿಳಿಸಲಾಗಿತ್ತು. ಅವರು ಸಂಸ್ಥಾ ಕಾಂಗ್ರೆಸ್ ಅಭ್ಯರ್ಥಿ ಎಚ್.ಹೊಂಬೇಗೌಡರನ್ನು ಮಣಿಸಿ ಶಾಸಕರಾಗಿದ್ದರು. ಆ ಅವಧಿಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ದೇವರಾಜ ಅರಸು ಅವರು ಮುಖ್ಯಮಂತ್ರಿಯಾದರು. ಹುಣಸೂರು ಕ್ಷೇತ್ರದ ಶಾಸಕರಾಗಿದ್ದ ಕರಿಯಪ್ಪ ಗೌಡರು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರಿಂದ ಆ ಕ್ಷೇತ್ರಕ್ಕೆ ಉಪಚುನಾವಣೆ ನಡೆಯಿತು. ಆಗ ಪಕ್ಷೇತರ ರಂಗಸ್ವಾಮಿ ಅವರನ್ನು ಮಣಿಸುವ ಮೂಲಕ ಡಿ.ದೇವರಾಜ ಅರಸು ಅವರು ಆಯ್ಕೆಯಾದರು. 1978ರಲ್ಲಿ ಇಂದಿರಾ ಕಾಂಗ್ರೆಸ್‌ನ ಅಭ್ಯರ್ಥಿಯಾಗಿದ್ದ ಡಿ.ದೇವರಾಜ ಅರಸರು, ಜನತಾ ಪಕ್ಷದ ಹೆಚ್.ಎಲ್.ತಿಮ್ಮೇಗೌಡ ಅವರನ್ನು ಸೋಲಿಸಿದರು. ಆ ವೇಳೆ ಅರಸು ಅವರು 2ನೇ ಬಾರಿ ಮುಖ್ಯಮಂತ್ರಿ ಗಾದಿಗೇರಿದರು.



ಅರಸು ಪುತ್ರಿಗೆ ಗೆಲುವು: ಹುಣಸೂರು ಕ್ಷೇತ್ರದಿಂದ 6 ಬಾರಿ ಶಾಸಕರಾಗಿ ಆಯ್ಕೆಯಾಗಿ 2 ಬಾರಿ ಮುಖ್ಯಮಂತ್ರಿಯಾಗಿದ್ದ ಡಿ.ದೇವರಾಜ ಅರಸು ಅವರು 1982ರಲ್ಲಿ ನಿಧನರಾದರು. ಬಳಿಕ 1983ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಅವರ ಪುತ್ರಿ ಚಂದ್ರಪ್ರಭಾ ಅರಸು ಜನತಾ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಕಾಂಗ್ರೆಸ್‌ನ ಅಭ್ಯರ್ಥಿ ಹೆಚ್. ಎನ್.ಪ್ರೇಮಕುಮಾರ್ ಅವರನ್ನು ಮಣಿಸುವ ಮೂಲಕ ಶಾಸಕರಾಗಿ ಆಯ್ಕೆಯಾದರು.

1985ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಚಂದ್ರಪ್ರಭಾ ಅವರನ್ನು ಜನತಾ ಪಕ್ಷದ ಹೆಚ್.ಎಲ್.ತಿಮ್ಮೇಗೌಡರು ಸೋಲಿಸಿ ಶಾಸಕರಾದರು. 1989ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಚಂದ್ರಪ್ರಭ ಅರಸು, ಜನತಾದಳದ ಡಿ.ಕರಿಯಪ್ಪಗೌಡರನ್ನು ಸೋಲಿಸಿ ಮತ್ತೆ ಶಾಸಕಿಯಾದರು.

ಆದರೆ ಚಂದ್ರಪ್ರಭಾ ಅವರು ಲೋಕಸಭೆಗೆ ಆಯ್ಕೆಯಾಗಿದ್ದರಿಂದ 1991ರಲ್ಲಿ ಉಪ ಚುನಾವಣೆ ನಡೆಯಿತು. ಎರಡು ಬಾರಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದ ಎಸ್.ಚಿಕ್ಕಮಾದು ಆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾದರು. ಬಿಜೆಪಿ ಅಭ್ಯರ್ಥಿ ಸಿ.ಹೆಚ್.ವಿಜಯಶಂಕರ್ ಪರಾಭವಗೊಂಡರು. ಆದರೆ 1994ರ ಚುನಾವಣೆಯಲ್ಲಿ ಬಿಜೆಪಿಯ ಸಿ.ಹೆಚ್.ವಿಜಯಶಂಕರ್, ಜನತಾದಳದ ವಿ.ಪಾಪಣ್ಣ ಅವರನ್ನು ಸೋಲಿಸಿ ವಿಧಾನಸಭೆ ಪ್ರವೇಶಿಸಿದರು. ಆದರೆ ಅವರೂ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾಗಿದ್ದರಿಂದ 1998ರಲ್ಲಿ ಮತ್ತೆ ಉಪಚುನಾವಣೆ ನಡೆಯಿತು. ಆ ಚುನಾವಣೆಯಲ್ಲಿ ಜನತಾ ದಳದ ಜಿ.ಟಿ.ದೇವೇಗೌಡರು, ಬಂಡಾಯ ಅಭ್ಯರ್ಥಿಯಾಗಿದ್ದ ವಿ.ಪಾಪಣ್ಣ ಅವರನ್ನು ಮಣಿಸಿ ಶಾಸಕ ರಾದರು. ಆದರೆ ವಿ.ಪಾಪಣ್ಣ 1999ರ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ, ಜನತಾದಳದ ಜಿ.ಟಿ.ದೇವೇಗೌಡರನ್ನು ಸೋಲಿಸಿ ಶಾಸಕರಾಗಿ ಆಯ್ಕೆಯಾದರು. 2004ರಲ್ಲಿ ಜನತಾ ದಳದ ಜಿ.ಟಿ.ದೇವೇಗೌಡರು, ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಚಿಕ್ಕಮಾದು ಅವರನ್ನು ಸೋಲಿಸಿ, ಎರಡನೇ ಬಾರಿ ಶಾಸಕರಾದರು.

ಮಂಜುನಾಥ್ 3 ಬಾರಿ ಗೆಲುವು: 2008ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್, ಜೆಡಿಎಸ್‌ನ ಚಿಕ್ಕ ಮಾದು ಹಾಗೂ ಬಿಜೆಪಿಯಿಂದ ಸ್ಪರ್ಧಿ ಸಿದ್ದ ಜಿ.ಟಿ.ದೇವೇಗೌಡರನ್ನು ಮಣಿಸಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದರು. 2013ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಕುಮಾರಸ್ವಾಮಿ, ಕೆಜೆಪಿಯ ಮಂಜುನಾಥ್ ಅರಸ್ ವಿರುದ್ಧ ಮತ್ತೆ ಗೆದ್ದರು. 2018ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಎ.ಹೆಚ್. ವಿಶ್ವನಾಥ್ ವಿರುದ್ಧ ಕಾಂಗ್ರೆಸ್‌ನ ಹೆಚ್.ಪಿ.ಮಂಜುನಾಥ್ ಸೋತರು. ಆದರೆ ವಿಶ್ವನಾಥ್ ಸೇರಿದಂತೆ 17 ಶಾಸಕರ ಅಸಹಕಾರದಿಂದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನವಾಗಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ 2019ರಲ್ಲಿ ಉಪ ಚುನಾವಣೆ ನಡೆಸಲಾಯಿತು. ಆಗ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ವಿಶ್ವ ನಾಥ್ ಅವರನ್ನು ಕಾಂಗ್ರೆಸ್‌ನ ಹೆಚ್.ಪಿ. ಮಂಜುನಾಥ್ ಮಣಿಸಿ, ಮೂರನೇ ಬಾರಿಗೆ ಶಾಸಕರಾದರು.

ಹೊರಗಿನವರಿಗೂ ಜನಾಶೀರ್ವಾದ: ಹುಣಸೂರು ವಿಧಾನಸಭಾ ಕ್ಷೇತ್ರದ ಜನ ಸ್ಥಳೀಯ ನಾಯಕರಿಗಷ್ಟೇ ಅಲ್ಲ, ಹೊರ ಗಿನಿಂದ ಹೋದವರಿಗೂ ಆಶೀರ್ವದಿಸಿ ಶಾಸಕರನ್ನಾಗಿ ಮಾಡಿದ್ದಾರೆ. ಮೂಲತಃ ಬ್ಯಾಡಗಿಯವರಾದ ಸಿ.ಹೆಚ್.ವಿಜಯಶಂಕರ್ ಅವರು ಸಹೋದರಿಯ ಊರಾದ ಹುಣಸೂರಿನಲ್ಲಿ ರಾಜಕೀಯ ನೆಲೆ ಕಂಡುಕೊಂಡರು. 1994ರ ಚುನಾವಣೆಯಲ್ಲಿ ಗೆದ್ದು ಶಾಸಕರಾದರಲ್ಲದೆ, ಲೋಕ ಸಭೆಗೂ ಆಯ್ಕೆಯಾದರು. ಅಲ್ಲದೆ ವಿಧಾನಪರಿಷತ್ ಸದಸ್ಯರಾಗಿ ಆ ಮೂಲಕ ಸಚಿವರಾಗಿಯೂ ಕೆಲಸ ಮಾಡಿದರು. ಹಾಗೆಯೇ ಮೈಸೂರು ತಾಲೂಕು ಗುಂಗ್ರಾಲ್ ಛತ್ರದವರಾದ ಜಿ.ಟಿ.ದೇವೇಗೌಡರನ್ನು 1998ರ ಉಪ ಚುನಾವಣೆ ಹಾಗೂ 2004ರ ಸಾರ್ವ ತ್ರಿಕ ಚುನಾವಣೆಯಲ್ಲಿ ಆಯ್ಕೆ ಮಾಡಿದರು. ಇನ್ನು ಕೆ.ಆರ್.ನಗರ ತಾಲೂಕಿನವರಾದ ಎ.ಹೆಚ್. ವಿಶ್ವನಾಥ್ 2018ರಲ್ಲಿ ಜೆಡಿಎಸ್‌ನಿಂದ ಗೆದ್ದರು.

ಮತ್ತಷ್ಟು ಸ್ವಾರಸ್ಯ: ಡಿ.ದೇವರಾಜ ಅರಸು ಅವರ ಮತ್ತೋರ್ವ ಪುತ್ರಿ ಭಾರತಿ ಅರಸು 1998ರ ಉಪಚುನಾವಣೆಯಲ್ಲಿ ಬಿಜೆಪಿ–ಲೋಕಶಕ್ತಿ ಅಭ್ಯರ್ಥಿಯಾಗಿ ಹಾಗೂ ಚಂದ್ರಪ್ರಭಾ ಅರಸು ಪುತ್ರ ಮಂಜುನಾಥ್ ಅರಸು 2013ರಲ್ಲಿ ಕೆಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದು ಪರಾಭವಗೊಂಡರು. ಕಟ್ಟಾ ಕಾಂಗ್ರೆಸಿಗರಾಗಿದ್ದ ಎಚ್.ಎನ್.ಪ್ರೇಮಕುಮಾರ್ 2 ಬಾರಿ ಪರಾಜಿತರಾಗಿದ್ದರು. ಆದರೆ ಅವರ ಪುತ್ರ ಹೆಚ್.ಪಿ.ಮಂಜುನಾಥ್ ಮೂರು ಬಾರಿ ಶಾಸಕರಾದರು. ಹುಣಸೂರು ತಾಲೂಕಿನವರೇ ಆದ ಎಸ್.ಚಿಕ್ಕಮಾದು ಒಮ್ಮೆ ಮಾತ್ರ ಉಪ ಚುನಾವಣೆಯಲ್ಲಿ ಗೆದ್ದು ನಂತರ ನೆರೆಯ ಎಚ್.ಡಿ.ಕೋಟೆ ಕ್ಷೇತ್ರಕ್ಕೆ ಸ್ಥಳಾಂತರಗೊಂಡರು.

ನಿಮ್ಮ ಕ್ಷೇತ್ರ ನಮ್ಮ ಮಾಹಿತಿ

ಈಗಿನ ಮತದಾರರ ವಿವರ

ಪುರುಷರು	1,20,290
ಮಹಿಳೆಯರು	1,20,474
ಇತರೆ	13
ಒಟ್ಟು	2,40,777
ಮತಗಟ್ಟೆಗಳು	273

2018 ಮತದಾನ ಪ್ರಮಾಣ

ಒಟ್ಟು ಮತ	2,23,209
ಚಲಾವಣೆಯಾಗಿದ್ದು	1,85,342
ಶೇಕಡಾ	83.04

ವರ್ಷ	ಗೆದ್ದವರು	ಪಕ್ಷ
1952	ಡಿ.ದೇವರಾಜ ಅರಸು	ಕಾಂಗ್ರೆಸ್
1957	ಡಿ.ದೇವರಾಜ ಅರಸು ಮತ್ತು ಎನ್.ರಾಚಯ್ಯ	ಕಾಂಗ್ರೆಸ್ (ದ್ವಿಸದಸ್ಯ)
1962	ಡಿ.ದೇವರಾಜ ಅರಸು (ಅವಿರೋಧ ಆಯ್ಕೆ)	ಕಾಂಗ್ರೆಸ್
1967	ಡಿ.ದೇವರಾಜ ಅರಸು	ಕಾಂಗ್ರೆಸ್
1972	ಡಿ.ಕರಿಯಪ್ಪಗೌಡ	ಕಾಂಗ್ರೆಸ್
1972(ಉ.ಚು)	ಡಿ.ದೇವರಾಜ ಅರಸು	ಕಾಂಗ್ರೆಸ್
1978	ಡಿ.ದೇವರಾಜ ಅರಸು	ಕಾಂಗ್ರೆಸ್
1983	ಚಂದ್ರಪ್ರಭಾ ಅರಸು	ಜನತಾ ಪಕ್ಷ
1985	ಡಾ.ಹೆಚ್.ಎಲ್.ತಿಮ್ಮೇಗೌಡ	ಜನತಾ ಪಕ್ಷ
1989	ಚಂದ್ರಪ್ರಭಾ ಅರಸು	ಕಾಂಗ್ರೆಸ್
1991(ಉ.ಚು)	ಎಸ್.ಚಿಕ್ಕಮಾದು	ಕಾಂಗ್ರೆಸ್
1994	ಸಿ.ಹೆಚ್.ವಿಜಯಶಂಕರ್	ಬಿಜೆಪಿ
1998(ಉ.ಚು)	ಜಿ.ಟಿ.ದೇವೇಗೌಡ	ಜೆಡಿಎಸ್
1999	ವಿ.ಪಾಪಣ್ಣ	ಬಿಜೆಪಿ
2004	ಜಿ.ಟಿ.ದೇವೇಗೌಡ	ಜೆಡಿಎಸ್
2008	ಹೆಚ್.ಪಿ.ಮಂಜುನಾಥ್	ಕಾಂಗ್ರೆಸ್
2013	ಹೆಚ್.ಪಿ.ಮಂಜುನಾಥ್	ಕಾಂಗ್ರೆಸ್
2018	ಹೆಚ್.ವಿಶ್ವನಾಥ್	ಜೆಡಿಎಸ್
2019(ಉ.ಚು)	ಹೆಚ್.ಪಿ.ಮಂಜುನಾಥ್	ಕಾಂಗ್ರೆಸ್



ಡಿ.ದೇವರಾಜ ಅರಸು

ಈ ಬಾರಿ ಕದನ ಕುತೂಹಲ

2023ರ ಸಾರ್ವತ್ರಿಕ ಚುನಾವಣೆಯಲ್ಲಿ ಹುಣಸೂರು ಅಖಾಡ ಕುತೂಹಲ ಹೆಚ್ಚಿಸಿದೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಹಾಲಿ ಶಾಸಕ ಹೆಚ್.ಪಿ.ಮಂಜುನಾಥ್ ಮತ್ತೆ ಕಣಕ್ಕಿಳಿಯುತ್ತಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಪುತ್ರ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡರು ಜೆಡಿಎಸ್‌ನಿಂದ ಸ್ಪರ್ಧಿಸುತ್ತಿದ್ದಾರೆ. ಮೂರು ಬಾರಿ ಶಾಸಕರಾಗಿರುವ ಮಂಜುನಾಥ್ ವಿರುದ್ಧ ಸೆಣಸಾಡಲು ಸಿದ್ಧರಾಗಿದ್ದಾರೆ. ಹುಣಸೂರು ಕ್ಷೇತ್ರದಲ್ಲಿ ತಂದೆಯೊಂದಿಗೆ ಪ್ರವಾಸ ಮಾಡಿ ಒಡನಾಟ ಬೆಳೆಸಿಕೊಂಡಿರುವ ಜಿ.ಡಿ.ಹರೀಶ್‌ಗೌಡರು, ಸಹಕಾರ ಕ್ಷೇತ್ರದ ಮೂಲಕವೂ ಕೆಲಸ ಮಾಡಿದ್ದಾರೆ. ಒಟ್ಟಾರೆ ಈ ಬಾರಿ ಚುನಾವಣೆಯಲ್ಲಿ ಜಿದ್ದಾಜಿದ್ದಿನ ಹೋರಾಟ ನಿಶ್ಚಿತ. ಇನ್ನು ಬಿಜೆಪಿಯಿಂದ ಯಾರನ್ನು ಕಣಕ್ಕಿಳಿಸುತ್ತಾರೆ ಎನ್ನುವುದನ್ನು ಕಾದು ನೋಡಬೇಕಿದೆ. ಕ್ಷೇತ್ರದಲ್ಲಿ ಒಕ್ಕಲಿಗರು, ಲಿಂಗಾಯಿತರು, ಕುರುಬರ ಪ್ರಾಬಲ್ಯವಿದೆಯಾದರೂ ನಾಯಕರು ಸೇರಿದಂತೆ ವಿವಿಧ ಸಮುದಾಯಗಳ ಮತದಾರರೂ ಹೆಚ್ಚಾಗಿದ್ದಾರೆ. ಆದರೆ ಇಲ್ಲಿ ಜಾತಿ ಲೆಕ್ಕಾಚಾರದಲ್ಲಿ ಚುನಾವಣೆ ಫಲಿತಾಂಶ ನಿರೀಕ್ಷಿಸಲಾಗದು.

ಸಿಕ್ಕಿಂನಲ್ಲಿ ಭಾರಿ ಹಿಮಪಾತ; ಆರು ಮಂದಿ ಪ್ರವಾಸಿಗರು ಸಾವು



ಗ್ಯಾಂಗ್ಟಕ್: ಸಿಕ್ಕಿಂನ ನಾಥುಲಾ ಪ್ರದೇಶದಲ್ಲಿ ಮಂಗಳವಾರ ಭಾರಿ ಹಿಮಪಾತ ಸಂಭವಿಸಿದ್ದು, ಆರು ಪ್ರವಾಸಿಗರು ಸಾವನ್ನಪ್ಪಿದ್ದಾರೆ ಮತ್ತು 11 ಮಂದಿ ಗಾಯಗೊಂಡಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಾಳುಗಳನ್ನು ರಾಜ್ಯ ರಾಜಧಾನಿ ಗ್ಯಾಂಗ್ಟಾಕ್‌ನ ಆಸ್ಪತ್ರೆಗೆ ಕರೆತರಲಾಗುತ್ತಿದೆ ಮತ್ತು 22ಕ್ಕೂ ಹೆಚ್ಚು ಪ್ರವಾಸಿಗರನ್ನು ರಕ್ಷಣೆ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ.

ಹಿಮದಡಿ ಸಿಲುಕಿರುವವರ ರಕ್ಷಣೆ ಮತ್ತು ರಸ್ತೆ ತೆರವು ಕಾರ್ಯಾಚರಣೆಗಳು ಇನ್ನೂ ನಡೆಯುತ್ತಿವೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಾಥುಲಾ ಪಾಸ್ ಚೀನಾದ ಗಡಿಯಲ್ಲಿದ್ದು, ಅದರ ರಮಣೀಯ ಸೌಂದರ್ಯದಿಂದಾಗಿ ಪ್ರಮುಖ ಪ್ರವಾಸಿ ತಾಣವಾಗಿದೆ. ಜವಾಹರಲಾಲ್ ನೆಹರು ಮಾರ್ಗದ 14ನೇ ಮೈಲಿಗಲ್ಲು ಬಳಿ ಇಂದು ಬೆಳಗ್ಗೆ ಸಂಭವಿಸಿದ ಹಿಮ ಕುಸಿತದಲ್ಲಿ 25–30 ಪ್ರವಾಸಿಗರು ಸಿಲುಕಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

3ನೇ ವರ್ಷದ ಪುಣ್ಯಸ್ಮರಣೆ



ದುಃಖಿತರು: ಪತ್ನಿ ದೇವಿರಮ್ಮ, ಮಾಜಿ ಅಧ್ಯಕ್ಷರು, ಗ್ರಾಮ ಪಂಚಾಯಿತಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ

ಶ್ರೀಮಾನ್ ಅಂಗಡಿ ಚಿಕ್ಕಣ್ಣ

ಮಾಜಿ ಅಧ್ಯಕ್ಷರು

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಚಿಕ್ಕಹಳ್ಳಿ

1ನೇ ವರ್ಷದ ಚಿರಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರಿ ಸದಾ ನಿಮ್ಮನ್ನು ಸ್ಮರಿಸುತ್ತಿರುವ

ದುಃಖತಪ್ತರು: ಪತ್ನಿ: ಶ್ರೀಮತಿ ಚಿಕ್ಕತಾಯಮ್ಮ ಹಾಗೂ ಶ್ರೀಮತಿ ಅನ್ನಪೂರ್ಣ ಉಮೇಶ್, ಬಂಧುವಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು. ದಡದಹಳ್ಳಿ ಗ್ರಾಮ, ಮೈಸೂರು ತಾ & ಜಿಲ್ಲೆ



ಶ್ರೀ ದೊಡ್ಡಲಿಂಗೇಗೌಡ

ನಿಧನ : 05/04/2022

ಮೈಸೂರು ಮಿತ್ರ 43

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು, ನನ್ನ ಕಕ್ಷಿದಾರರು ಅವರ ಮಾಲೀಕರಾದ ಶ್ರೀಮತಿ ರಫತ್ ತಸ್ನೀಮ್ ಕೋಂ ಡಿ. ಫರೂಕ್ ಪಾಷಾ, ನಂ.275, 2ನೇ ಕ್ರಾಸ್, 1ನೇ ಸ್ಟೇಜ್, ರಾಜೀವ್ ನಗರ, ಮೈಸೂರು ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಷಯದಲ್ಲಿ ಯಾರಾಗಲಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ ಭಾದ್ಯತೆಗಳಿದ್ದಲ್ಲಿ ಇಂದಿನಿಂದ 7 ದಿನದ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು.

ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಭಾಗಾಂಶ ಋಣ ಭಾದ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್ ಸ್ವತ್ತು

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಬಿಳಿಗೆರೆ ಹೋಬಳಿ, ತಗಡೂರು ಗ್ರಾಮದ ಸರ್ವೆ ನಂ. 258/2 ರಲ್ಲಿರುವ ಖುಷ್ಕಿ ಜಮೀನು 2.25 ಎಕರೆ ವಿಸ್ತೀರ್ಣವಿದ್ದು, ಪೂರ್ವಕ್ಕೆ : ಕೆರೆ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ದಾಸಪ್ಪಶೆಟ್ಟಿ ಜಮೀನು, ದಕ್ಷಿಣಕ್ಕೆ : ಟಿ.ಆರ್.ಜಗದೀಶ್ ರವರ ಜಮೀನು ಇರುತ್ತದೆ.

ಸಹಿ/– **ಶಿವಣ್ಣ.** ಬಿ.ಎ., ಎಲ್‌ಎಲ್‌ಬಿ., ವಕೀಲರು, # 22, ರಾಜ್ಯಗೃಹ ಬ್ಲಾಕ್–33, ಶ್ರೀಹರಿ ಕಂಫರ್ಟ್ಸ್, ಗೌರ್ನಮೆಂಟ್ ಎಂಪ್ಲಾಯೀಸ್ ಲೇಔಟ್, ಸೋಮನಾಥನಗರ, ದಟ್ಟಗಳ್ಳಿ, ಮೈಸೂರು–570033

ದಿನಾಂಕ: 04–04–2023

ಸ್ಥಳ: ಮೈಸೂರು

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

“ಮೈಸೂರು ಮಿತ್ರ” ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2023ಕ್ಕೆ 43 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 44ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇನ್ನೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2023 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ

0821-2496522, 2496523, 0821-2496520 (5 ಲೈನುಗಳು)

ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060

ಜಾಯ್ ಆಂಥೋಣಿ ಡೋಸ್: 8951668960

ಪ್ರೇಮ: 9880549879

ಕೆ.ಆರ್. ಸರ್ಕಲ್ ಕಛೇರಿ: 0821-2431774

ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು	ಮಂಡ್ಯ	ಶ್ರೀರಂಗಪಟ್ಟಣ
ಪ್ರಸಾದ್, ಫೋಟೋ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ, 08272223517, 9731469871	ಕೆ. ಮೋಹನ್‌ರಾಜ್, 3ನೇ ಕ್ರಾಸ್, ಅಶೋಕನಗರ, ಮಂಡ್ಯ, 8762960325	ವಿನಯ್ ಕಾರೇಕುರ, ಶ್ರೀರಂಗಪಟ್ಟಣ, 9686893234
ಹುಣಸೂರು	**ಚಾಮರಾಜನಗರ**	**ಟಿ. ನರಸೀಪುರ**
ಕೆ. ಕೃಷ್ಣ (ಕೆ.ಕೆ.), EWS 204, KHB ಕಾಲೋನಿ, ಹುಣಸೂರು, 9448720626	ಸಿದ್ದಲಿಂಗಸ್ವಾಮಿ, ಸಿಹೆಚ್.ಆರ್. ಕಾಂಪ್ಲೆಕ್ಸ್, ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ, 9242265657	ಕುಮಾರ್, ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್ ಛತ್ರದ ಎದುರು, ಟಿ. ನರಸೀಪುರ, 9986719590
ಗುಂಡ್ಲುಪೇಟೆ	**ಕೆ.ಆರ್. ನಗರ**	**ಮಳವಳ್ಳಿ**
ಸೋಮಶೇಖರ್, ದ.ರಾ. ಬೇಂದ್ರೆ ನಗರ, ಅಶ್ವಿನಿ ಲೇಔಟ್, ಗುಂಡ್ಲುಪೇಟೆ, 9845995426	ಕೆ.ಬಿ. ರಮೇಶ್, ಸ್ನೇಹ ಎಂಟರ್ ಪ್ರೈಸಸ್, ಬಿ.ಎಂ.ರಸ್ತೆ, ಕೆ.ಆರ್. ನಗರ, 9448021368	ಶಿವಶಂಕರ, ನಂ.47, 1ನೇ ಕ್ರಾಸ್, ಎನ್.ಇ.ಎಸ್ ಮಳವಳ್ಳಿ ಟೌನ್–571430, 9632407806
ಕೊಳ್ಳೇಗಾಲ	**ಹಾಸನ**	**ಕುಶಾಲನಗರ**
ರಾಜು, ಮೈಸೂರು ಮಿತ್ರ ರಿಪೋರ್ಟರ್ #101, ಮರಳಿಕೇರಿ ಬೀದಿ, ಕೊಳ್ಳೇಗಾಲ, 9916621007	ಆರ್.ಎನ್.ಸೋಮೇಶ್‌ಗೌಡ, ಹೋಲಿ ಚೈಲ್ಡ್ ಶಾಲೆ ಹತ್ತಿರ, ಜಯನಗರ, 1ನೇ ಹಂತ, 2ನೇ ಕ್ರಾಸ್, ಹಾಸನ. 9448401176	ರಘು, ಮೈಸೂರು ಮಿತ್ರ ರಿಪೋರ್ಟರ್, ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ, 9845698401
ಜಯಪುರ	**ಪಿರಿಯಾಪಟ್ಟಣ**	**ವಿರಾಜಪೇಟೆ**
ಬಿಳಿಗಿರಿ, ಜಯಪುರ, 9945479288	ವಿರೇಶ್, ಪಿರಿಯಾಪಟ್ಟಣ, 8660057128	ಮಂಜುನಾಥ, ವಿರಾಜಪೇಟೆ, 9900949353
ಕೆ.ಆರ್.ಪೇಟೆ	**ಹೆಚ್.ಡಿ.ಕೋಟೆ**	**ಕೆ.ಎಂ.ದೊಡ್ಡಿ**
(ಶ್ರೀನಿವಾಸ), ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ, 9449326847, 7022757438	ಮಂಜುನಾಥ ಎಸ್., ಹೆಚ್.ಡಿ.ಕೋಟೆ, 9483574452	ಸತೀಶ್ ಎ.ಎಲ್, ಕೆ.ಎಂ.ದೊಡ್ಡಿ, 9242120338
ನಂಜನಗೂಡು	**ಹುಣಸೂರು**	**ಕೊಳ್ಳೇಗಾಲ**
ರಂಗಸ್ವಾಮಿ, ನಂ.4565, ಕಬಿನಿ ಕಾಲೋನಿ ಹಿಂಭಾಗ, ನೀಲಕಂಠ ನಗರ, ನಂಜನಗೂಡು ಟೌನ್–571301, 9901602226	ಹೆಚ್.ಆರ್. ಕೃಷ್ಣಕುಮಾರ್, ಸುಮನ ಮಾರಾಟ ಕೇಂದ್ರ, ಮಾರುತಿ ಪೆಟ್ರೋಲ್ ಬಂಕ್ ಹತ್ತಿರ, ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು, 9060406093	ನಾಗೇಂದ್ರ ಸ್ವಾಮಿ, ನಂ.7ಎ, 684, 14 ನೇ ಕ್ರಾಸ್, ಬಸವೇಶ್ವರ ನಗರ, ಕೊಳ್ಳೇಗಾಲ, 9448576247, 7899849868

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರವರು ಷೆಡ್ಯೂಲ್‌ನಲ್ಲಿ ಪೂರ್ವವಾಗಿ ವಿವರಿಸಿರುವ ಸ್ವತ್ತಿನ ಮಾಲೀಕರಾದ ಮೈಸೂರು ಸಿಟಿ ಶ್ರೀರಾಂಪುರ, 1ನೇ ಹಂತ, ವಿವೇಕಾನಂದ ನಗರ, 2ನೇ ಮುಖ್ಯ ರಸ್ತೆ, 3ನೇ ಎ ಅಡ್ಡ ರಸ್ತೆ, ಮನೆ ನಂ. 1049/ಎ, ಫಸ್ಟ್ ಫ್ಲೋರ್‌ನಲ್ಲಿ ವಾಸವಾಗಿರುವ ಲೇಟ್ ಬಿ. ಬಂಡಪ್ಪ ರವರ ಮಗನಾದ ಸುಮಾರು 49 ವರ್ಷ ವಯಸ್ಸಿನ ಶ್ರೀ ಬಿ. ಮಂಜುನಾಥ್ (PAN-AHJPM5666N & Adhaar No.9901 4699 3362) ರವರ ಅಪೇಕ್ಷೆ ಮೇರೆಗೆ ಸಮಸ್ತ ಜನರಿಗೂ, ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ಬೋಗಾದಿ, 1ನೇ ಹಂತ, ಬ್ಯಾಂಕ್ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಮೈಸೂರು(ರಿ)ರವರು ನಿರ್ಮಿಸಿರುವ ಬ್ಯಾಂಕ್ ಎಂಪ್ಲಾಯೀಸ್ ಕಾಲೋನಿ, ನಿವೇಶನ ಸಂಖ್ಯೆ 136 ರ ವಿಸ್ತೀರ್ಣ ಪೂರ್ವಪಶ್ಚಿಮ 30.00 ಅಡಿಗಳು, ಉತ್ತರ ದಕ್ಷಿಣ 40.00 ಅಡಿಗಳುಳ್ಳ ಸ್ವತ್ತು ಮೂಲತಃ ಶ್ರೀ ಬಸವೇಗೌಡ ಎಂಬುವವರಿಗೆ ಭೂ ಮಾಲೀಕರ ಕೋಟಾ (Land Looser) ಅಡಿಯಲ್ಲಿ ಸಂಘದಿಂದ ದಿನಾಂಕ 21–2–1997ರಂದು ಮಂಜೂರಾತಿಯಾಗಿ, ಸಂಘದಿಂದ ದಿನಾಂಕ 16–4–1997ರಂದು ಸ್ವಾಧೀನ ಪತ್ರ ಪಡೆದು, ದಿನಾಂಕ 8–5–1997ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಂಖ್ಯೆ 136, ಪುಟ44, ಪುಸ್ತಕ 1ರ ಮೇರೆ ಖಾತೆ ನೋಂದಾಯಿಸಿ ಕೊಂಡು, ಕಂದಾಯ ಕಟ್ಟಿಕೊಂಡು ಬಂದು ಅವರ ಸಂಪೂರ್ಣ ಮಾಲೀಕತ್ವ ಮತ್ತು ಹಕ್ಕುಬಾಧ್ಯತೆಗೆ ಸೇರಿ ಸ್ವಾಧೀನಾನುಭವದಲ್ಲಿರುವ ಸ್ವಯಾರ್ಜಿತವಾದ ಸ್ವತ್ತಾಗಿರುತ್ತದೆ.

ನಂತರ ಸದರಿ ಸ್ವತ್ತನ್ನು ದಿನಾಂಕ 2–7–1997ರಂದು ಶ್ರೀ ಬಸವೇಗೌಡ ರವರಿಂದ ಶ್ರೀಮತಿ ಪ್ರೇಮ ಎಂಬುವವರು ಕ್ರಯಕ್ಕೆ ಪಡೆದು, ಸದರಿ ಕ್ರಯಪತ್ರ ಮೈಸೂರು ದಕ್ಷಿಣ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ಒಂದನೇ ಪುಸ್ತಕದ 4797ನೇ ಸಂಪುಟದಲ್ಲಿ 159–161ನೇ ಪುಟಗಳಲ್ಲಿ 2134ನೇ ನಂಬರಾಗಿ ನೋಂದಣಿಯಾಗಿದ್ದು, ದಿನಾಂಕ 2–8–2005ರಂದು ಸಂಖ್ಯೆ 136, ಪುಟ 44, ಪುಸ್ತಕ 01ರ ಮೇರೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಶ್ರೀಮತಿ ಪ್ರೇಮ ರವರ ಹೆಸರಿಗೆ ಖಾತೆ ವರ್ಗಾವಣೆಯಾಗಿದ್ದು, ನಂತರ ಕ್ರಯಪತ್ರ ರಿಜಿಸ್ಟರ್ ವೇಳೆ ಸ್ವತ್ತಿನ ಟೈಟಲ್ ಡೀಡ್ ಪಡೆದಿಲ್ಲವಾದ ಕಾರಣ ಬ್ಯಾಂಕ್ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು ರವರಿಂದ ದಿನಾಂಕ 13–5–2010 ರಂದು ಶ್ರೀ ಬಸವೇಗೌಡ ರವರ ಹೆಸರಿನಲ್ಲಿ ಟೈಟಲ್ ಡೀಡ್ ಪತ್ರ ಪಡೆದು, ಸದರಿ ಪತ್ರವನ್ನು ಮೈಸೂರು ಉತ್ತರ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ಒಂದನೇ ಪುಸ್ತಕದ ಸಿಡಿ ನಂ. ಎಂವೈಎನ್‌ಡಿ–236ರಲ್ಲಿ ಎಂವೈಎನ್–1–02449/2010–11ನೇ ನಂಬರಾಗಿ ದಿನಾಂಕ 13–5–2010ರಂದು ನೋಂದಾಣಿ ಮಾಡಿಸಿ ಹಾಗೂ ಅದೇ ದಿನ ಮೈಸೂರು ದಕ್ಷಿಣ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ಒಂದನೇ ಪುಸ್ತಕದ ಸಿಡಿ ನಂ. ಎಂವೈಎಸ್‌ಡಿ141ರಲ್ಲಿ ಎಂವೈಎಸ್–1–01041/2010–11ನೇ ನಂಬರಾಗಿ ಶ್ರೀ ಬಸವೇಗೌಡ ರವರಿಂದ ಶ್ರೀಮತಿ ಪ್ರೇಮ ರವರ ಹೆಸರಿಗೆ ಟೈಟಲ್ ಡೀಡ್ ಹಕ್ಕುಬಿಡುಗಡೆ ಪತ್ರ ಸಹ ನೋಂದಣಿ ಮಾಡಿಸಿ, ಸದರಿ ಸ್ವತ್ತು ಶ್ರೀಮತಿ ಪ್ರೇಮ ರವರ ಸಂಪೂರ್ಣ ಮಾಲೀಕತ್ವ ಮತ್ತು ಹಕ್ಕುಬಾಧ್ಯತೆಗೆ ಸೇರಿ ಸ್ವಾಧೀನಾನುಭವದಲ್ಲಿದ್ದ ಸ್ವತ್ತನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಮತ್ತು ಮಾರಾಟ ಮಾಡುವ ಸಲುವಾಗಿ ದಿನಾಂಕ 9–7–2010ರಂದು ಶ್ರೀಮತಿ ಪ್ರೇಮ ಮತ್ತು ಅವರ ಯಜಮಾನರಾದ ಶ್ರೀ ಹೆಚ್.ಆರ್.ಹೊನ್ನಪ್ಪರವರುಗಳು ಮೈಸೂರು ದಕ್ಷಿಣ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ನಾಲ್ಕನೇ ಪುಸ್ತಕದ ಸಿಡಿ ನಂ. ಎಂವೈಎಸ್‌ಡಿ–145ರಲ್ಲಿ ಎಂವೈಎಸ್–4–00130/2010–11ನೇ ನಂಬರ್ ರಿಜಿಸ್ಟರ್ಡ್ ಸಾಮಾನ್ಯ ಅಧಿಕಾರ ಪತ್ರದ ಮೂಲಕ ಶ್ರೀ ಕೆ.ಆರ್. ಸತ್ಯನಾರಾಯಣರವರನ್ನು ಪ್ರತಿನಿಧಿಯನ್ನಾಗಿ ನೇಮಿಸಿರುವುದು ಸರಿಯಷ್ಟೆ.

ನಂತರ ಸದರಿ ಸ್ವತ್ತನ್ನು ದಿನಾಂಕ 16–7–2010ರಂದು ಶ್ರೀಮತಿ ಪ್ರೇಮ ಮತ್ತು ಶ್ರೀ ಹೆಚ್.ಆರ್. ಹೊನ್ನಪ್ಪ ರವರುಗಳ ಜಿ.ಪಿ.ಎ ಪ್ರತಿನಿಧಿ ಶ್ರೀ ಕೆ.ಆರ್. ಸತ್ಯನಾರಾಯಣ ರವರಿಂದ ನಮ್ಮ ಕಕ್ಷಿದಾರರಾದ ಶ್ರೀ ಬಿ.ಮಂಜುನಾಥ್ ರವರು ಕ್ರಯಕ್ಕೆ ಪಡೆದು, ಸದರಿ ಕ್ರಯಪತ್ರ ಮೈಸೂರು ದಕ್ಷಿಣ ಉಪ ನೋಂದಣಾಧಿಕಾರಿಗಳವರ ಕಛೇರಿಯಲ್ಲಿ ಒಂದನೇ ಪುಸ್ತಕದ ಸಿಡಿ ನಂ.ಎಂವೈಎಸ್‌ಡಿ145ರಲ್ಲಿ ಎಂವೈಎಸ್–1–02767/2010–11ನೇ ನಂಬರಾಗಿ ನೋಂದಣಿ ಮಾಡಿಸಿ, ದಿನಾಂಕ 18–10–2010 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸಂಖ್ಯೆ 136, ಪುಟ 44, ಪುಸ್ತಕ 01ರ ಮೇರೆ ಬಿ.ಮಂಜುನಾಥ್‌ರವರ ಹೆಸರಿಗೆ ಖಾತಾ ವರ್ಗಾವಣೆಯಾಗಿದ್ದು, ತಹಲ್‌ವರೆಗಿನ ಪೂರ್ತಾ ಕಂದಾಯ ಪಾವತಿ ಮಾಡಿ ಹಾಲೀ ಷೆಡ್ಯೂಲ್ ಸ್ವತ್ತು ನಮ್ಮ ಕಕ್ಷಿದಾರರವರ ಸಂಪೂರ್ಣ ಮಾಲೀಕತ್ವ ಮತ್ತು ಹಕ್ಕುಬಾಧ್ಯತೆಗೆ ಸೇರಿ ಸ್ವಾಧೀನಾನುಭವದಲ್ಲಿರುವ ಸ್ವತ್ತಾಗಿದ್ದು, ಸದರಿ ಸ್ವತ್ತಿನ ಅಸಲು/ಮೂಲ ದಾಖಲಾತಿಗಳು ನಮ್ಮ ಕಕ್ಷಿದಾರರಲ್ಲೇ ಇರುತ್ತದೆ, ಸ್ವಯಾರ್ಜಿತವಾದ ಸ್ವತ್ತಾಗಿರುತ್ತದೆ.

ವಸ್ತುಸ್ಥಿತಿ ಹೀಗಿರುವಾಗ ನಮ್ಮ ಕಕ್ಷಿದಾರರಿಗೆ ಬಂದಿರುವ ಮಾಹಿತಿಯ ಪ್ರಕಾರ ಕೆಲವು ವ್ಯಕ್ತಿಗಳು ಷೆಡ್ಯೂಲ್ ಸ್ವತ್ತಿನ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ ಬೇರೆಯವರಿಗೆ ಪರಭಾರೆ ಅಥವಾ ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದು ತಿಳಿದು ಬಂದಿರುತ್ತದೆ. ಆದುದರಿಂದ ಈ ತಿಳುವಳಿಕೆ. ಸಾರ್ವಜನಿಕರು ಯಾರಾದರೂ ಷೆಡ್ಯೂಲ್ ಸ್ವತ್ತಿನ ಬಗ್ಗೆಯಾವುದೇ ವ್ಯವಹಾರವನ್ನು ಮೇಲ್ಕಂಡ ಶ್ರೀ ಬಸವೇಗೌಡ ಅಥವಾ ಶ್ರೀಮತಿ ಪ್ರೇಮ ರೊಡನೆ ಅಥವಾ ಇನ್ನಾವುದೇ ಮೂರನೇ ವ್ಯಕ್ತಿಗಳೊಡನೆ ಮಾಡಿದಲ್ಲಿ ಸದರಿ ವ್ಯವಹಾರವು ನಮ್ಮ ಕಕ್ಷಿದಾರರ ಹಕ್ಕು ಮತ್ತು ಹಿತಾಸಕ್ತಿಗೆ ಚ್ಯುತಿ ಬರುತ್ತದೆ. ಅಂತಹ ಸಂದರ್ಭ ದಲ್ಲಿ ಸದರಿ ವ್ಯವಹಾರವು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲ ಮತ್ತು ಯಾವ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹರಿಸಬಾರದೆಂದು ಈ ಮೂಲಕ ತಿಳಿಯಪಡಿಸಲಾಗುತ್ತಿದೆ.

ಷೆಡ್ಯೂಲ್

ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ ಬೋಗಾದಿ, 1ನೇ ಹಂತ, ಬ್ಯಾಂಕ್ ಎಂಪ್ಲಾಯೀಸ್ ಹೌಸಿಂಗ್ ಕೋ– ಆಪರೇಟಿವ್ ಸೊಸೈಟಿ ಲಿಮಿಟೆಡ್ ಮೈಸೂರು (ರಿ) ರವರು ನಿರ್ಮಿಸಿರುವ ಬ್ಯಾಂಕ್ ಎಂಪ್ಲಾಯೀಸ್ ಕಾಲೋನಿ, ನಿವೇಶನ ಸಂಖ್ಯೆ 136 ರ ವಿಸ್ತೀರ್ಣ ಪೂರ್ವಪಶ್ಚಿಮ 30.00 ಅಡಿಗಳು, ಉತ್ತರದಕ್ಷಿಣ, 40.00 ಅಡಿಗಳುಳ್ಳ ಒಟ್ಟು 1200 ಚದರ ಅಡಿ ಜಾಗಕ್ಕೆ ಚಕ್ಕುಬಂದಿ.

ಪೂರ್ವ: 135ನೇ ನಂಬರ್ ಸ್ವತ್ತು, ಪಶ್ಚಿಮ : 137ನೇ ನಂಬರ್ ಸ್ವತ್ತು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : 160 ಮತ್ತು 161ನೇ ನಂಬರ್ ಸ್ವತ್ತು.

ಸಹಿ/– **ಶ್ರೀನಿಧಿ. ಪಿ.** ವಕೀಲರು ಮತ್ತು ಕಾನೂನು ಸಲಹೆಗಾರರು KAR /932/2015, ನಂ. 1037, CH 5/1, ದೇವಪಾರ್ಥಿವ ರಸ್ತೆ, ಚಾಮರಾಜಪುರಂ, ಮೈಸೂರು. ಮೊ: 9482584824

ದಿನಾಂಕ : 3.4.2023

ಸ್ಥಳ: ಮೈಸೂರು

ನಕ್ಕರೆ ಅದೇ ಸ್ವರ್ಗ

ಗೆಳೆಯ : (ಪರಸ್ಪರ ಚರ್ಚೆಯಲ್ಲಿ) ನೀರು ತುಂಬಿರುವ ದೊಡ್ಡ ನದಿಯನ್ನೂ ದಾಟಲು ತೆಪ್ಪ ಬೇಕೇ ಬೇಕಯ್ಯಾ...

ಜೊತೆಗಾರ : ಹೌದಯ್ಯಾ, ಅದೇ ರೀತಿ ಸಂಸಾರ ಸಾಗರವನ್ನು ನೆಮ್ಮದಿಯಿಂದ ದಾಟಲು ಗಂಡ ತೆಪ್ಪಗಿರಬೇಕು.

ಮೈಸೂರು ಮಿತ್ರ

ಬುಧವಾರ, 5 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸಂಕಲ್ಪದಿಂದ ಮನಸ್ಸು ದೃಢವಾಗುತ್ತದೆ. ಆತ್ಮವಿಶ್ವಾಸ ಬೆಳೆಯುತ್ತದೆ. ಧೈರ್ಯದಿಂದ ಮುಂದುವರಿಯಲು ಪ್ರಚೋದನೆ ಸಿಗುತ್ತದೆ. ಹುಮ್ಮಸ್ಸು ಬರುತ್ತದೆ. ಚುರುಕಾಗುತ್ತೇವೆ.– ನುಡಿಮುತ್ತು

ವೇದ ಸುಳ್ಳಾದರೂ { ಭಾವಿಸಿದರೆ ಬಳಗ,
ಗಾದೆ ಸುಳ್ಳಾಗದು { ಕೂಡಿಸಿದರೆ ಕಾಸು

ನಿಮ್ಮ ಪತ್ರಗಳು

ಪಾನ್–ಆಧಾರ್ ಜೋಡಣೆಗೆ ವಿಧಿಸಿರುವ 1000 ರೂ. ದಂಡ ಹಿಂಪಡೆಯಲಿ

ಮಾನ್ಯರೇ,

ಪಾನ್ ಕಾರ್ಡ್‌ನೊಂದಿಗೆ ಆಧಾರ್ ಜೋಡಣೆಗೆ ಜೂನ್ 30ರವರೆಗೆ ಗಡುವು ನೀಡಿರುವುದು ಸರಿಯಷ್ಟೆ. ಆದರೆ ಆರ್ಥಿಕ ತಜ್ಞರು ಹಾಗೂ ಆದಾಯ ತೆರಿಗೆ ಇಲಾಖೆಯವರು ಹೇಳುವ ರೀತಿ ನೋಡಿದರೆ ಈಗಾಗಲೇ ಉಚಿತವಾಗಿ ಜೋಡಣೆ ಮಾಡಿ ಎಂದು ತಿಳಿಸಿದ್ದೆವು. ಆದರೂ ಆಧಾರ್ ಜೋಡಣೆಯಾಗಿಲ್ಲದಿರುವುದರಿಂದ 1000 ರೂ. ದಂಡದೊಂದಿಗೆ ಆಧಾರ್ ಜೋಡಣೆ ಮಾಡಲು ಅನುವು ಮಾಡಿಕೊಟ್ಟಿರುವುದು ಎಂಬುದು ಅವರ ವಾದವಾಗಿದೆ. ಏನೇ ಇರಲಿ ಪಾನ್ ಕಾರ್ಡ್ ಮಾಡಿಸುವಾಗಲೇ ಈ ರೀತಿಯ ಕಡ್ಡಾಯ ನಿಯಮವನ್ನು ಏಕೆ ತರಲಿಲ್ಲ. ಆಗ ಆದಾಯ ತೆರಿಗೆ ಇಲಾಖೆ ಕಣ್ಮುಚ್ಚಿ ಕುಳಿತಿತ್ತೆ. ಆದುದರಿಂದ ಹಗಲು ದರೋಡೆಯಂತೆ ಸಾರ್ವಜನಿಕರಿಂದ 1000 ರೂ. ದಂಡ ವಸೂಲು ಮಾಡುತ್ತಿರುವುದು ಖಂಡನೀಯ. ಈ ಬಗ್ಗೆ ಮಾನ್ಯ ಘನ ನ್ಯಾಯಾಲಯವು ಮಧ್ಯೆ ಪ್ರವೇಶಿಸಿ ಸಾರ್ವಜನಿಕರ, ಬಡವರ, ಕೂಲಿ ಕಾರ್ಮಿಕರಿಗೆ ಮಾಹಿತಿ ಕೊರತೆಯಿಂದ ಆಗುತ್ತಿರುವ ಘೋರ ಅನ್ಯಾಯವನ್ನು ತಡೆಗಟ್ಟಬೇಕು. ಈ ಬಗ್ಗೆ ಯಾರೂ ಚಕಾರವೆತ್ತುತ್ತಿಲ್ಲ. ಉಳ್ಳವರು, ಧನಿಕರು 1000 ರೂ. ದಂಡ ನೀಡಿ ಆಧಾರ್ ಜೋಡಣೆ ಮಾಡಿಸುತ್ತಾರೆ. ಒಂದು ಸಾವಿರ ದುಡಿಯಲು ಬಡವರು ಎರಡರಿಂದ ನಾಲ್ಕು ಮಾನವ ದಿನಗಳನ್ನು ವ್ಯಯಿಸಬೇಕಾಗುವ ಇಂತಹ ಸಂದರ್ಭದಲ್ಲಿ, ಅಲ್ಲಿ ತಂದು ಅಲ್ಲಿ ತಿನ್ನುವವರಿಗೆ ಈ ರೀತಿಯ ಹೆಚ್ಚುವರಿ ಹೊರೆಯನ್ನು ಹೇಗೆ ಭರಿಸುವುದು ಎಂಬುದೇ ಯಕ್ಷಪ್ರಶ್ನೆಯಾಗಿದೆ.

ಸರ್ಕಾರಗಳ ಇಚ್ಛಾಶಕ್ತಿಯ ಕೊರತೆಯ ಕಾರಣದಿಂದಾಗಿ ಇಂತಹ ನಿರ್ಧಾರಗಳಿಗೆ ಸಮಾಜದ ಮಧ್ಯಮ ವರ್ಗದವರು ಹಾಗೂ ಕೆಳ ವರ್ಗದವರು ಬೆಲೆ ತೆರಬೇಕಾಗಿದೆ. ಆದಾಯ ತೆರಿಗೆ ಇಲಾಖೆಯ ಕ್ರಮಗಳ ಬಗ್ಗೆ ಆಕ್ಷೇಪಿಸುತ್ತಿಲ್ಲ. ಹಳ್ಳಿಗಾಡಿನ ಕೂಲಿ ಕಾರ್ಮಿಕರು, ಜನಸಾಮಾನ್ಯರು ಸರ್ಕಾರದ ವಿವಿಧ ಯೋಜನೆಗಳು ಹಾಗೂ ಬ್ಯಾಂಕ್ ಸಾಲ ಸೌಲಭ್ಯ ಪಡೆಯುವ ಸಂಬಂಧ ಬ್ಯಾಂಕ್‌ನ ಅವಶ್ಯಕತೆಗನುಗುಣವಾಗಿ ಮಧ್ಯವರ್ತಿಗಳ ಕೈಲಿ ಪಾನ್ ಕಾರ್ಡ್ ಮಾಡಿಸಿರುತ್ತಾರೆ. ಆದರೆ ಅವರು ಆಧಾರ್ ಕಾರ್ಡ್‌ನ್ನು ಜೋಡಣೆ ಮಾಡಿರುತ್ತಾರೋ ಇಲ್ಲವೋ ಎಂಬುದು ವೆಬ್‌ಸೈಟ್‌ನಲ್ಲಿ ಪರೀಕ್ಷಿಸಿದಾಗ ಮಾತ್ರ ಗೊತ್ತಾಗುತ್ತದೆ. ಆದಾಯ ತೆರಿಗೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಎರಡೆರಡು ಪಾನ್‌ಕಾರ್ಡ್‌ಗಳನ್ನು ಬಳಸುವ ಗಟ್ಟಿಕುಳಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಂಡು ಅಮಾಯಕರು, ಬಡವರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ ಹಾಗೂ ಪ್ರಸ್ತುತ ಇರುವ 1000 ರೂ.ಗಳ ದಂಡವನ್ನು ಬೇಷರತ್ ಹಿಂಪಡೆಯಬೇಕಾಗಿ ಸಮಸ್ತ ನಾಗರಿಕರ ಪರವಾಗಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಸೂಚನೆಗಳನ್ನು ನೀಡಬೇಕಾಗಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ಆದಾಯ ತೆರಿಗೆ ಉನ್ನತಾಧಿಕಾರಿಗಳಲ್ಲಿ ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

–ವೇಣುಬೀರಿಹುಂಡಿ, ಮೈಸೂರು

ಬನ್ನಿಮಂಟಪ ಜೋಡಿ ತೆಂಗಿನಮರ ಸ್ಮಶಾನ ರಸ್ತೆಯಲ್ಲಿ ನಮ್ಮದು 'ಹೆಣ'ಪಾಡು



ಮಾನ್ಯರೆ,

ಮೈಸೂರು ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನ ರಸ್ತೆಯ ದುಸ್ಥಿತಿ ಅಕ್ಷರಶಃ ಸ್ಮಶಾನ ಸದೃಶವಾಗಿದೆ. ಈ ರಸ್ತೆ ನಿರ್ಮಾಣವಾದ ಹಲವು ದಶಕದ ನಂತರ, ಹಲವು ಅಮಾಯಕರು ಜೀವ ಕಳೆದುಕೊಂಡ ನಂತರ ರಸ್ತೆ ಮಾಡುವ ಶಾಸ್ತ್ರ ಕೈಗೆತ್ತಿಕೊಂಡು, ಅದನ್ನು ಪೂರ್ಣಗೊಳಿಸಲು ವರ್ಷಗಳೇ ಕಳೆದವು. ಕೊನೆಗೂ ರಸ್ತೆ ನಿರ್ಮಾಣವಾಯಿತು. ಇದು ವಿಶ್ವದರ್ಜೆ ಗುಣಮಟ್ಟದಿಂದ ಕೂಡಿದೆ ಎಂದು ಹೇಳಲಾಯಿತು.

ಆದರೆ, ಈ ರಸ್ತೆಯಲ್ಲಿ ದಿನದ 24 ಗಂಟೆಯೂ ಭಾರೀ ವಾಹನಗಳು ಸಂಚರಿಸುವುದರಿಂದ ರಸ್ತೆ ಒಂದೇ ವರ್ಷದಲ್ಲಿ ಹಾಳಾಯಿತು. ಮಳೆಗಾಲದಲ್ಲಿ ಸರಿಯಾಗಿ ನೀರು ಹರಿದು ಹೋಗಲು ಅವಕಾಶವಾಗದೇ ರಸ್ತೆ ಹಾಗೂ ಇಕ್ಕೆಲಗಳಲ್ಲಿ ಮಳೆ ನೀರು ನಿಂತು ಒಂದು ರೀತಿ ಕೆಸರು ಗದ್ದೆಯಂತಾಯಿತು. ಈ ವೇಳೆ ವಾಹನ ಚಾಲಕರು ಹಿಡಿಶಾಪ ಹಾಕುತ್ತಾ ಸಾಗಿದ್ದಾಯಿತು. ನಂತರ ಹಲವೆಡೆ ರಸ್ತೆಯನ್ನು ಕೇಬಲ್ ಹಾಕಲು ಅಗೆದು ಹಾಳು ಮಾಡಲಾಯಿತು. ಅಗೆದವರು ಆ ಹಳ್ಳ ಮುಚ್ಚದೇ, ಅವು ಹೊಂಡವಾಗಿ ಪರಿಣಮಿಸಿ ವರ್ಷದಿಂದಲೂ ದಿನನಿತ್ಯ ವಾಹನ ಚಾಲಕರು ಶಪಿಸುತ್ತಿದ್ದಾರೆ. ಆದರೆ ಈ ಭಾಗದ ಶಾಸಕರಾಗಲೀ, ಪಾಲಿಕೆ ಸದಸ್ಯರಾಗಲೀ ಯಾರೂ ಇತ್ತ ಗಮನಹರಿಸುತ್ತಿಲ್ಲ. ಈ ರಸ್ತೆಯ ಸ್ವಲ್ಪ ಭಾಗ ಚಾಮರಾಜ ಕ್ಷೇತ್ರದ ಶಾಸಕರು ಹಾಗೂ ಬಹುತೇಕ ಭಾಗ ನರಸಿಂಹರಾಜ ಕ್ಷೇತ್ರದ ಶಾಸಕರ ವ್ಯಾಪ್ತಿಗೆ ಬರುತ್ತದೆ ಎಂದು ಹೇಳಲಾಗುತ್ತಿದೆ. ಆದರೆ ಯಾರೊಬ್ಬರು ಇದರತ್ತ ಗಮನಹರಿಸುತ್ತಿಲ್ಲ. ಈ ಭಾಗದ ಪ್ರಮುಖ ಸ್ಮಶಾನ ಈ ರಸ್ತೆಯಲ್ಲಿದ್ದು, ಪ್ರತಿನಿತ್ಯವು ಐದಾರು ಶವ ಸಂಸ್ಕಾರ ನಡೆಯುತ್ತದೆ. ಬಹುತೇಕ ಎಲ್ಲವನ್ನೂ ವಾಹನಗಳಲ್ಲೇ ಇಲ್ಲಿಗೆ ತಂದು ಅಂತ್ಯಕ್ರಿಯೆ ನೆರವೇರಿಸಲಾಗುತ್ತದೆ. ಅಂತಿಮ ಯಾತ್ರೆಯಲ್ಲಿ ನೂರಾರು ಕೆಲವೊಮ್ಮೆ ಸಾವಿರಾರು ಮಂದಿ ಪಾಲ್ಗೊಳ್ಳುವುದೂ ಉಂಟು. ಇಂತಹ ಸಂದರ್ಭದಲ್ಲಿ ಪಾದಚಾರಿಗಳು, ಜೀವ ಕೈಯಲ್ಲಿ ಹಿಡಿದು ಓಡಾಡುವಂತಾಗಿದೆ. ಕಾರಣ ಭಾರೀ ವಾಹನಗಳ ಸಂಚಾರ. ಅತ್ಯಂತ ಆತಂಕದ ವಿಚಾರವೆಂದರೆ ಇಲ್ಲಿ ಸಂಚರಿಸುವ ಅದೆಷ್ಟೋ ವಾಹನಗಳು ಸುಸ್ಥಿತಿಯಲ್ಲಿರುವುದಿಲ್ಲ. ಇತ್ತ ನಮ್ಮ ಪಾಲಿಕೆ, ಮುಡಾ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸುವ ಗೋಜಿಗೆ ಹೋಗಿಲ್ಲ. ಒಟ್ಟಾರೆ ಈ ರಸ್ತೆಯಲ್ಲಿ ಸಂಚರಿಸುವವರ ಪಾಡು ಹೆಣ ಪಾಡಾಗಿದೆ.

– ಕೃಷ್ಣರಾಜು, ಶಿವರಾತ್ರೀಶ್ವರನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಬದುಕಲು ಬಿಡಿ ಪ್ಲೀಸ್

Live and let live ಎಂಬ ನಾಣ್ಣುಡಿ ಜಗತ್ಪ್ರಸಿದ್ಧ. ಪ್ರತಿಯೊಬ್ಬರೂ ಬದುಕಬೇಕು, ಬೇರೆಯವರೂ ಬದುಕಲು ಬಿಡಬೇಕು – ತಮ್ಮಿಚ್ಛೆಯಂತೆ ಬದುಕಿದರೆ ಸಾಕು ಎಂಬ ಸ್ವಾರ್ಥ ಭಾವನೆಯಿಂದ ಬೇರೆಯವರಿಗೆ ಬದುಕಲು ಬಿಡದೆ ಅಡ್ಡಿ–ಆತಂಕಗಳನ್ನು ಒಡ್ಡುವವರೇ ಅಧಿಕ. ಇದೆಲ್ಲವನ್ನು ಗಮನಿಸಿ ಶ್ರೀ ಜಯಪ್ರಕಾಶ್ ಪುತ್ತೂರು ಅವರು ಬರೆದಿರುವ ಪುಸ್ತಕ **ಬದುಕಲು ಬಿಡಿ ಪ್ಲೀಸ್**. ಇದು ಅವರು ಬರೆದಿರುವ ಪ್ರಬಂಧಗಳ ಸಂಕಲನ. ಇದರಲ್ಲಿ ಇಪ್ಪತ್ತೈದು ಪುಟ್ಟ–ಪುಟ್ಟ ಹೃದಯಂಗಮ ಪ್ರಬಂಧಗಳಿವೆ. ಮೊದಲನೆಯದನ್ನು ಪ್ರಬಂಧವೆಂದು ಹೇಳಲಾಗದು. ಅದೊಂದು ಕವಿತೆ. 60ರ ಅರಳು–ಮರುಳು ಎಂದು ಅದರ ಶೀರ್ಷಿಕೆ.

**60 ಕಳೆದೊಡನೆ ನೆನಪಾಯಿತು,
ಈ ಲೋಕದ ಮಾತು
ಆಗುವುದಂತೆ ಮನುಜರಿಗೆ
ಅರಳು–ಮರುಳು.
ಅಬ್ಬಾ! ಇದುವರೆಗೆ ಇತ್ತು...
ನನಗೆ 'ಅಂಕಲ್' ಸ್ಥಾನ ಮಾತ್ರ
ಈಗ ಕೂದಲು ಕಪ್ಪಾಗಿಸಿಕೊಂಡರೂ
ಕರೆದರು ನೋಡಿ ತಾತ!**

ಎಂದು ಅದರ ಪ್ರಾರಂಭ. ಇಲ್ಲಿ ಅವರು ಹೇಳಿರುವ ಅನುಭವಗಳು 60 ದಾಟಿದವರೆಲ್ಲರ ಅನುಭವಗಳೇ. ಇನ್ನೊಬ್ಬರನ್ನು ಬದುಕಲು ಬಿಡುವ ಸದ್ಗುಣ ಎಂಬ ಪ್ರಬಂಧದಲ್ಲಿ 'ಇವ ನಮ್ಮವ, ಇವ ನಮ್ಮವನೆಂದೆನಿಸಯ್ಯ' ಎಂಬ ಬಸವಣ್ಣನವರ ವಚನದಂತೆ ನಾವು ಬದುಕಬೇಕೆಂಬುದನ್ನು ಸಾರವತ್ತಾಗಿ ಲೇಖಕರು ತಿಳಿಸಿದ್ದಾರೆ. ಈ ಪ್ರಬಂಧಗಳ ಮುಖ್ಯ ತತ್ತ್ವಗಳನ್ನು ದೃಢಪಡಿಸಲು ಅವರು ಡಿ.ವಿ.ಜಿ. ಅವರ ಮಂಕುತಿಮ್ಮನ ಕಗ್ಗದ ಪದ್ಯಗಳನ್ನು ಅಲ್ಲೇ ಬಳಸಿಕೊಂಡಿರುವುದೊಂದು ವಿಶೇಷ. ಕ್ಷಮೆ ಎಂಬ ಪ್ರಬಂಧದಲ್ಲಿ ನಾನಾ ವಿಧದ ಜನರ ಸ್ವಭಾವಗಳನ್ನು ಜಯಪ್ರಕಾಶರು ತಿಳಿಸಿದ್ದಾರೆ. ಇದಕ್ಕೆ ಅವರು ಕೊಟ್ಟಿರುವ ಕಗ್ಗದ ಪದ್ಯ ಅದ್ಭುತವಾಗಿದೆ.

**ಕಲ್ಲಾಗಿ ನಿಲ್ಲುವನು, ಬಳ್ಳಿವೊಲು
ಬಳುಕುವನು ಮುಳ್ಳಾಗಿ
ಚುಚ್ಚುವನು ಫುಲ್ಲ ಸುಮವಹನು,
ಕಲ್ಲೋಲವಾರಿಧಿವೊಲುರವಣಿಸಿ
ಮೊರೆಯುವನು ಕ್ಷುಲ್ಲಮಾನಿಸನಿವನು
ಮಂಕುತಿಮ್ಮ ॥**

ಒಂದು ಕಚೇರಿಯ ಅಥವಾ ಸಂಸ್ಥೆಯ ಅಧಿಕಾರಿಗಳಾಗಿರುವವರು ತಾವು ಹೇಳಿದುದೇ ಸರಿ, ತಾವು ಮಾಡಿದುದೇ ನ್ಯಾಯ ಎಂದು ಭಾವಿಸುವುದುಂಟು. ಕೈ ಕೆಳಗಿರುವವರು ವಿಧಿಯಿಲ್ಲದೆ ಅದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಅಂತಹ ಸಂದರ್ಭಗಳನ್ನು ಕಂಡಿದ್ದ ಲೇಖಕರು ಬರೆಯುತ್ತಾರೆ "ಓರ್ವರಿಗೆ ಸಹೋದ್ಯೋಗಿಗಳಿಂದ ಬರುವ ಎಲ್ಲ ಫೈಲ್‌ಗಳಲ್ಲಿ ಟೀಕೆ–ಟಿಪ್ಪಣಿ ಹಾಕುತ್ತಾ ತಿದ್ದುಪಡಿ ಮಾಡುವ ಚಟವಿತ್ತು. ತೀರಾ ಸಂಶಯ ಪ್ರವೃತ್ತಿ ಈ ಮನುಷ್ಯನ ಉಸಿರಾದಂತಿತ್ತು" (ಪು.15). ಇಂಥವರು ಬೇರೆಯವರನ್ನು ಬದುಕಲು ಬಿಡರು.

'ನಿಮಗೆ ವಯಸ್ಸಾಯಿತಲ್ಲಾ' ಎಂಬ ಪ್ರಬಂಧದಲ್ಲಿ ವೃದ್ಧರಿಗೆ ಅಥವಾ ಹಿರಿಯ ನಾಗರಿಕರಿಗೆ ಲೇಖಕರು ಉತ್ತಮ ಸಲಹೆಗಳನ್ನು ಕೊಟ್ಟಿದ್ದಾರೆ– "ಒಂದು ರೀತಿಯ ಜೀವನ ತೃಪ್ತಿಯನ್ನು ಕಂಡುಕೊಂಡು ಸ್ಥಿತಪ್ರಜ್ಞತೆಯ ಭಾವಕ್ಕಾಗಿ ಪ್ರಯತ್ನ ಮಾಡುವುದು ನಿಜಕ್ಕೂ ಒಳ್ಳೆಯದು. ಅಂದರೆ ನಿರಾಶಾಭಾವದ ಛಾಯೆ ತಂದುಕೊಳ್ಳಲೇಬಾರದು. ಹೀಗೆ ಮನೆಯಲ್ಲಿ ಶಾಂತ ವಾತಾವರಣವನ್ನು ಬೆಳೆಸಲು ಪ್ರಯತ್ನಿಸುತ್ತಾ ಸ್ನೇಹಶೀಲತೆಯಿಂದ ಹೊರಗಿನ ಜಗತ್ತನ್ನು ಕಾಣಲು ಹೊರಟರೆ ಮುಂದಿನ ದಿನಗಳು ಸುಗಮವಾಗಿ ಸಾಗಲು ಸಾಧ್ಯ (ಪು.44). "ಒಬ್ಬ ವ್ಯಕ್ತಿಯು ವಯಸ್ಸಾದಾಗ 'ವೃದ್ಧ' ಅಲ್ಲ– 'ಹಿರಿಯ'ನಾಗಬೇಕು" ಇತ್ಯಾದಿ ನುಡಿಗಳು ಉತ್ತಮ ಸೂಕ್ತಿಗಳಾಗಿವೆ. ಇವಕ್ಕಾಗಿ ಎಲ್ಲರೂ ಶ್ರೀ ಜಯಪ್ರಕಾಶರಿಗೆ ಕೃತಜ್ಞರಾಗಿರಬೇಕು.

ಈ ಲೇಖಕರ ಅಸಾಧಾರಣ ಸೌಭಾಗ್ಯವೇನೆಂದರೆ ಡಾ. ಎ.ಪಿ.ಜೆ.ಅಬ್ದುಲ್ ಕಲಾಂ ಅವರೊಡನೆ ಕೆಲಸ ಮಾಡುವ ಅವಕಾಶ ಅವರಿಗೆ ಸಿಕ್ಕಿತ್ತು. ನಮ್ಮ ದೇಶ ಕಂಡ ಶ್ರೇಷ್ಠ ರಾಷ್ಟ್ರಪತಿ ಕಲಾಂ. ಅವರ ಉತ್ತಮ ಗುಣಗಳೆಂದರೆ ಮಾನವೀಯತೆ ಮತ್ತು ಸರಳತೆ. ಅವರು ಬರೆದ Wings of Fire ಎಂಬ ಗ್ರಂಥವನ್ನು ನಮ್ಮ ಜಯಪ್ರಕಾಶ್ ಪುತ್ತೂರು **ಅಗ್ನಿಯ ರೆಕ್ಕೆಗಳು** ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ (2002). ಇದು ಈಗಾಗಲೇ ಹದಿನೈದು ಮುದ್ರಣಗಳನ್ನು ಕಂಡಿದೆ. ಜಯಪ್ರಕಾಶರೇ ಬರೆದ **ಕಲಾಂ ಜೀವನ ಧರ್ಮ** (2018) ಈಗಾಗಲೇ ಆರು ಬಾರಿ ಮುದ್ರಿತ. ಕಲಾಂ ಅವರ ಹೆಸರೇ ಹಾಗೆ ಸ್ಫೂರ್ತಿಯ ಸೆಲೆಯಾಗಿದೆ. ಅವರು ರಾಷ್ಟ್ರಪತಿಗಳಾಗಿದ್ದಾಗ ಅನೇಕ ಕ್ರಾಂತಿಕಾರಕ ಬದಲಾವಣೆಗಳು ರಾಷ್ಟ್ರಪತಿ ಭವನದಲ್ಲಿ ಸದ್ದು–ಗದ್ದಲವಿಲ್ಲದೆ ಜರುಗಿದುವು. ಅವುಗಳಲ್ಲಿ ಕೆಲವನ್ನು ಜಯಪ್ರಕಾಶ್ ಪುತ್ತೂರು ಪ್ರಸ್ತುತ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಅವುಗಳಲ್ಲೊಂದು –

"ಕಲಾಂ ಅವರು ಪ್ರಥಮವಾಗಿ ಮಾಡಿದ ಕೆಲಸವೇನೆಂದರೆ, ತಮ್ಮ ಪಾದರಕ್ಷೆಗಳನ್ನು ನೋಡಿಕೊಳ್ಳುವ, ಅವುಗಳನ್ನು ಕಾಲುಗಳಿಗೆ ತೊಡಿಸುವ ಪರಿಚಾರಕನಿಗೆ ಆ ಕೆಲಸದಿಂದ ಬಿಡುಗಡೆಗೊಳಿಸಿ ಬೇರೆ ಕೆಲಸಕ್ಕೆ ನಿಯುಕ್ತಿಗೊಳಿಸಿದ್ದು. ತಾವು ನೆಲೆಸಿದ್ದ ವೇಳೆ ರಾಷ್ಟ್ರಪತಿ ಭವನದಲ್ಲಿ ದೊಡ್ಡ ಬದಲಾವಣೆಯನ್ನು ತಂದು ಸರಳವಾಗಿ ಬದುಕುತ್ತಾ ಹೀಗೂ ರಾಷ್ಟ್ರಪತಿಗಳು ಇರಲು ಸಾಧ್ಯವೆಂದು ತೋರಿಸಿಕೊಟ್ಟರು" (ಪ.121–122).

ಅಲ್ಪಸ್ವಲ್ಪ ಅಧಿಕಾರ ಸಿಕ್ಕಿದರೂ ತಮ್ಮ ಸಮಾನರೇ ಇಲ್ಲವೆಂದು ದಿಮಾಕು ತೋರಿಸುವ ರಾಜಕಾರಣಿಗಳೆಲ್ಲಿ, ಅತ್ಯುನ್ನತ ಸ್ಥಾನ ದೊರಕಿದ್ದರೂ ಸರಳತೆಯನ್ನು ಮೈಗೂಡಿಸಿಕೊಂಡ ಕಲಾಂ ಎಲ್ಲಿ! ರಾಷ್ಟ್ರಪತಿ ಸ್ಥಾನ ಕೇವಲ ಆಲಂಕಾರಿಕವಲ್ಲ, ರಾಷ್ಟ್ರಪತಿ ದೇಶದ ಪ್ರಜೆಗಳ ನಾಡಿ ಮಿಡಿತವನ್ನು ಅರಿತಿರಬೇಕು. ಅವರ ಸುಖವೇ ತನ್ನ ಸುಖವೆಂದು ತಿಳಿಯಬೇಕು.

**ಸ್ವ ಸುಖಂ ನ ಸುಖಂ ರಾಜ್ಞಃ
ಪ್ರಜಾನಾಂ ತು ಸುಖಂ ಸುಖಮ್ ।**

ಎಂಬ ಮಾತನ್ನು ಕಲಾಂ ಆಚರಣೆಗೆ ತಂದರು. ಅಂಚೆಯಾಳುಗಳು, ಪ್ರಾಥಮಿಕ ಶಾಲಾ ಶಿಕ್ಷಕರು, ವಿಕಲಚೇತನರು, ರೈತರು, ಮಕ್ಕಳು ಇತ್ಯಾದಿ ಎಲ್ಲರನ್ನೂ ರಾಷ್ಟ್ರಪತಿ ಭವನಕ್ಕೆ ಕರೆಸಿಕೊಂಡು ವಿಚಾರ ವಿನಿಮಯವನ್ನು ಮಾಡಿ ಅವರ ಕಷ್ಟ–ಸುಖಗಳನ್ನು ಕಲಾಂ ಅರಿತುಕೊಳ್ಳುತ್ತಿದ್ದರು. ಇಂತಹ ರಾಷ್ಟ್ರಪತಿ ಇದ್ದುದು ಭಾರತದ ಪುಣ್ಯಫಲ. ಅವರ ವೈಶಿಷ್ಟ್ಯವನ್ನು ಜಯಪ್ರಕಾಶ್ ಪುತ್ತೂರು ಒಂದು ಪ್ರಬಂಧದಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಈ ಪುಸ್ತಕದ ಮುನ್ನುಡಿಯನ್ನು ಹಿರಿಯ ಸಾಹಿತಿಗಳೂ, ಖ್ಯಾತ ವಿದ್ವಾಂಸರೂ, ಯಕ್ಷಗಾನ ಕಲಾವಿದರೂ ಆಗಿರುವ ಪ್ರೊ. ಜಿ.ಎಸ್. ಭಟ್ ಅವರು ಬರೆದಿದ್ದಾರೆ. ಅವರು ಲೇಖಕರ ಬಗೆಗೆ ಹೇಳಿದ್ದಾರೆ. "ಜೆ.ಪಿ. ಒಬ್ಬ ಪ್ರತಿಭಾವಂತ ಹಾಗೂ ಬಹುಮುಖ ಪ್ರತಿಭೆಯ ವ್ಯಕ್ತಿ. ಬದುಕಿನ ಚಿತ್ರವನ್ನು ಜೀವನೋತ್ಸಾಹದಿಂದ ನೋಡುವ ಅವರ ದೃಷ್ಟಿ ಸಾಹಿತ್ಯದಲ್ಲಿ ಎಲ್ಲರನ್ನೂ ಆಕರ್ಷಿಸುತ್ತದೆ. ಅವರು ಕವಿ, ಭಾಷಾಂತರಕಾರ, ಪತ್ರಕರ್ತ, ಸಂಘಟಕ.

ಈಗ ಕರ್ನಾಟಕದಲ್ಲಿ ಚುನಾವಣೆಯ ಕೋಲಾಹಲ ನಡೆಯುತ್ತಿದೆ. ಯಾರು ಗೆಲ್ಲುವರೋ, ಯಾರು ಮುಖ್ಯಮಂತ್ರಿಗಳಾಗುವರೋ ತಿಳಿಯದು. ಅವರಿಗೆ ಜಯಪ್ರಕಾಶ್ ಪುತ್ತೂರು (ಜಯಪ್ರಕಾಶ್ ರಾವ್) ಕೆಲವು ಸಲಹೆಗಳನ್ನಿತ್ತಿದ್ದಾರೆ.

* ಯಾವುದೇ ಕಾರಣಕ್ಕೂ ರಾಜ್ಯ ಸುತ್ತಾಡಲು ಬೊಕ್ಕಸ ಖಾಲಿ ಮಾಡುವ ಹೆಲಿಕಾಪ್ಟರ್ ಪ್ರವಾಸವನ್ನು ಕಡ್ಡಾಯವಾಗಿ ನಿಲ್ಲಿಸತಕ್ಕದ್ದು. ಇಂತಹ ಹಾರಾಟವನ್ನು ಕೇವಲ ನೈಸರ್ಗಿಕ ಪ್ರಕೋಪಗಳು ಹಾಗೂ ಇನ್ನಿತರ ಗಂಡಾಂತರ ಸನ್ನಿವೇಶಗಳಿಗೆ ಮಾತ್ರ ಸೀಮಿತಗೊಳಿಸತಕ್ಕದ್ದು.

* ರಾಜ್ಯದ ಬೊಕ್ಕಸದಿಂದ ಬೇಕಾಬಿಟ್ಟಿ ದೇವಸ್ಥಾನ, ಮಸೀದಿ ಹಾಗೂ ಕ್ರಿಶ್ಚಿಯನ್ ಅಥವಾ ಇನ್ನಿತರ ಧಾರ್ಮಿಕ ಸಂಸ್ಥೆಗಳು ಹಾಗೂ ಸಂಘಟನೆಗಳಿಗೆ ಮುಖ್ಯಮಂತ್ರಿಯೋರ್ವ ತನ್ನ ಮನೆಯಿಂದ ಕೊಡಮಾಡಿದ ಧನದಂತೆ ವಿನಿಯೋಗ ಮಾಡಬಾರದು.

* ಆರ್ಥಿಕ ಶಿಸ್ತು, ನಿಯಮಾವಳಿಗಳನ್ನು ಗಾಳಿಗೆ ತೂರಿ ಯಾವುದೇ ರೀತಿಯ ಸಾಲಮನ್ನಾ ಇತ್ಯಾದಿ ವ್ಯಕ್ತಿ ಪ್ರತಿಷ್ಠೆಯ ಕಾರುಬಾರುಗಳನ್ನು ನಿಲ್ಲಿಸತಕ್ಕದ್ದು.

* ರಾಜ್ಯದ ಜ್ವಲಂತ ಸಮಸ್ಯೆಗಳಾದ ಕಾವೇರಿ ನೀರು ಯೋಜನೆ, ಮಹದಾಯಿ ಯೋಜನೆ, ಅಂತಾರಾಜ್ಯ ನೀರು ಹಂಚಿಕೆ ಹಾಗೂ ಇನ್ನಿತರ ವಿಚಾರಗಳಿಗೆ ಓರ್ವ ಜನಸಾಮಾನ್ಯರ ಪ್ರತಿನಿಧಿಯಾಗಿ ಪಕ್ಷಾತೀತ ಹಾಗೂ ನ್ಯಾಯ ಸಮಂಜಸ ನಿರ್ಧಾರಗಳಿಂದ ಪ್ರಾಮಾಣಿಕತೆ ಹಾಗೂ ರಾಜ್ಯದ ನಿಷ್ಠೆಯನ್ನು ಎತ್ತಿ ಹಿಡಿಯಬೇಕು.

ಹೀಗೆ ಜನಪ್ರತಿನಿಧಿಗಳಾಗಿ ಚುನಾಯಿತರಾಗುವವರಿಗೂ ಲೇಖಕರು ಅನೇಕ ಸಲಹೆಗಳನ್ನೂ ನೀತಿ ಸಂಹಿತೆಗಳನ್ನೂ ಕೊಟ್ಟಿದ್ದಾರೆ (ಪು.96–97). ಆದರೆ ಅವುಗಳನ್ನು ಅನುಸರಿಸುವ ಶಾಸಕರು ಎಲ್ಲಿದ್ದಾರೆ? ಇನ್ನೊಬ್ಬ ಮಹಾತ್ಮ ಗಾಂಧಿ, ಇನ್ನೊಬ್ಬ ಲಾಲ್ ಬಹದ್ದೂರ್ ಶಾಸ್ತ್ರಿ, ಇನ್ನೊಬ್ಬ ಅಬ್ದುಲ್ ಕಲಾಂ ಹುಟ್ಟಿ ಬರಬೇಕು ಅಷ್ಟೆ. ಈಗಿರುವ ಮಹಾನುಭಾವರನ್ನು ನಾವು ಹೀಗಿರಬೇಕೆಂದು ಹೇಳುವುದು, ಹಾಸ್ಯಾಸ್ಪದ ಮಾತ್ರ. **ಬದುಕಲು ಬಿಡಿ ಪ್ಲೀಸ್** ಎಂದು ಕೇಳಿಕೊಳ್ಳುವುದಷ್ಟೆ ನಮಗೆ ಉಳಿದಿರುವುದು.

ಹಾಸನ ರಾಜಕೀಯ ಬೇರೆ, ನನ್ನ ಹೆಂಡತಿ ರಾಜಕಾರಣ ಬೇರೆ
ಅನಿತಾ ರಾಜಕೀಯಕ್ಕೆ ಬಂದಿದ್ದು ಪಕ್ಷ ಉಳಿಸಲಿಕ್ಕೆ



ಬೆಂಗಳೂರು: ನಿನ್ನೆ ಸೋಮವಾರ ಕೆ.ಆರ್. ಪೇಟೆಯಲ್ಲಿ ಕಾರ್ಯಕ್ರಮ ಮುಗಿಸಿ ಬರುವಾಗ ತಡವಾಯಿತು. ಅದರಿಂದಾಗಿ ಜೆಡಿಎಸ್‌ನ ಸ್ಪರ್ಧಿಗಳ ಎರಡನೇ ಪಟ್ಟಿ ಬಿಡುಗಡೆಯಾಗಿಲ್ಲ ಹೊರತು ಬೇರೇನು ಗೊಂದಲಗಳಿಲ್ಲ. ಹಾಸನ ವಿಷಯದಲ್ಲಿಯೂ ಯಾವುದೇ ಸಮಸ್ಯೆಯಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಮಂಗಳವಾರ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದ್ದಾರೆ.

ಕೆಲವು ಮಾಧ್ಯಮಗಳಲ್ಲಿ ಅನಿತಾ ಕುಮಾರಸ್ವಾಮಿ ಹೆಸರು ತಂದಿದ್ದಾರೆ. ಭವಾನಿಗೆ ಟಿಕೆಟ್ ಕೊಡುವುದಾದರೆ ನನಗೆ ಕೂಡ ನೀಡಬೇಕೆಂದು ಪಟ್ಟು ಹಿಡಿದಿದ್ದಾರೆ ಎಂದು ವರದಿಗಳು ಬರುತ್ತಿವೆ. ನಮ್ಮ ಕುಟುಂಬದಲ್ಲಿ ಅನಿತಾ ಕುಮಾರಸ್ವಾಮಿಯವರನ್ನು ಎರಡು ಮೂರು ಬಾರಿ ಪಕ್ಷದ ಅಭ್ಯರ್ಥಿ ಇಲ್ಲದೇ ಇದ್ದಾಗ ನಿಲ್ಲಿಸಲಾಗಿತ್ತಷ್ಟೆ, ಹೊರತು ಅವರಿಗೆ ಆಸಕ್ತಿಯಿರಲಿಲ್ಲ. ಕಾರ್ಯಕರ್ತರು ಮತ್ತು ದೇವೇಗೌಡರ ಸೂಚನೆ ಒತ್ತಡ ಮೇರೆಗೆ ಅನಿತಾ ಚುನಾವಣೆಗೆ ನಿಂತು ಗೆದ್ದರು. ಇನ್ನು ಮುಂದೆ ಅಭ್ಯರ್ಥಿಯಾಗಲು ಅವರಿಗೆ ಒಲವು ಇಲ್ಲ. ಚುನಾವಣಾ ರಾಜಕೀಯದಿಂದ ದೂರವುಳಿದಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಪಕ್ಷದ ಅಭ್ಯರ್ಥಿ ಇಲ್ಲದಿದ್ದಾಗ ಪಕ್ಷದ ಗೌರವ ಉಳಿಸಲು ಕರೆದುಕೊಂಡು ಬಂದು ನಿಲ್ಲಿಸಿದೆವು, ನಾವೇ ಅವರನ್ನು ರಾಜಕೀಯವಾಗಿ ದುರುಪಯೋಗಪಡಿಸಿಕೊಂಡಿದ್ದೇವೆಯೇ ಹೊರತು ಅವರಿಗೆ ಸ್ವಂತ ಆಸಕ್ತಿಯಿರಲಿಲ್ಲ. ಚುನಾವಣಾ ಕಣದಿಂದ ದೂರವುಳಿದು ನಿಖಿಲ್ ಕುಮಾರಸ್ವಾಮಿಗೆ ಬಿಟ್ಟುಬಿಟ್ಟಿದ್ದಾರೆ. ರಾಜಕೀಯದಿಂದ ದೂರ ಉಳಿದಿದ್ದಾರೆ ಎಂದರು.

ಹಾಸನ ರಾಜಕೀಯ ಬೇರೆ: ಹಾಸನ ಜಿಲ್ಲೆ ರಾಜಕಾರಣ ಬೇರೆ, ನನ್ನ ಹೆಂಡತಿ ರಾಜಕಾರಣ ಬೇರೆ, ಸೊಸೆಯಂದಿರ ಮಧ್ಯೆ ಹೊಡೆದಾಟ ಇಲ್ಲ, ನನ್ನ ಹೆಂಡತಿ ರಾಜಕೀಯಕ್ಕೆ ಬಂದಿದ್ದು ಪಕ್ಷ ಉಳಿಸಲಿಕ್ಕೆ. ಹಾಗಾಗಿ ಆ ಕೆಟಗರಿಗೆ ಇಲ್ಲಿಯದನ್ನು ಸೇರಿಸಬೇಕಾಗಿಲ್ಲ. ಪಕ್ಷ ಉಳಿಸಲು ಕೆಲವು ತೀರ್ಮಾನ ಮಾಡಿದ್ದೇನೆ. ಪಕ್ಷ ಕಟ್ಟಿ ಅದನ್ನು ಉಳಿಸಲು ಪಟ್ಟಿರುವ ಕಷ್ಟ ನನಗೆ ಗೊತ್ತು. ಹಾಗಾಗಿ ನನ್ನ ಕುಟುಂಬವನ್ನು ಅನಿತಾ ಕುಮಾರಸ್ವಾಮಿಯನ್ನು ಮಧ್ಯೆ ತರಬೇಡಿ, ಅವರು ಗೌರವಯುತವಾಗಿ ಕುಟುಂಬದ ಮರ್ಯಾದೆ ಉಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಖಾರವಾಗಿಯೇ ಪ್ರತಿಕ್ರಿಯಿಸಿದರು.

ಮಂಡ್ಯದಲ್ಲಿ ಷಡ್ಯಂತ್ರ ನಡೆಯುತ್ತಿದೆ: ಮಂಡ್ಯದಲ್ಲಿ ಜೆಡಿಎಸ್ ಅನ್ನು ಸೋಲಿಸಲು ಕಾಂಗ್ರೆಸ್, ರೈತಸಂಘಗಳು ಒಟ್ಟಾಗುತ್ತಿರುವುದನ್ನು ನೋಡುತ್ತಿದ್ದೀರಿ. ಕಳೆದ ಲೋಕಸಭೆ ಚುನಾವಣೆಯಲ್ಲಿ ಅದನ್ನು ಮಾಡಿದ್ದರು, ಈ ಬಾರಿ ಕೂಡ ಮುಂದುವರಿಸಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹೇಳಿದರು.

ನಾನು ಕಿಂಗ್ ಆಗುವುದನ್ನು ತಪ್ಪಿಸಲು ಸಾಧ್ಯವಿಲ್ಲ: ವಿಪಕ್ಷ ನಾಯಕ ಸಿದ್ದರಾಮಯ್ಯ ಸಿಎಂ ಬಯಕೆ ವ್ಯಕ್ತಪಡಿಸಿದ ವಿಚಾರಕ್ಕೆ ಸಂಬಂಧಿಸಿ ಮಾಜಿ ಸಿಎಂ ಸಿದ್ದರಾಮಯ್ಯಗೆ ಹೆಚ್.ಡಿ.ಕುಮಾರಸ್ವಾಮಿ ಟಾಂಗ್ ಕೊಟ್ಟಿದ್ದಾರೆ. ನಾನು ಕಿಂಗ್ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಈ ಬಾರಿ ನಾವು 100–120 ಸ್ಥಾನ ಗೆಲ್ಲುತ್ತೇವೆ. ಕಾಂಗ್ರೆಸ್ ಹಾಗೂ ಬಿಜೆಪಿ 60ರಿಂದ 70 ಸ್ಥಾನ ದಾಟುವುದಿಲ್ಲ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಗಳ ಕೋಟಾ ದೊಡ್ಡದಿದೆ. ಸಿದ್ದರಾಮಯ್ಯ ನಾನೇ ಸಿಎಂ ಆಗ್ತೀನಿ ಎಂದು ಅನ್ಕೊಂಡಿದ್ದಾರೆ. ಯಾವುದೇ ಕಾರಣಕ್ಕೂ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದಿಲ್ಲ ಎಂದರು.

ಜೆಡಿಎಸ್ ಶಾಸಕರ ಸಂಖ್ಯೆ 40ರಿಂದ 31ಕ್ಕೆ ಕುಸಿತ

ಬೆಂಗಳೂರು: 2018ರ ವಿಧಾನಸಭೆ ಚುನಾವಣೆಯಲ್ಲಿ 40 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದ ಜೆಡಿಎಸ್–ಕಾಂಗ್ರೆಸ್ ಜೊತೆ ಸೇರಿ ಸಮ್ಮಿಶ್ರ ಸರ್ಕಾರ ರಚಿಸಿತ್ತು. ಆದರೆ ಅದಾದ ನಂತರ ರಾಜಕೀಯ ಬೆಳವಣಿಗೆಗಳಲ್ಲಿ ಹಲವು ಶಾಸಕರು ಜೆಡಿಎಸ್ ತೊರೆದು ಈಗ ಒಟ್ಟು ಶಾಸಕರ ಸಂಖ್ಯೆ 31ಕ್ಕೆ ಕುಸಿದಿದೆ. ಇತ್ತೀಚೆಗೆ ಅರಸೀಕೆರೆ ಶಾಸಕ ಕೆ.ಎಂ ಶಿವಲಿಂಗೇಗೌಡ ಜೆಡಿಎಸ್ ತೊರೆದಿದ್ದಾರೆ. ಈ ವೇಳೆ ಮಾತನಾಡಿರುವ ಅವರು, ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಶಾಸಕರ ಸಂಖ್ಯೆ ಮತ್ತಷ್ಟು ಕುಸಿಯಲಿದೆ ಎಂದಿದ್ದಾರೆ. ಜೆಡಿಎಸ್ ಕರಗುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ವಿಧಾನಸಭೆ ಜೆಡಿಎಸ್ ಉಪನಾಯಕ ಬಂಡೆಪ್ಪ ಕಾಶೆಂಪೂರ್, ಈ ಶಾಸಕರು ನಿರ್ಗಮಿಸುವುದರಿಂದ ಪಕ್ಷದ ಮೇಲೆ ಯಾವುದೇ ದುಷ್ಪರಿಣಾಮ ಬೀರುವುದಿಲ್ಲ ಎಂದಿದ್ದಾರೆ. ನಾವು 93 ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ್ದೇವೆ ಅವರಲ್ಲಿ ಯಾರಾದರೂ ಪಕ್ಷ ತೊರೆದಿದ್ದಾರೆಯೇ?, ಇಲ್ಲ ಅಭ್ಯರ್ಥಿಗಳ ಪಟ್ಟಿಯಲ್ಲಿ ಹೆಸರಿಲ್ಲದ ಈ ವ್ಯಕ್ತಿಗಳು ಮಾತ್ರ ಜೆಡಿಎಸ್ ತೊರೆದಿದ್ದಾರೆ, ಅದರಿಂದ ನಮಗೆ ತೊಂದರೆಯಾಗುವುದಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಕಾಂಗ್ರೆಸ್–ಬಿಜೆಪಿ ತೊರೆದು ಜೆಡಿಎಸ್ ಸೇರ್ಪಡೆಯಾಗಿರುವ ಮನೋಹರ್ ತಹಶೀಲ್ದಾರ್ ಅವರಂತಹ ಅನೇಕ ನಾಯಕರು ನಮ್ಮಲ್ಲಿದ್ದು, ನಮ್ಮ ಶಾಸಕರ ಗೆಲುವಿನ ಸಂಖ್ಯೆ ಹೆಚ್ಚಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಜೆಡಿಎಸ್ ತೊರೆದು ಹೋಗಿರುವ ಇವರೆಲ್ಲ ಮತ್ತೆ ಗೆಲುವು ಸಾಧಿಸುವುದು ಕಷ್ಟ ಎಂದಿದ್ದಾರೆ.

ನನ್ನ ಸ್ವಂತ ಕ್ಷೇತ್ರ ಹಾಗೂ ಶಿವಲಿಂಗೇಗೌಡರ ಕ್ಷೇತ್ರದಲ್ಲಿ ಜೆಡಿಎಸ್‌ನ ಪ್ರಮುಖ ಬೆಂಬಲಿಗರಾಗಿರುವ ಒಕ್ಕಲಿಗರನ್ನು ಹೊರತುಪಡಿಸಿ ಇತರೆ ಸಮುದಾಯಗಳು ಹೆಚ್ಚಿನ ಸಂಖ್ಯೆಯಲ್ಲಿವೆ. 1991ರಲ್ಲಿ ದೇವೇಗೌಡರು ಇಲ್ಲಿ ಸ್ಪರ್ಧಿಸಿ ಅರಸೀಕೆರೆ ಭಾಗದಲ್ಲಿ ಕೇವಲ 13 ಸಾವಿರ ಮತ ಗಳಿಸಿದ್ದರು. 2004ರಲ್ಲಿ ಜೆಡಿಎಸ್‌ನ ಮತಗಳಿಕೆ 22 ಸಾವಿರಕ್ಕಿಂತ ಹೆಚ್ಚಾಗಿತ್ತು. ಏಕೆಂದರೆ ಇದು ಹಾಸನ ಅಥವಾ ಮಂಡ್ಯದ ಕೆಲವು ಕ್ಷೇತ್ರಗಳಂತೆ ಒಕ್ಕಲಿಗರಿಂದ ತುಂಬಿರುವ ಕ್ಷೇತ್ರವಲ್ಲ, ಹೀಗಾಗಿ ಶಿವಲಿಂಗೇಗೌಡರು ಮತ್ತೊಮ್ಮೆ ಆಯ್ಕೆಯಾಗುವುದು ಕಷ್ಟವೇನಲ್ಲ ಎಂದು ಗುಬ್ಬಿ ಮಾಜಿ ಶಾಸಕ ಎಸ್.ಆರ್.ಶ್ರೀನಿವಾಸ್ ಹೇಳಿದ್ದಾರೆ. ಶ್ರೀನಿವಾಸ್ ಜೆಡಿಎಸ್ ತೊರೆಯುವ ಕುರಿತು ಉತ್ತರಿಸಿದ ಶಿವಲಿಂಗೇಗೌಡ, ಶ್ರೀನಿವಾಸ್ ತಮ್ಮ ಕ್ಷೇತ್ರದಿಂದ ತಮ್ಮ ಬೆಂಬಲಿಗರೊಬ್ಬರಿಗೆ ಪಕ್ಷದಿಂದ ಎಂಎಲ್‌ಸಿ ಸ್ಥಾನ ಕೇಳಿದರು, ಆದರೆ ಪಕ್ಷ ನಿರಾಕರಿಸಿತು. ಹೀಗಾಗಿ ಅವರ ಬೆಂಬಲಿಗರು ಪಕ್ಷದಿಂದ ಹೊರಬರುವಂತೆ ಒತ್ತಾಯಿಸಿದರು, ಹೀಗಾಗಿ ತಮ್ಮ ಬೆಂಬಲಿಗರ ಸೂಚನೆ ಅನುಸರಿಸುತ್ತಿದ್ದಾರೆ ಎಂದರು.


ನ್ಯಾಯದಾನದಲ್ಲಿ ಕರ್ನಾಟಕ ನಂ.1, 2ನೇ ಸ್ಥಾನದಲ್ಲಿ ತ.ನಾಡು

ನವದೆಹಲಿ: ನ್ಯಾಯದಾನದಲ್ಲಿ ಕರ್ನಾಟಕ ಅಗ್ರಸ್ಥಾನಕ್ಕೇರಿದ್ದು 2022ರ ಭಾರತೀಯ



ನ್ಯಾಯಾಂಗ ವರದಿ (ಐಜೆಆರ್) ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ. 1 ಕೋಟಿಗೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ 18 ದೊಡ್ಡ ಹಾಗೂ ಮಧ್ಯಮ ಗಾತ್ರದ ರಾಜ್ಯಗಳ ಪೈಕಿ ಕರ್ನಾಟಕ ಅಗ್ರಸ್ಥಾನದಲ್ಲಿದ್ದರೆ, ತಮಿಳುನಾಡು 2ನೇ ಸ್ಥಾನ ಹಾಗೂ ತೆಲಂಗಾಣ 3ನೇ ಸ್ಥಾನದಲ್ಲಿದೆ. ಪೊಲೀಸ್, ನ್ಯಾಯಾಂಗ, ಕಾರಾಗೃಹಗಳು ಮತ್ತು ಕಾನೂನು ನೆರವುಗಳೇ ಮುಂತಾದ ನ್ಯಾಯದಾನದ ಪ್ರಕ್ರಿಯೆಯಲ್ಲಿ ಉತ್ತರ ಪ್ರದೇಶ 18ನೇ ಸ್ಥಾನದಲ್ಲಿದೆ. ಪೊಲೀಸ್, ನ್ಯಾಯಾಂಗ, ಕಾರಾಗೃಹಗಳು ಮತ್ತು ಕಾನೂನು ನೆರವುಗಳನ್ನು ಪರಿಗಣಿಸಿ ಈ ವರದಿಯನ್ನು ಪ್ರಕಟಿಸಲಾಗಿದೆ.

ಗುಜರಾತ್ 4ನೇ ಸ್ಥಾನದಲ್ಲಿದ್ದು, ಆಂಧ್ರಪ್ರದೇಶ 5ನೇ ಸ್ಥಾನದಲ್ಲಿದೆ. 1 ಕೋಟಿಗೂ ಕಡಿಮೆ ಜನಸಂಖ್ಯೆ ಇರುವ 7 ಸಣ್ಣ ರಾಜ್ಯಗಳ ಪೈಕಿ ಸಿಕ್ಕಿಮ್ ಮೊದಲ ಸ್ಥಾನ ಪಡೆದಿದೆ. 2020ರಲ್ಲಿ ಸಿಕ್ಕಿಮ್ 2ನೇ ಸ್ಥಾನದಲ್ಲಿತ್ತು. 2020ರಲ್ಲಿ 5ನೇ ಸ್ಥಾನದಲ್ಲಿದ್ದ ಅರುಣಾಚಲ ಪ್ರದೇಶ ಈ ಬಾರಿ ಸಿಕ್ಕಿಂ ನಂತರದ ಸ್ಥಾನದಲ್ಲಿದ್ದರೆ, 2020ರಲ್ಲಿ ಮೊದಲ ಸ್ಥಾನದಲ್ಲಿದ್ದ ತ್ರಿಪುರಾ ಈಗ 3ನೇ ಸ್ಥಾನಕ್ಕೆ ಕುಸಿದಿದ್ದು, ಕೊನೆಯ ಸ್ಥಾನದಲ್ಲಿ ಗೋವಾ ಇದೆ. 2019ರಲ್ಲಿ ಟಾಟಾ ಟ್ರಸ್ಟ್ ಐಜೆಆರ್ ಪ್ರಾರಂಭಿಸಿತ್ತು. ಈ ವರ್ಷ ಪ್ರಕಟವಾಗಿರುವುದು 3ನೇ ಆವೃತ್ತಿ.



ಶಾರದಾದೇವಿನಗರದಲ್ಲಿ ನಡೆದ ಸಮಾರಂಭದಲ್ಲಿ ಜೆಡಿಎಸ್ ಮುಖಂಡ ಸಿ.ಕುಮಾರ್ ಹುಟ್ಟುಹಬ್ಬದ ಅಂಗವಾಗಿ ಅವರನ್ನು ಶಾಸಕ ಜಿ.ಟಿ.ದೇವೇಗೌಡರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಪ್ರತಿಮಾ ಶೇಖರ್, ಮಧು, ನವೀನ್‌ಕುಮಾರ್, ಪುಟ್ಟಸ್ವಾಮಿ, ಕುಮಾರ್, ಗಂಗಾಧರ್, ಚೇತನ್, ಚೆಲುವರಾಜು, ಚೇತನ್ ಬಾಬು, ಯೋಗೇಶ್, ರಾಕೇಶ್, ನಾಗಣ್ಣ, ಮಲ್ಲಿಕ್, ಶಿವಣ್ಣ, ವಿರೂಪಾಕ್ಷ, ಚರಣ್, ಸುಂದರ್‌ರಾಜ್, ಅಯ್ಯಣ್ಣ, ಅನಿಲ್, ಚಂದನ್‌ಗೌಡ, ಮಹಿಳಾ ಮುಖಂಡರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ವಿಧಾನಸಭಾ ಚುನಾವಣೆ–2023

ಸಿದ್ದರಾಮಯ್ಯ, ಸುರ್ಜೇವಾಲಾ ಭರವಸೆ ಹಿನ್ನೆಲೆ ಅಯೂಬ್ ಖಾನ್ ಅಸಮಾಧಾನ ಶಮನ



> ಪಕ್ಷದಿಂದ ಟಿಕೆಟ್ ತಪ್ಪಿದ್ದಕ್ಕೆ ಬೇಸರವಾಗಿತ್ತು ಆದರೆ, ಸಿದ್ದರಾಮಯ್ಯ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ನನ್ನನ್ನು ಕರೆಸಿ ಮಾತನಾಡಿ ಭರವಸೆಗಳನ್ನು ನೀಡಿದ್ದಾರೆ. ಕಾಂಗ್ರೆಸ್ ಪಕ್ಷ ಬಿಟ್ಟು ನಾನು ಎಲ್ಲೂ ಹೋಗಲ್ಲ. ಪಕ್ಷದಲ್ಲಿಯೇ ಉಳಿದುಕೊಂಡು ಚುನಾವಣೆಯಲ್ಲಿ ಶಾಸಕ ತನ್ವೀರ್ ಸೇಠ್ ಅವರ ಪರ ಪ್ರಚಾರ ಮಾಡುತ್ತೇನೆ.
> –ಅಯೂಬ್ ಖಾನ್, ಮಾಜಿ ಮೇಯರ್, ಪಾಲಿಕೆ ಸದಸ್ಯ

ಮೈಸೂರು, ಏ.4(ಜಿಎ)–ಮೈಸೂರಿನ ಎನ್.ಆರ್(ನರಸಿಂಹರಾಜ)ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಘೋಷಣೆ ನಂತರ ಇತರ ಟಿಕೆಟ್ ಆಕಾಂಕ್ಷಿಗಳ ಅಸಮಾಧಾನವನ್ನು ಪಕ್ಷದ ರಾಜ್ಯ ಮತ್ತು ರಾಷ್ಟ್ರಮಟ್ಟದ ಮುಖಂಡರು ಶಮನಗೊಳಿಸಿದ್ದಾರೆ.

ಎನ್.ಆರ್ ಕ್ಷೇತ್ರದಲ್ಲಿ ಶಾಸಕ ತನ್ವೀರ್ ಸೇಠ್‌ಗೆ ಟಿಕೆಟ್ ಘೋಷಣೆ ನಂತರ, ಪ್ರಮುಖ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಮೇಯರ್ ಹಾಗೂ ಹಾಲಿ ಪಾಲಿಕೆ ಸದಸ್ಯ ಅಯೂಬ್ ಖಾನ್ ಬೇಸರ ವ್ಯಕ್ತಪಡಿಸಿದ್ದರು. ಇದನ್ನು ಗಮನಿಸಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಅವರನ್ನು ಸಮಾಧಾನಪಡಿಸಿದ್ದು, ಮುಂಬರುವ ದಿನಗಳಲ್ಲಿ ಸೂಕ್ತ ಸ್ಥಾನಮಾನ ನೀಡುವುದಾಗಿ ಭರವಸೆ ನೀಡಿದ್ದಾರೆ.

ಶಾಸಕ ತನ್ವೀರ್ ಆರೋಗ್ಯ ಸಮಸ್ಯೆ ಇರುವುದರಿಂದ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದ್ದರು. ನಂತರ ಅವರ ಅಭಿಮಾನಿಗಳು ಮತ್ತು ಬೆಂಬಲಿಗರು ತನ್ವೀರ್ ಸೇಠ್ ಅವರು ಚುನಾವಣೆಯಲ್ಲಿ ಸ್ಪರ್ಧಿಸಲೇ ಬೇಕು ಎಂದು ಪಟ್ಟು ಹಿಡಿದು, ಆತ್ಮಹತ್ಯೆಗೂ ಯತ್ನಿಸಿದ್ದರು. ಈ ವೇಳೆ ತನ್ವೀರ್ ಸೇಠ್ ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ ಎಂದು ತಿಳಿಸಿದರು.

ಇವರ ಈ ಹೇಳಿಕೆ ನಂತರ ಅಯೂಬ್ ಖಾನ್ ಅವರ ಬದಲು ತಮಗೆ ಟಿಕೆಟ್ ನೀಡುವಂತೆ ಪಕ್ಷದ ವರಿಷ್ಠರ ಮುಂದೆ ಬೇಡಿಕೆ ಇಟ್ಟಿದ್ದರು. ಆದರೆ, ಕಾಂಗ್ರೆಸ್‌ನ ಮೊದಲ ಪಟ್ಟಿಯಲ್ಲಿಯೇ ತನ್ವೀರ್ ಸೇಠ್ ಅವರಿಗೆ ಟಿಕೆಟ್ ಘೋಷಣೆಯಾಗಿತ್ತು. ಇದರಿಂದ ಅಯೂಬ್ ಖಾನ್ ಮತ್ತು ಅವರ ಬೆಂಬಲಿಗರು ಬೇಸರಗೊಂಡಿದ್ದರು. ಅವರ ಮನೆ ಮುಂದೆ ಜಮಾವಣೆಗೊಂಡ ನೂರಾರು ಬೆಂಬಲಿಗರು ತಾವು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ, ನಾವು ನಿಮಗೆ ಸಹಕಾರ ನೀಡುತ್ತೇವೆ ಎಂದು ಪ್ರತಿಭಟನೆ ಕೂಡ ಮಾಡಿದ್ದರು. ಇದರ ನಡುವೆ ಅಯೂಬ್ ಖಾನ್ ಸಹ ಜೆಡಿಎಸ್ ಕಡೆ ಮುಖ ಮಾಡುವ ನಿರ್ಧಾರ ಕೈಗೊಂಡಿದ್ದರು.

ಅಯೂಬ್ ಖಾನ್ ಪಕ್ಷದಲ್ಲಿ ಮುನಿಸಿಕೊಂಡಿರುವುದನ್ನು ಗಮನಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಭಿನ್ನಮತ ದೂರ ಮಾಡುವ ನಿಟ್ಟಿನಲ್ಲಿ ಭಾನುವಾರ ಅಯೂಬ್‌ಖಾನ್ ಮನೆಗೆ ಭೇಟಿ ನೀಡಿ, ಅವರ ಜೊತೆ ಮಾತನಾಡುವ ನಿರ್ಧಾರಕ್ಕೂ ಬಂದಿದ್ದರು. ಆದರೆ, ಅಂದು ಮೈಸೂರಿನ ಟೌನ್‌ಹಾಲ್ ಮುಂಭಾಗ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ಏರ್ಪಡಿಸಿದ್ದ ಹಿನ್ನೆಲೆಯಲ್ಲಿ ಅವರ ನಿವಾಸಕ್ಕೆ ಭೇಟಿ ನೀಡಲು ಸಾಧ್ಯವಾಗಲಿಲ್ಲ.

ನಂತರ ಶಾಸಕ ಜಮೀರ್ ಅಹಮ್ಮದ್ ಅವರನ್ನು ಅಯೂಬ್ ಖಾನ್ ಅವರ ನಿವಾಸಕ್ಕೆ ಕಳುಹಿಸಿ, ಅವರನ್ನು ಸಿದ್ದರಾಮಯ್ಯ ಅವರ ನಿವಾಸಕ್ಕೆ ಕರೆದುಕೊಂಡು ಬರುವಂತೆ ಸೂಚಿಸಿದ್ದರು. ಜಮೀರ್, ತಮ್ಮ ಕಾರಿನಲ್ಲಿಯೇ ಸಿದ್ದರಾಮಯ್ಯ ಅವರ ಮನೆಗೆ ಅಯೂಬ್ ಖಾನ್ ಅವರನ್ನು ಕರೆದೊಯ್ದಿದ್ದರು.

ಸಿದ್ದರಾಮಯ್ಯ, ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಅಯೂಬ್ ಖಾನ್ ಅವರೊಟ್ಟಿಗೆ ಮಾತನಾಡಿ, ಈ ಬಾರಿ ನಮ್ಮ ಪಕ್ಷ ಅಧಿಕಾರಕ್ಕೆ ಬರುವುದು ನಿಶ್ಚಿತ. ಆದ್ದರಿಂದ ನೀವು ದುಡುಕಿ ಯಾವುದೇ ನಿರ್ಧಾರ ತೆಗೆದುಕೊಳ್ಳಬೇಡಿ. ಪಕ್ಷ ಎಲ್ಲವನ್ನು ಗಮನಿಸುತ್ತಿದೆ. ಆದ್ದರಿಂದ ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ. ಪಕ್ಷ ಅಧಿಕಾರಕ್ಕೆ ಬಂದ ನಂತರ ನಿಮಗೆ ಸೂಕ್ತ ಸ್ಥಾನಮಾನ ನೀಡುತ್ತದೆ ಎಂದು ಭರವಸೆ ನೀಡುವ ಮೂಲಕ ಅಯೂಬ್ ಖಾನ್ ಭಿನ್ನಮತವನ್ನು ಶಮನಗೊಳಿಸಿದ್ದಾರೆ.

ಸೋಷಿಯಲ್ ಮೀಡಿಯಾದಲ್ಲಿ ಅಭ್ಯರ್ಥಿಗಳ ನಕಲಿ ಪಟ್ಟಿ ವೈರಲ್

ಕಾಂಗ್ರೆಸ್ ವಿರುದ್ಧ ಬಿಜೆಪಿ ವಾಗ್ದಾಳಿ



ಬೆಂಗಳೂರು: ಮೇ 10ರಂದು ನಡೆಯಲಿರುವ ವಿಧಾನಸಭಾ ಚುನಾವಣೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಅಭ್ಯರ್ಥಿಗಳ ಪಟ್ಟಿಯನ್ನು ನಕಲಿ ಎಂದು ಬಿಜೆಪಿ ಮಂಗಳವಾರ ಹೇಳಿದೆ ಮತ್ತು ಇದು ಕಾಂಗ್ರೆಸ್ ಕಾರ್ಖಾನೆಯಲ್ಲಿ ತಯಾರಿಸಿದ ಸುಳ್ಳು ಎಂದು ಆರೋಪಿಸಿದೆ.

ಆಡಳಿತ ಪಕ್ಷವು ಇನ್ನೂ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿಲ್ಲ ಮತ್ತು ಏ.8ರಂದು ತನ್ನ ಸಂಸದೀಯ ಮಂಡಳಿ ಸಭೆಯ ನಂತರ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡುವ ಸಾಧ್ಯತೆಯಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ನೇತೃತ್ವದಲ್ಲಿ ನಡೆದ ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿ ಸಭೆಯ ನಂತರ 81 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಲಾಗಿದೆ ಎಂಬ ನಾಲ್ಕು ಪುಟಗಳ 'ನಕಲಿ' ಪಟ್ಟಿಯು ಸಾಮಾಜಿಕ ಮಾಧ್ಯಮದಲ್ಲಿ ಓಡಾಡುತ್ತಿದೆ. ಆದರೆ, ಈ ಪಟ್ಟಿ ನಕಲಿ ಎಂದು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ಉಸ್ತುವಾರಿ ಅರುಣ್ ಸಿಂಗ್ ಹೇಳಿಕೆಯನ್ನು ಉಲ್ಲೇಖಿಸಿ ರಾಜ್ಯ ಬಿಜೆಪಿ ಹೇಳಿಕೆ ಬಿಡುಗಡೆ ಮಾಡಿದೆ.

ಕಾಂಗ್ರೆಸ್‌ನ ಸುಳ್ಳಿನ ಕಾರ್ಖಾನೆಯಿಂದ ಮತ್ತೊಂದು ಸುಳ್ಳು. ಬಿಜೆಪಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಈ ಪಟ್ಟಿ ನಕಲಿಯಾಗಿದೆ ಎಂದು ಬಿಜೆಪಿ ರಾಜ್ಯ ಘಟಕ ಟ್ವೀಟ್ ಮಾಡಿದೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿಟಿ ರವಿ ಕೂಡ ಟ್ವೀಟ್ ಮಾಡಿ, ಕಾಂಗ್ರೆಸ್ ಫೇಕ್ ನ್ಯೂಸ್ ಫ್ಯಾಕ್ಟರಿ ಬಿಜೆಪಿ ಅಭ್ಯರ್ಥಿಗಳ ಪಟ್ಟಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿದೆ. ಮುಂಬರುವ ವಿಧಾನಸಭಾ ಚುನಾವಣೆಗೆ ನಾವು ಅಭ್ಯರ್ಥಿಗಳನ್ನು ಅಂತಿಮಗೊಳಿಸಿಲ್ಲ ಎಂಬುದು ಕನ್ನಡಿಗರಿಗೆ ಗೊತ್ತಿದೆ. ಸೋಲಿನ ಭೀತಿಯಲ್ಲಿರುವ ಕಾಂಗ್ರೆಸ್ ಬಿಜೆಪಿ ವಿರುದ್ಧ ತನ್ನ ಎಂದಿನ ಅಗ್ಗದ ತಂತ್ರಗಳನ್ನು ಹೂಡಿದೆ ಎಂದು ಆರೋಪಿಸಿದ್ದಾರೆ.

ಇದಕ್ಕೂ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುತ್ತಿದ್ದು, ಏ.8ರಂದು ಪಕ್ಷದ ಕೇಂದ್ರ ನಾಯಕತ್ವವು ಅಂತಿಮಗೊಳಿಸಿದ ನಂತರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಎಂದು ಹೇಳಿದ್ದರು.

ಬಿಜೆಪಿಯಿಂದ ಅಚ್ಚರಿಯ ಅಭ್ಯರ್ಥಿಗಳು ಕಣದಲ್ಲಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಖಂಡಿತವಾಗಿಯೂ ಕೆಲವು ಕ್ಷೇತ್ರಗಳಲ್ಲಿ ಹೊಸ ಪ್ರಯೋಗಗಳ ಯೋಜನೆ ಇದೆ ಮತ್ತು ಅವು ನಡೆಯುತ್ತವೆ' ಎಂದರು.

ಮೈಸೂರು ಜಿಲ್ಲೆಯಲ್ಲಿ ಮತದಾರರ ಸೆಳೆಯಲು 97 ಮಾದರಿ ಮತಗಟ್ಟೆ ಸ್ಥಾಪನೆ

- 55 ಸಖಿ ಬೂತ್, 11 ವಿಶೇಷಚೇತನರ ಬೂತ್, 11 ಯುವ, 10 ಥೀಮ್ ಬೇಸ್ಡ್, 10 ಎಥ್ನಿಕ್ ಬೂತ್ ನಿರ್ಮಾಣ
- ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಹೀಗೆ ಆಕರ್ಷಕ ಬೂತ್ ನಿರ್ಮಾಣ; ಇದೇ ಮೊದಲ ಬಾರಿಗೆ ಸ್ಥಾಪನೆಯಾಗಲಿರುವ ವಿಶೇಷ ಮತಗಟ್ಟೆಗಳು



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದ ವಿವಿ ಮೊಹಲ್ಲಾದ ಸರ್ಕಾರಿ ಬಾಲಕಿಯರ ಶಾಲೆಯನ್ನು ಅತ್ಯಾಕರ್ಷಕ ರೀತಿ ಸಿಂಗರಿಸಲಾಗಿದೆ.

> ವಿವಿ ಮೊಹಲ್ಲಾದ ಸರ್ಕಾರಿ ಬಾಲಕಿಯರ ಶಾಲಾ ಕಟ್ಟಡವನ್ನು ಜಗನ್ಮೋಹನ ಅರಮನೆಯಂತೆ ರೂಪಿಸಿ, ಸಿಂಗರಿಸಲಾಗಿದೆ. ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನ ಮಾಡಲು ಮತಗಟ್ಟೆ ವಾತಾವರಣ ಸುಧಾರಿಸಲಾಗಿದೆ. ಇನ್ನಷ್ಟು ಕಾರ್ಯಕ್ರಮಗಳ ಮೂಲಕ ಮತದಾನ ಮಾಡುವ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ.
> –ರಂಜಿತ್‌ಕುಮಾರ್, ಸ್ವೀಪ್ ನೋಡಲ್ ಅಧಿಕಾರಿ, ಮೈಸೂರು ಮಹಾನಗರ ಪಾಲಿಕೆ



ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಏ.4–ಪ್ರತಿ ಸಾರ್ವತ್ರಿಕ ಚುನಾವಣೆಯಲ್ಲಿ ಮತದಾನ ಮಾಡಲು ಮತಗಟ್ಟೆಗಳಿಗೆ ತೆರಳಲು ಮೂಗು ಮುರಿಯುವ ವರ್ಗವೊಂದಿದೆ. ಸರದಿ ಸಾಲಿನಲ್ಲಿ ನಿಂತು ಮತ ಚಲಾಯಿಸಲು ಹಿಂದೇಟು ಹಾಕುವವರಲ್ಲೂ ಆಸಕ್ತಿ ಮೂಡಿಸುವ ಸಲುವಾಗಿ ಮೈಸೂರು ಜಿಲ್ಲಾಡಳಿತ ಈ ಬಾರಿ 97 ವೈಶಿಷ್ಟ್ಯಪೂರ್ಣ ಮಾದರಿ ಮತಗಟ್ಟೆಗಳನ್ನು ಸ್ಥಾಪಿಸಿ ಮತದಾನದ ಪ್ರಮಾಣ ವೃದ್ಧಿಸಲು ಕ್ರಮ ಕೈಗೊಂಡಿದೆ.

ನಗರ ಪ್ರದೇಶದಲ್ಲೂ ಹೆಚ್ಚಿನ ಮತದಾನ ದಾಖಲಿಸಲು ಪಣತೊಟ್ಟಿರುವ ಜಿಲ್ಲಾಡಳಿತ ಈ ಹಿಂದಿನ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿರುವ ಬಡಾವಣೆಗಳ ಮತಗಟ್ಟೆ ಗುರುತಿಸಿ, ಅವುಗಳ ಕಾಯಕಲ್ಪಕ್ಕೆ ಕ್ರಮ ಕೈಗೊಂಡಿದೆ. ಜಿಲ್ಲೆಯಲ್ಲಿರುವ 11 ವಿಧಾನಸಭಾ ಕ್ಷೇತ್ರಗಳಲ್ಲೂ ಮಾದರಿ ಮತಗಟ್ಟೆಗಳನ್ನು ಸ್ಥಾಪಿಸಿ, ಆ ಮೂಲಕ ಮತದಾರರನ್ನು ಸೆಳೆಯಲು ನಿರ್ಧರಿಸಿದೆ.

55 ಸಖಿ ಬೂತ್: ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಿರ್ಮಿಸಿದಂತೆ ಈ ಬಾರಿಯೂ ಮಹಿಳಾ ಮತದಾರರಿಗಾಗಿಯೇ ವಿಶೇಷ ಬೂತ್ ನಿರ್ಮಿಸಲಾಗುತ್ತಿದೆ. 11 ಕ್ಷೇತ್ರಗಳಲ್ಲೂ ತಲಾ ಐದು ಸಖಿ ಬೂತ್‌ಗಳನ್ನು ನಿರ್ಮಿಸುವ ಮೂಲಕ ಮಹಿಳಾ ಮತದಾರರಿಗೆ ಪ್ರತ್ಯೇಕ ಮನ್ನಣೆ ನೀಡಲಾಗುತ್ತಿದೆ.

ವಿಶೇಷಚೇತನರಿಗೂ ಆದ್ಯತೆ: ಮತದಾನ ಪ್ರಕ್ರಿಯೆಯಲ್ಲಿ ವಿಶೇಷಚೇತನರು ಸಕ್ರಿಯವಾಗಿ ಪಾಲ್ಗೊಳ್ಳಲು ಪ್ರೇರಣೆ ನೀಡುವುದಕ್ಕಾಗಿ ಈ ಬಾರಿ ಜಿಲ್ಲೆಯಲ್ಲಿನ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ತಲಾ ಒಂದೊಂದರಂತೆ ಒಟ್ಟು 11 ವಿಶೇಷಚೇತನರ ಮತಗಟ್ಟೆ ಸ್ಥಾಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಉಳಿದಂತೆ ಎಲ್ಲಾ ಮತಗಟ್ಟೆಗಳಲ್ಲೂ ವಿಶೇಷ ಚೇತನರು ಮತದಾನ ಮಾಡಲು ಸರದಿ ಸಾಲಿನಿಂದ ವಿನಾಯಿತಿ ನೀಡಲಾಗಿದೆ.

ಯುವ ಮತದಾರರಿಗಾಗಿ: ಯುವ ಮತದಾರರು ಮತದಾನ ಪ್ರಕ್ರಿಯೆಯಿಂದ ದೂರವುಳಿಯದಂತೆ ನೋಡಿಕೊಳ್ಳಲು ಹಾಗೂ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರೇರಣೆ ನೀಡಲು ಈ ಬಾರಿ ಪ್ರತಿಯೊಂದು ಕ್ಷೇತ್ರದಲ್ಲೂ ತಲಾ ಒಂದು ಮತಗಟ್ಟೆಯಂತೆ ಜಿಲ್ಲೆಯಲ್ಲಿ 11 ಯುವ ಮತದಾರರ ಮತಗಟ್ಟೆ ಸ್ಥಾಪಿಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ಹೊಸ ಹಾಗೂ ಯುವ ಮತದಾರರಿಗೆ ಆದ್ಯತೆ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಥೀಮ್ ಬೇಸ್ಡ್ ಬೂತ್: ಈ ಬಾರಿ ಹೊಸ ಪರಿಕಲ್ಪನೆಯಲ್ಲಿ ಥೀಮ್ ಬೇಸ್ಡ್ ಮತಗಟ್ಟೆಯನ್ನು ಸ್ಥಾಪಿಸಲಾಗುತ್ತಿದೆ. ವರುಣಾ ಕ್ಷೇತ್ರ ಹೊರತುಪಡಿಸಿ, 10 ಕ್ಷೇತ್ರಗಳಲ್ಲೂ ತಲಾ ಒಂದು ಥೀಮ್ ಬೇಸ್ಡ್ ಮತಗಟ್ಟೆ ನಿರ್ಮಿಸಲಾಗುತ್ತಿದೆ. ಈ ಮತಗಟ್ಟೆಗಳನ್ನು ಬೇರೆ ಬೇರೆ ಸ್ವರೂಪದಲ್ಲಿ ಅಲಂಕರಿಸಲಾಗುತ್ತದೆ. ವಿಶೇಷವಾದ ಚಿತ್ರಣದೊಂದಿಗೆ ಮತದಾರರಿಗೆ ಮುದ ನೀಡಲಿವೆ.

ಎಥ್ನಿಕ್ ಬೂತ್: ಜಿಲ್ಲೆಯಲ್ಲಿ ಈ ಬಾರಿ 10 ಸಾಂಪ್ರದಾಯಿಕ ಬೂತ್ ಸ್ಥಾಪಿಸಲಾಗುತ್ತಿದೆ. ಪಿರಿಯಾಪಟ್ಟಣ, ಕೆ.ಆರ್.ನಗರ, ನಂಜನಗೂಡು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ತಲಾ ಒಂದು, ಹುಣಸೂರು ಹಾಗೂ ಹೆಚ್.ಡಿ.ಕೋಟೆ ಕ್ಷೇತ್ರದಲ್ಲಿ ತಲಾ ಮೂರು ಸಾಂಪ್ರದಾಯಿಕ ಬೂತ್ ನಿರ್ಮಿಸಲಾಗುತ್ತಿದೆ. ಈ ಬೂತ್‌ನಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿರುವ ಸಿಬ್ಬಂದಿ ಸಾಂಪ್ರದಾಯಿಕ ಉಡುಗೆ ತೊಟ್ಟು ಕರ್ತವ್ಯ ನಿರ್ವಹಿಸಲಿದ್ದು, ತಳಿರು–ತೋರಣಗಳಿಂದ ಮತಗಟ್ಟೆ ಕಂಗೊಳಿಸಲಿದೆ. ಬುಡಕಟ್ಟು ಮತದಾರರು ಇರುವ ಸ್ಥಳಗಳಲ್ಲಿ ಅವರ ಸಾಂಪ್ರದಾಯಿಕ ಕುರುಹುವುಳ್ಳ ಮತಕೇಂದ್ರ ಸ್ಥಾಪಿಸಲಾಗುತ್ತದೆ.

ಜಗನ್ಮೋಹನ ಅರಮನೆ ಮಾದರಿಯ ವಿನ್ಯಾಸ: ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿ ಮೊಹಲ್ಲಾದಲ್ಲಿ ಮತಗಟ್ಟೆಯೊಂದನ್ನು ಜಗನ್ಮೋಹನ ಅರಮನೆಯಂತೆ ವಿನ್ಯಾಸಗೊಳಿಸಲು ಜಿಲ್ಲಾಡಳಿತ ನಿರ್ಧರಿಸಿದೆ. ಶಿಥಿಲಾವಸ್ಥೆ ತಲುಪಿದ್ದ ಸರ್ಕಾರಿ ಬಾಲಕಿಯರ ಶಾಲಾ ಕಟ್ಟಡಕ್ಕೆ ಹೊಸ ವಿನ್ಯಾಸದ ಮೆರಗು ನೀಡಲಾಗಿದೆ. ಮತಗಟ್ಟೆ ಸಂಖ್ಯೆ 113, 114 ಹಾಗೂ 115ನೇ ಮತಗಟ್ಟೆ ಹೊಂದಿರುವ ಈ ಶಾಲಾ ಕಟ್ಟಡವನ್ನು ಜಗನ್ಮೋಹನ ಅರಮನೆಯಂತೆ ರೂಪು–ರೇಷೆ ನೀಡಿ ಸಿಂಗರಿಸಲಾಗಿದೆ. ಮಾಸಿದ ಬಣ್ಣ, ಸುತ್ತಲೂ ಗಿಡಗಂಟಿಯಿಂದ ಕೂಡಿದ್ದ ಕಟ್ಟಡವನ್ನು ಸ್ವಚ್ಛಗೊಳಿಸಿ, ಸಿಂಗರಿಸಲಾಗಿದ್ದು, ಮತದಾರರ ಆಕರ್ಷಿಸುವುದರಲ್ಲಿ ಸಂಶಯವೇ ಇಲ್ಲ.

ಮೈಸೂರಿನ ಇನ್ನಿತರ ಕ್ಷೇತ್ರಗಳಲ್ಲೂ ಆರು ಮತಗಟ್ಟೆಗಳನ್ನು ವಿಶೇಷ ರೀತಿ ವಿನ್ಯಾಸಗೊಳಿಸಲಾಗುತ್ತದೆ. ಚಾಮರಾಜ, ನರಸಿಂಹರಾಜ, ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಬಾರಿ ಚುನಾವಣೆಯಲ್ಲಿ ಶೇ.60ಕ್ಕಿಂತ ಕಡಿಮೆ ಮತದಾನವಾಗಿರುವ ಹಿನ್ನೆಲೆಯಲ್ಲಿ ಆಕರ್ಷಕ ಮತಕೇಂದ್ರಗಳು ಮತದಾನಕ್ಕೆ ಪ್ರೇರಣೆ ನೀಡಲಿದೆ. ಚಾಮರಾಜ ಕ್ಷೇತ್ರದಲ್ಲಿ ಕಳೆದ ಬಾರಿ ಚುನಾವಣೆಯಲ್ಲಿ ಶೇ.59.18ರಷ್ಟು ಮತದಾನವಾಗಿದೆ. ಶೇ.20ರಷ್ಟು ಮತಗಟ್ಟೆಗಳಲ್ಲಿ ಶೇ. 40ರಿಂದ 55ರಷ್ಟು ಮಾತ್ರ ಮತದಾನವಾಗಿದ್ದು, ಮತದಾನದ ಪ್ರಮಾಣ ಹೆಚ್ಚಿಸಲು ಮೈಸೂರು ಜಿಲ್ಲಾಡಳಿತ ಹೊಸ ಮಾರ್ಗ ಕಂಡುಕೊಂಡಿದೆ.

ಪಿರಿಯಾಪಟ್ಟಣ ಜಿದ್ದಾ–ಜಿದ್ದಿಯಲ್ಲಿ ಗೆದ್ದು ಬರುವವರ‍್ಯಾರು....!?

ಮೋಹನ್ ಕಾಯಕ

ಉತ್ಕೃಷ್ಟ ದರ್ಜೆಯ ತಂಬಾಕು ಬೆಳೆಗೆ ಫೇಮಸ್ ನಮ್ಮ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರ, ಕಾಂಗ್ರೆಸ್–ಜೆಡಿಎಸ್‌ನ ನೇರ ಹಣಾಹಣಿಯ ಕ್ಷೇತ್ರವೆಂದೇ ಗುರ್ತಿಸಿಕೊಂಡಿದೆ. ಸೋತು–ಗೆದ್ದವರೋ ಅಥವಾ ಗೆದ್ದು–ಸೋತವರಲ್ಲಿ ಯಾರು ಕ್ಷೇತ್ರದ ಅಧಿಪತಿಯಾಗಲಿದ್ದಾರೆ ಎಂಬ ಕುತೂಹಲ ಕೆರಳಿಸಿದೆ...!



ಮೊದಲ ಸಾರ್ವತ್ರಿಕ ಚುನಾವಣೆಯಿಂದಲೂ ಅಸ್ತಿತ್ವದಲ್ಲಿರುವ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಾಬಲ್ಯ ಸಾಧಿಸಿದ್ದು, ಜೆಡಿಎಸ್ ಪ್ರಬಲ ಪೈಪೋಟಿ ನೀಡಿದೆ. ಒಂದು ಬಾರಿಯಷ್ಟೇ ಕಮಲ ಅರಳಿದ್ದು, 2023ಕ್ಕೆ ಕ್ಷೇತ್ರದ ಮತದಾರರು ಯಾರ ಕೈ ಹಿಡಿಯಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ.

ಪಿರಿಯಾಪಟ್ಟಣ ಕ್ಷೇತ್ರದ 15 ಸಾರ್ವತ್ರಿಕ ಚುನಾವಣೆಯಲ್ಲಿ 7 ಬಾರಿ ಕಾಂಗ್ರೆಸ್, ಜೆಡಿಎಸ್ 3, ಜನತಾ ಪಕ್ಷ 2, ಬಿಜೆಪಿ 1 ಹಾಗೂ ಪಕ್ಷೇತರರು 2 ಬಾರಿ ಜಯ ಗಳಿಸಿವೆ. 1952ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಪಕ್ಷೇತರರಾದ ಎಸ್.ಎಂ.ಮರಿಯಪ್ಪ ಅವರು ಕಾಂಗ್ರೆಸ್‌ನ ಹೆಚ್.ಎಂ.ಚನ್ನಬಸಪ್ಪ ಅವರನ್ನು ಸೋಲಿಸಿ, ಆಯ್ಕೆಯಾಗಿದ್ದರು. 1957ರಲ್ಲಿ ಕಾಂಗ್ರೆಸ್ ಎನ್.ಆರ್.ಸೋಮಣ್ಣ, 1962ರಲ್ಲಿ ಕಾಂಗ್ರೆಸ್‌ನ ಕೆ.ಎಂ.ದೇವಯ್ಯ ಜಯಗಳಿಸಿದ್ದರು.

ಕಾಂಗ್ರೆಸ್ ಬಿಟ್ಟು 1967ರಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಹೆಚ್.ಎಂ.ಚನ್ನಬಸಪ್ಪ ಮೊದಲ ಬಾರಿಗೆ ವಿಧಾನಸಭೆ ಪ್ರವೇಶ ಪಡೆದರು. ನಂತರ 1972ರಲ್ಲಿ ಮತ್ತೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸತತ 2ನೇ ಗೆಲುವು ದಾಖಲಿಸಿದರು. ಹಾಗೆಯೇ 1978ರಲ್ಲಿ ಜನತಾಪಕ್ಷದಿಂದ ಆಯ್ಕೆಯಾದ ಕೆ.ಎಸ್.ಕಾಳಮರೀಗೌಡರು, 1983ರ ವೇಳೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸತತ 2ನೇ ಬಾರಿ ಆಯ್ಕೆಯಾದರು. 1985ರಲ್ಲಿ ಕಾಂಗ್ರೆಸ್ ಎಲ್.ಆನಂದ್ ಅವರಿಗೆ ಟಿಕೆಟ್ ನೀಡಿದಾಗ ಜನತಾಪಕ್ಷದಿಂದ ಸ್ಪರ್ಧಿಸಿದ್ದ ಕೆ.ವೆಂಕಟೇಶ್ ಜಯಭೇರಿ ಬಾರಿಸಿ ಮೊದಲ ಬಾರಿಗೆ ಶಾಸಕರಾದರು. 1989ರಲ್ಲಿ ಕಾಂಗ್ರೆಸ್‌ನಿಂದ ಮತ್ತೆ ಟಿಕೆಟ್ ಗಿಟ್ಟಿಸಿಕೊಂಡ ಕೆ.ಎಸ್.ಕಾಳಮರೀಗೌಡರು ಮೂರನೇ ಬಾರಿ ವಿಧಾನಸಭೆಗೆ ಆಯ್ಕೆಯಾದರು.

1994ರಲ್ಲಿ ಜನತಾದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿದ ಕೆ.ವೆಂಕಟೇಶ್ ಎರಡನೇ ಬಾರಿ ಗೆದ್ದರೆ, ಮಾಜಿ ಸಚಿವ ಹೆಚ್.ಎಂ.ಚನ್ನಬಸಪ್ಪ ಅವರ ಪುತ್ರ ಹೆಚ್.ಸಿ.ಬಸವರಾಜು 1999ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಗೆಲುವು ಸಾಧಿಸುವ ಮೂಲಕ ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಮೊದಲ ಬಾರಿಗೆ ಕಮಲ ಅರಳಿಸಿದರು. 2004ರಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಜಯಗಳಿಸಿದ ಕೆ.ವೆಂಕಟೇಶ್, 2008 ಮತ್ತು 2013ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಜಯಿಸುವ ಮೂಲಕ ಹ್ಯಾಟ್ರಿಕ್ ಸಾಧನೆ ಜೊತೆಗೆ 5ನೇ ಗೆಲುವು ದಾಖಲಿಸಿದರು.

ಹ್ಯಾಟ್ರಿಕ್ ಸೋಲಿನಿಂದ ಪಾರು: 2008 ಮತ್ತು 2013ರಲ್ಲಿ ಜೆಡಿಎಸ್‌ನಿಂದ ಕಣಕ್ಕಿಳಿದು ಸೋಲು ಅನುಭವಿಸಿದ ಕೆ.ಮಹದೇವ್, 2018ರಲ್ಲಿ ಭರ್ಜರಿ ಜಯದೊಂದಿಗೆ ಹ್ಯಾಟ್ರಿಕ್ ಸೋಲಿನಿಂದ ಪಾರಾದರು. ಈ ಮೂಲಕ ಕ್ಷೇತ್ರದಲ್ಲಿ ಜೆಡಿಎಸ್, ಕಾಂಗ್ರೆಸ್‌ಗೆ ಪೈಪೋಟಿ ನೀಡುತ್ತಾ ಬಂದಿದ್ದು, 2023ರಲ್ಲಿ ಯಾರು ಮೆಲುಗೈ ಸಾಧಿಸಲಿದ್ದಾರೆ ಕಾದು ನೋಡೋಣ.

ಹೆಚ್ಚು ಮತದಾನವಾಗುವ ಕ್ಷೇತ್ರ: ಮೈಸೂರು ಜಿಲ್ಲೆಯಲ್ಲೇ ಅತೀ ಹೆಚ್ಚಿನ ಮತದಾನವಾಗುವ ಕ್ಷೇತ್ರಗಳಲ್ಲಿ ಮೊದಲ ಸ್ಥಾನದಲ್ಲಿರುವ ಪಿರಿಯಾಪಟ್ಟಣ ಕ್ಷೇತ್ರದಲ್ಲಿ 2018ರ ಚುನಾವಣೆಯಲ್ಲಿ ಶೇ.85.80 ರಷ್ಟು ಮತದಾನವಾಗಿದೆ. 1,80,411 ಮತದಾರರ ಪೈಕಿ 1,54,800 ಮಂದಿ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವುದು ವಿಶೇಷ. ಜೆಡಿಎಸ್ ಅಭ್ಯರ್ಥಿ ಕೆ.ಮಹದೇವ್ 77,770 ಮತಗಳನ್ನು ಪಡೆದು 7,493 ಮತಗಳ ಅಂತರದಿಂದ ಗೆದ್ದಿದ್ದರು. ಕಾಂಗ್ರೆಸ್ ಕೆ.ವೆಂಕಟೇಶ್ 70,277 ಮತ ಪಡೆದರೆ, ಬಿಜೆಪಿಯ ಎಸ್.ಮಂಜುನಾಥ್ 4,047 ಮತ ಪಡೆದು 3ನೇ ಸ್ಥಾನ ಪಡೆದರು.

ಪಿ.ಪಟ್ಟಣ ಕ್ಷೇತ್ರದಿಂದ ಆಯ್ಕೆಯಾದವರು...

- 1952– ಎಸ್.ಎಂ.ಮರಿಯಪ್ಪ(ಪಕ್ಷೇತರ)
- 1957– ಎನ್.ಆರ್.ಸೋಮಣ್ಣ(ಕಾಂಗ್ರೆಸ್)
- 1962– ಕೆ.ಎಂ.ದೇವಯ್ಯ(ಕಾಂಗ್ರೆಸ್)
- 1967– ಹೆಚ್.ಎಂ.ಚನ್ನಬಸಪ್ಪ(ಪಕ್ಷೇತರ)
- 1972– ಹೆಚ್.ಎಂ.ಚನ್ನಬಸಪ್ಪ(ಕಾಂಗ್ರೆಸ್)
- 1978– ಕೆ.ಎಸ್.ಕಾಳಮರಿಗೌಡ(ಜನತಾಪಕ್ಷ)
- 1983– ಕೆ.ಎಸ್.ಕಾಳಮರಿಗೌಡ(ಕಾಂಗ್ರೆಸ್)
- 1985– ಕೆ.ವೆಂಕಟೇಶ್(ಜನತಾಪಕ್ಷ)
- 1989– ಕೆ.ಎಸ್.ಕಾಳಮರಿಗೌಡ(ಕಾಂಗ್ರೆಸ್)
- 1994– ಕೆ.ವೆಂಕಟೇಶ್(ಜನತಾದಳ)
- 1999– ಹೆಚ್.ಸಿ.ಬಸವರಾಜು(ಬಿಜೆಪಿ)
- 2004– ಕೆ.ವೆಂಕಟೇಶ್(ಜೆಡಿಎಸ್)
- 2008– ಕೆ.ವೆಂಕಟೇಶ್(ಕಾಂಗ್ರೆಸ್)
- 2013– ಕೆ.ವೆಂಕಟೇಶ್(ಕಾಂಗ್ರೆಸ್)
- 2018– ಕೆ.ಮಹದೇವ್(ಜೆಡಿಎಸ್)



ಮತದಾರರ ವಿವರ.....

ಪುರುಷರು	96930
ಮಹಿಳೆಯರು	96236
ಇತರೆ	7
ಒಟ್ಟು	1,93,173
ವಿಕಲಚೇತನರು	3257
80 ವರ್ಷ ಮೇಲ್ಪಟ್ಟವರು	5266

ಆಕಾಂಕ್ಷಿಗಳು...

ಕಾಂಗ್ರೆಸ್
ಕೆ.ವೆಂಕಟೇಶ್

ಜೆಡಿಎಸ್
ಕೆ.ಮಹದೇವ್

ಬಿಜೆಪಿ
ಸಿ.ಹೆಚ್.ವಿಜಯಶಂಕರ್
ಕೌಲನಹಳ್ಳಿ ಸೋಮಶೇಖರ್




ವಿಧಾನಪರಿಷತ್ ಸದಸ್ಯರಾದ ಡಾ. ಡಿ.ತಿಮ್ಮಯ್ಯ ಅವರ ಧರ್ಮಪತ್ನಿ ಶ್ರೀಮತಿ ಮೀರಾಬಾಯಿ ಅವರ ಮೊದಲನೇ ವರ್ಷದ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಅವರ ಕುಟುಂಬ ವರ್ಗ ಹಾಗೂ ಸಂಬಂಧಿಕರು ಶ್ರೀಮತಿ ಮೀರಾಬಾಯಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವುದರೊಂದಿಗೆ ಅವರ ಆತ್ಮಕ್ಕೆ ಚಿರಶಾಂತಿ ಕೋರಿದರು.

ಕೈ ನಾಯಕರ ಮೇಲೆ ದಾಳಿಗೆ ಐಟಿ, ಇಡಿ ಸಿದ್ಧತೆ

ಕರ್ನಾಟಕ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಗಂಭೀರ ಆರೋಪ

ನವದೆಹಲಿ: ಸಾವಿರಕ್ಕೂ ಹೆಚ್ಚು ಐಟಿ, ಇಡಿ ಅಧಿಕಾರಿಗಳನ್ನು ರಾಜ್ಯಕ್ಕೆ, ಮೋದಿ ಸರ್ಕಾರ ಕಳುಹಿಸಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಆರೋಪಿಸಿದ್ದಾರೆ.



ನವದೆಹಲಿಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಮಂಗಳವಾರ ರಾತ್ರಿ ಸುದ್ದಿಗೋಷ್ಠಿ ನಡೆಸಿ ಈ ವಿಷಯ ಬಹಿರಂಗಪಡಿಸಿದ ಅವರು, ಸಾವಿರಕ್ಕೂ ಹೆಚ್ಚು ಐಟಿ, ಇಡಿ ಅಧಿಕಾರಿಗಳು ಕರ್ನಾಟಕಕ್ಕೆ ತೆರಳಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳ ಮೇಲೆ ಈ ಅಧಿಕಾರಿಗಳು ದಾಳಿಗೆ ಮುಂದಾಗಿದ್ದು, ಹೆದರುವುದಿಲ್ಲ. ತನಿಖಾ ಸಂಸ್ಥೆಗಳ ಮೂಲಕ ನಮ್ಮನ್ನು ಎದುರಿಸಲು ಸಾಧ್ಯವಿಲ್ಲ ಎಂದು ಸರ್ಕಾರದ ವಿರುದ್ಧ ಸುರ್ಜೇವಾಲ ತೀವ್ರ ವಾಗ್ದಾಳಿ ನಡೆಸಿದರು.

ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಲು ಮೋದಿ ನೇತೃತ್ವದ ಸರ್ಕಾರ ಈ ರೀತಿಯ ಸಂಚು ಮಾಡುತ್ತಿದೆ. ನಾಳೆ ರಾಜ್ಯದಲ್ಲಿ ದಾಳಿ ಮಾಡಲು ಐಟಿ, ಇಡಿ ಅಧಿಕಾರಿಗಳು ತಯಾರಿ ನಡೆಸಿರುವುದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ.

ಸಾವಿರಕ್ಕೂ ಹೆಚ್ಚು ಐಟಿ ಮತ್ತು ಇಡಿ ಅಧಿಕಾರಿಗಳು ಕಾಂಗ್ರೆಸ್ ಮುಖಂಡರು ಮತ್ತು ಬೆಂಬಲಿಗರ ಮೇಲೆ ದಾಳಿಗೆ ತಯಾರಿ ನಡೆದಿದೆ. ನಮ್ಮ ಹಿತೈಷಿಗಳು ಹೆದರಿದ್ದಾರೆ. ಬೇರೆಯವರು ನಾವು ಕರೆ ಮಾಡಿದರೆ ಹೆದರುತ್ತಿದ್ದಾರೆ. ನಮಗೂ ಕಾಲ ಬರುತ್ತದೆ. ಬಿಜೆಪಿ, ನಮ್ಮ ಮುಖಂಡರನ್ನು ಹೆದರಿಸೋ ಕೆಲಸ ಮಾಡುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.

ಬಿಜೆಪಿಗೆ ಕರ್ನಾಟಕದಲ್ಲಿ ಸೋಲುವ ಭಯ ಶುರುವಾಗಿದೆ. ಮಾಧ್ಯಮಗಳು ನಡೆಸಿದ ಎಲ್ಲಾ ಸರ್ವೆ ನಮ್ಮ ಪರವಾಗಿವೆ. ಬಿಜೆಪಿ ಪಕ್ಷದ ಎಂಎಲ್‌ಎ, ಎಂಎಲ್‌ಸಿ ಹಾಗೂ ಇತರೆ ಮುಖಂಡರು ರಾಜೀನಾಮೆ ನೀಡಿ ಕಾಂಗ್ರೆಸ್ ಸೇರುತ್ತಿದ್ದಾರೆ. ಇದು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂಬುದಕ್ಕೆ ಸಾಕ್ಷಿ. ಮತದಾರರು ಯಾರು ಮೂರ್ಖರಲ್ಲ. ಬಿಜೆಪಿಯಲ್ಲೇ ಇದ್ದರೆ ನಮ್ಮ ಸೋಲು ಖಚಿತ ಎಂದು ಖಾತರಿ ಮಾಡಿಕೊಂಡು ಬಿಜೆಪಿ ಮುಖಂಡರು ನಮ್ಮ ಪಕ್ಷ ಸೇರುತ್ತಿದ್ದಾರೆ. ಬಿಜೆಪಿ ಹೈಕಮಾಂಡ್‌ಗೂ ಈ ವಿಷಯ ಗೊತ್ತಿದೆ. ಹಾಗಾಗಿ ಬಿಜೆಪಿಗೆ ರಾಜ್ಯದಲ್ಲಿ ನಡುಕ ಹುಟ್ಟಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ಮೈಸೂರು ಮಿತ್ರ ಬುಧವಾರ 5 ಏಪ್ರಿಲ್ 2023

ಶ್ರೀಕಾಲಭೈರವೇಶ್ವರಸ್ವಾಮಿ ವಿಜೃಂಭಣೆಯ ರಥೋತ್ಸವ



ಭಾರತೀನಗರ, ಏ.4– ಇಲ್ಲಿಗೆ ಸಮೀಪದ ಚಿಕ್ಕರಸಿನಕೆರೆಯಲ್ಲಿ ಶ್ರೀ ಕಾಲಭೈರವೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ರಥೋತ್ಸವ ಹಿನ್ನೆಲೆಯಲ್ಲಿ ಮುಂಜಾನೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆದವು. ಬಳಿಕ ಬಣ್ಣ ಬಣ್ಣ ಬಟ್ಟೆ ಹಾಗೂ ಹೂಗಳಿಂದ ಅಲಂಕಾರಗೊಳಿಸಿದ್ದ ರಥದಲ್ಲಿ ಕಾಲಭೈರವೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಮಧ್ಯಾಹ್ನ 2.30ಕ್ಕೆ ರಥೋತ್ಸವಕ್ಕೆ ಶ್ರೀಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು. ಸಾವಿರಾರು ಭಕ್ತರು ರಥ ಎಳೆಯುವ ಮೂಲಕ ಪುನೀತರಾದರು. ರಥೋತ್ಸವದಲ್ಲಿ ಡೊಳ್ಳುಕುಣಿತ, ಪೂಜಾಕುಣಿತ, ದೊಣ್ಣೆವರಸೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಭಾಗಿಯಾಗಿದ್ದವು. ಗ್ರಾಮದ ಮಹಿಳೆಯರು ರಸ್ತೆಯುದ್ದಕ್ಕೂ ರಥೋತ್ಸವಕ್ಕೆ ಪೂಜೆ ಸಲ್ಲಿಸಿದರು. ಭಕ್ತರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು. ಅಲ್ಲದೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಸತ್ಯ, ಧರ್ಮದಿಂದ ನಡೆದಾಗ ಮಾತ್ರ ಮುಕ್ತಿ ಕಾಣಲು ಸಾಧ್ಯ. ಹೀಗಾಗಿ ಪ್ರತಿಯೊಬ್ಬರೂ ದೈವ, ಅಸೂಯೆಗಳನ್ನು ಬಿಟ್ಟು ಸನ್ಮಾರ್ಗದಲ್ಲಿ ನಡೆಯಬೇಕು. ಚಿಕ್ಕರಸಿನಕೆರೆ ಕಾಲಭೈರವೇಶ್ವರಸ್ವಾಮಿ ರಥೋತ್ಸವಕ್ಕೆ ಆಗಮಿಸಿರುವ ಭಕ್ತರ ಇಷ್ಟಾರ್ಥ ಈಡೇರಿಸಲಿ ಎಂದು ಬಸಪ್ಪನಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಮೇಲುಕೋಟೆಯಲ್ಲಿ ಚೆಲುವನ ಅದ್ದೂರಿ ಮಹಾರಥೋತ್ಸವ



ಡಾ.ಹೆಚ್.ಎನ್.ಗೋಪಾಲಕೃಷ್ಣ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು



ಮೇಲುಕೋಟೆ, ಏ.4– ಶ್ರೀಚೆಲುವ ನಾರಾಯಣಸ್ವಾಮಿಯವರ ವೈರಮುಡಿ ಬ್ರಹ್ಮೋತ್ಸವದ 7ನೇ ತಿರುನಾಳ್ ಅಂಗವಾಗಿ ಮಂಗಳವಾರ ಮಹಾರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರಿತು.

ಪ್ರತಿದಿನ ಸುಡು ಬಿಸಿಲಿನ ವಾತಾವರಣ ನಿರ್ಮಿತವಾಗುತ್ತಿದ್ದ ಮೇಲುಕೋಟೆಯಲ್ಲಿ ರಥೋತ್ಸವದ ಇಡೀ ದಿನ ತಂಪಾದ ವಾತಾವರಣ ಇದ್ದ ಕಾರಣ ಭಕ್ತರು ಉತ್ಸಾಹದಿಂದ ರಥೋತ್ಸವದಲ್ಲಿ ಪಾಲ್ಗೊಂಡು ಗೋವಿಂದ ನಾಮ ಮೊಳಗಿಸುತ್ತಾ ತೇರೆಳೆದರು.

ಇದೇ ಪ್ರಥಮ ಬಾರಿಗೆ ಲಕ್ಷಾಂತರ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡು ಶ್ರೀದೇವಿ–ಭೂದೇವಿ, ಕಲ್ಯಾಣನಾಯಕಿ ಅಮ್ಮನವರೊಂದಿಗೆ ರಥಾರೂಢನಾದ ಚೆಲುವನಾರಾಯಣನ ದರ್ಶನ ಪಡೆದು ಪುನೀತರಾದರು. ಬೆಳಗ್ಗೆ 7ಗಂಟೆಗೆ ಯಾತ್ರಾದಾನವಾದ ನಂತರ ರಾಜಮುಡಿ ಕಿರೀಟ ಧಾರಣೆಯೊಂದಿಗೆ ಉತ್ಸವ ನೆರವೇರಿತು. ಒಳ ಮತ್ತು ಹೊರ ಪ್ರಾಕಾರದಲ್ಲಿ ಉತ್ಸವ ನಡೆದ ನಂತರ ರಥ ಮಂಟಪಕ್ಕೆ 3 ಪ್ರದಕ್ಷಿಣೆ ಹಾಕಿ ಮುಹೂರ್ತ ಪಠನೆ ನಂತರ ರಥಾರೋಹಣ ನೆರವೇರಿಸಲಾಯಿತು.

ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಭಕ್ತರ ಜೊತೆಗೆ ತೇರನ್ನು ಎಳೆಯುವ ಮೂಲಕ ಮಹಾರಥೋತ್ಸವಕ್ಕೆ ಚಾಲನೆ ನೀಡಿದರು. ಜಯವಿಜಯರೊಂದಿಗೆ ಹೂ, ತಳಿರು ತೋರಣಗಳಿಂದ ಅಲಂಕೃತಗೊಂಡ ಚೆಲುವನಾರಾಯಣಸ್ವಾಮಿ ಮಹಾರಥ ರಥದ ಬೀದಿ, ವಾರಿಗುಡಿ ಬೀದಿ, ರಾಜ ಬೀದಿ, ವಾನಮಾಮಲೆ ಮಠದ ಬೀದಿಗಳಲ್ಲಿ ಸಂಚರಿಸಿ 11.45ರ ವೇಳೆಗೆ ಸ್ವಸ್ಥಾನ ಸೇರಿತು. ಪಾಂಡವಪುರ ತಹಸೀಲ್ದಾರ್ ಸೌಮ್ಯ, ಮಾಜಿ ಸಚಿವ ಎನ್.ಚೆಲುವರಾಯಸ್ವಾಮಿ ದಂಪತಿ, ಜಯದೇವ ಆಸ್ಪತ್ರೆಯ ಗಂಗಾಧರ್, ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಮೇಲುಕೋಟೆ ಇನ್ಸ್‌ಪೆಕ್ಟರ್ ಸುಮಾರಾಣಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದರು.

ಹರಿದು ಬಂದ ಭಕ್ತಸಾಗರ: ಮಹಾವೀರ ಜಯಂತಿ ಪ್ರಯುಕ್ತ ಮಂಗಳವಾರ ಸರ್ಕಾರಿ ರಜಾ ಇದ್ದ ಕಾರಣ ಮಹಾರಥೋತ್ಸವಕ್ಕೆ ನಾಡಿನ ವಿವಿಧ ಭಾಗಗಳಿಂದ ಭಕ್ತಸಾಗರವೇ ಹರಿದು ಬಂದಿತ್ತು. ಮಹಾರಥೋತ್ಸವ ಮುಕ್ತಾಯವಾದ ನಂತರವೂ ಭಕ್ತರಿಂದ ಇಡೀ ದೇವಾಲಯದ ಆವರಣ, ಕಲ್ಯಾಣಿ ಮತ್ತು ರಾಜಬೀದಿ ತುಂಬಿ ತುಳುಕುತ್ತಿತ್ತು. ವಿವಿಧೆಡೆಗಳಿಂದ ಕುಟುಂಬ ಸಮೇತರಾಗಿ ಆಗಮಿಸಿದ್ದ ಭಕ್ತರು ಕಲ್ಯಾಣಿಯಲ್ಲಿ ಸ್ನಾನಮಾಡಿ, ಸ್ವಾಮಿ ದರ್ಶನ ಮಾಡಿದರು. ಅಲ್ಲಲ್ಲಿ ಅರವಟಿಗೆ ಸ್ಥಾಪಿಸಿದ್ದ ಚೆಲುವನಾರಾಯಣಸ್ವಾಮಿ ಒಕ್ಕಲಿನವರು ಭಕ್ತರಿಗೆ ಮಜ್ಜಿಗೆ, ಪಾನಕ ನೀಡುವ ಮೂಲಕ ಸೇವೆ ಮಾಡಿದರು.

ರಥೋತ್ಸವ ಬೇಗ ಮುಕ್ತಾಯ: ಭಕ್ತರಿಗೆ ನಿರಾಸೆ

ಪ್ರತಿವರ್ಷ ಮಧ್ಯಾಹ್ನ 3 ಗಂಟೆವರೆಗೆ ನಡೆಯುತ್ತಿದ್ದ ರಥೋತ್ಸವ ಈ ವರ್ಷ 11.30ಕ್ಕೆ ಮುಕ್ತಾಯವಾಯಿತು. ಇದರಿಂದ ಆ ನಂತರ ಬಂದ ಭಕ್ತರಿಗೆ ನಿರಾಸೆಯಾಯಿತು. ರಥೋತ್ಸವ ಸಮಯವನ್ನು 2 ದಿನ ಮೊದಲೇ ಭಕ್ತರಿಗೆ ತಿಳಿಸದೆ ತರಾತುರಿಯಲ್ಲಿ ನಿರ್ಧರಿಸಿ 11.45ಕ್ಕೆ ಮುಕ್ತಾಯಗೊಳಿಸಿದ ಕಾರಣ ಭಕ್ತರಿಗೆ ನಿರಾಸೆಯಾಯಿತು.

ವಿಧಾನಸಭಾ ಚುನಾವಣೆ ಹಿನ್ನೆಲೆ
ಕೇಂದ್ರದ ಅರೆಸೇನಾ ಪಡೆ ಪಥ ಸಂಚಲನ



ನಾಗಮಂಗಲ, ಏ.4– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕೇಂದ್ರದ ಅರೆಸೇನಾ ಪಡೆ ಹಾಗೂ ಪೊಲೀಸರು ಪಥ ಸಂಚಲನ ನಡೆಸಿದರು.

ನಾಗಮಂಗಲ ಡಿವೈಎಸ್ಪಿ ಪಿ.ಲಕ್ಷ್ಮೀನಾರಾಯಣ ಪ್ರಸಾದ್ ನೇತೃತ್ವದಲ್ಲಿ 92 ಸಿಬ್ಬಂದಿ ಒಳಗೊಂಡ 2 ಅರೆಸೇನಾ ಪಡೆ ತುಕಡಿಗಳು, ಇಬ್ಬರು ಇನ್ಸ್‌ಪೆಕ್ಟರ್, 8 ಮಂದಿ ಸಬ್ ಇನ್ಸ್‌ಪೆಕ್ಟರ್‌ಗಳು, 80 ಮಂದಿ ಸಿಬ್ಬಂದಿ ಪಟ್ಟಣದ ಸೌಮ್ಯ ಕೇಶವಸ್ವಾಮಿ ದೇವಸ್ಥಾನ ಮುಂಭಾಗದಿಂದ ಮೈಸೂರು, ಮಂಡ್ಯ ರಸ್ತೆ ಮೂಲಕ ಟಿಬಿ ಬಡಾವಣೆಯಿಂದ ಬಿಂಡಿಗನವಿಲೆ ರಸ್ತೆಯ ಸಾರಿಮೇಗಲಕೊಪ್ಪಲುವರೆಗೆ ಪಥ ಸಂಚಲನ ನಡೆಸಿದರು.

ಡಿವೈಎಸ್ಪಿ ಪಿ.ಲಕ್ಷ್ಮೀನಾರಾಯಣ ಪ್ರಸಾದ್ ಮಾತನಾಡಿ, ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಪಟ್ಟಣಕ್ಕೆ 2 ಅರೆಸೇನಾ ಪಡೆಗಳು ಆಗಮಿಸಿವೆ. ಇವರನ್ನು ಚುನಾವಣೆ ಭದ್ರತೆ, ನಾಮಪತ್ರ ಸಲ್ಲಿಕೆ ಪ್ರಕ್ರಿಯೆ, ರಾಜಕೀಯ ಸಭೆ ಸಮಾರಂಭ ಸೇರಿದಂತೆ ಸೂಕ್ಷ್ಮ ಪ್ರದೇಶಗಳಿಗೆ ನಿಯೋಜಿಸಲಾಗುವುದು. ಅಲ್ಲದೇ ಚೆಕ್‌ಪೋಸ್ಟ್‌ಗಳಿಗೆ ನಿಯೋಜಿಸಲಾಗುವುದು ಎಂದರು. ಈ ವೇಳೆ ಸಿಐಎಸ್‌ಎಫ್ ಮುಖ್ಯಸ್ಥ ಮನೋಜ್ ಕುಮಾರ್, ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್, ಎಸ್‌ಐ ರವಿಶಂಕರ್, ಗ್ರಾಮಾಂತರ ಪೊಲೀಸ್ ಠಾಣೆ ಎಸ್‌ಐ ರವಿಕುಮಾರ್, ಬೆಳ್ಳೂರು ಠಾಣೆ ಎಸ್‌ಐ ಲೋಕೇಶ್, ಬಿಂಡಿಗನವಿಲೆ ಪೊಲೀಸ್ ಎಸ್‌ಐ ರಾಜೇಂದ್ರ ಹಾಗೂ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು.

ಅಕ್ರಮ ವಿದ್ಯುತ್ ತಂತಿ ತುಳಿದು ಕಾಡಾನೆ ಸಾವು

ಹಲಗೂರು, ಏ.4– ಅಕ್ರಮವಾಗಿ ಅಳವಡಿಸಿದ್ದ ವಿದ್ಯುತ್ ತಂತಿ ತುಳಿದು ಕಾಡಾನೆ ಮೃತಪಟ್ಟಿರುವ ಘಟನೆ ಸೋಮವಾರ ರಾತ್ರಿ ಇಲ್ಲಿಗೆ ಸಮೀಪದ ಲಿಂಗಪಟ್ಟಣ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಗ್ರಾಮದ ಮರಿಗೌಡ ಅಲಿಯಾಸ್ ಕೆಂಚೇಗೌಡರಿಗೆ ಸೇರಿದ ಜಮೀನಿಗೆ ಆಹಾರ ಅರಸಿ 3 ಕಾಡಾನೆಗಳು ಬಂದಿದ್ದವು. ಈ ವೇಳೆ ಬೆಳೆ ರಕ್ಷಣೆಗೆ ಅಕ್ರಮವಾಗಿ ಅಳವಡಿಸಿದ್ದ ವಿದ್ಯುತ್ ತಂತಿ ತುಳಿದು 20 ವರ್ಷದ ಗಂಡಾನೆ ಸಾವನ್ನಪ್ಪಿದೆ.

ವಿಷಯ ತಿಳಿದು ಹಲಗೂರು ವೃತ್ತ ನಿರೀಕ್ಷಕ ಶ್ರೀಧರ್ ಹಾಗೂ ಆರಕ್ಷಕ ಉಪ ನಿರೀಕ್ಷಕ ಮಹೇಂದ್ರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹದೇವಸ್ವಾಮಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮಹದೇವಸ್ವಾಮಿ ಮಾತನಾಡಿ, ಸೋಮವಾರ ರಾತ್ರಿ ಆಹಾರ ಅರಸಿ ಭೀಮನಕಿಂಡಿ ಅರಣ್ಯ ಪ್ರದೇಶದಿಂದ ಕಾಡಾನೆಗಳು ಬಂದಿದ್ದವು. ಈ ಪೈಕಿ ಒಂದು ಗಂಡಾನೆ ಬೆಳೆ ರಕ್ಷಣೆಗೆ ಅಕ್ರಮವಾಗಿ ಅಳವಡಿಸಿದ್ದ ವಿದ್ಯುತ್ ತಂತಿ ತುಳಿದು ಸಾವನ್ನಪ್ಪಿದೆ. ಈ ಸಂಬಂಧ ಜಮೀನಿನ ಮಾಲೀಕರ ವಿರುದ್ಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದರು.

ಈ ವೇಳೆ ವಲಯ ಅರಣ್ಯಾಧಿಕಾರಿ ಮಹದೇವ, ಉಪವಲಯ ಅರಣ್ಯಾಧಿಕಾರಿ ಶಿವರಾಜ್, ಗಸ್ತು ಅರಣ್ಯ ಪಾಲಕ ಉಮೇಶ್, ಬಸವಣ್ಣ, ಸಿದ್ದರಾಮು, ಪಶು ವೈದ್ಯಾಧಿಕಾರಿ ನವೀನ್ ಕುಮಾರ್ ಹಾಗೂ ಸೆಸ್ಕಾಂ ಕಿರಿಯ ಇಂಜಿನಿಯರ್ ಚಂದ್ರಶೇಖರ್ ಇತರರಿದ್ದರು.

ಮದ್ದೂರಲ್ಲಿ ಸಂಭ್ರಮದ ಮಹಾವೀರ ಜಯಂತಿ



ಮದ್ದೂರು, ಏ.4– ಪಟ್ಟಣದಲ್ಲಿ ಜೈನ ಸಂಘದಿಂದ ಭಗವಾನ್ ಮಹಾವೀರ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಕೋಟೆ ಬೀದಿಯ ಜೈನ ದೇವಾಲಯದಿಂದ ಮಹಾವೀರರ ಭಾವಚಿತ್ರವನ್ನು ಬೆಳ್ಳಿ ರಥದಲ್ಲಿಟ್ಟು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಈ ವೇಳೆ ದಾರಿಯುದ್ದಕ್ಕೂ ಸಾರ್ವಜನಿಕರಿಗೆ ಸಿಹಿ ವಿತರಣೆ ಮಾಡಲಾಯಿತು. ನಂತರ ಜೈನ ದೇವಾಲಯದ ಆವರಣದಲ್ಲಿ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಜೈನ ಸಂಘದ ಮುಖಂಡರಾದ ಜೆ.ಭರತ್ ಕುಮಾರ್, ಗೌತಮ್‌ಚಂದ್‌ರಾಂಖ, ಮಹಾವೀರ್ ಚಂದ್‌ರಾಂಖ, ಮದನ್‌ರಾಜ್ ಜೈನ್, ವಿನೋದ್ ಇದ್ದರು.

ದಾಖಲೆ ಇಲ್ಲದ 10 ಲಕ್ಷ ರೂ. ವಶ

ನಾಗಮಂಗಲ, ಏ.4– ತಾಲೂಕಿನ ಚುಂಚನಹಳ್ಳಿ ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ 10 ಲಕ್ಷ ರೂ.ಗಳನ್ನು ಬೆಳ್ಳೂರು ಠಾಣೆ ಪೊಲೀಸರು ಸೋಮವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ. ಬೆಂಗಳೂರಿನ ರಾಜರಾಜೇಶ್ವರಿ ನಗರದ ನಿವಾಸಿ ಜಿತೇಂದ್ರ ಅವರು ತಮ್ಮ ಕಾರಿನಲ್ಲಿ ದಾಖಲೆ ಇಲ್ಲದ 10 ಲಕ್ಷ ರೂ.ಗಳನ್ನು ಸಾಗಿಸುತ್ತಿದ್ದರು. ರಾತ್ರಿ ಚೆಕ್‌ಪೋಸ್ಟ್‌ನಲ್ಲಿ ಪೊಲೀಸರು ವಾಹನಗಳನ್ನು ತಪಾಸಣೆ ಮಾಡುತ್ತಿದ್ದ ವೇಳೆ ಸಿಕ್ಕಿಬಿದ್ದಿದ್ದು, ಪೊಲೀಸರು ಹಣ ವಶಪಡಿಸಿಕೊಂಡಿದ್ದಾರೆ. ಈ ವೇಳೆ ಸಿಪಿಐ ನಿರಂಜನ್, ಎಸ್‌ಐ ಲೋಕೇಶ್, ಪಿಡಿಓ ಇಮ್ರಾನ್ ಅಲಿ, ನಾಗರಾಜು ಹಾಗೂ ಪೊಲೀಸ್ ಸಿಬ್ಬಂದಿ ಇದ್ದರು.


ಸದ್ಯದ ಬೆಳವಣಿಗೆಯಲ್ಲಿ ಬಿಜೆಪಿಗೆ ಸಂಪೂರ್ಣ ಬಹುಮತ ಬಂದೇ ಬರುತ್ತೆ

■ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ■ ಕೆಲವು ಕ್ಷೇತ್ರದಲ್ಲಿ ಆಶ್ಚರ್ಯಕರ ಫಲಿತಾಂಶ ನಿರೀಕ್ಷೆ

ಬೆಂಗಳೂರು, ಏ.4–(ಕೆಎಂಶಿ) ಕಳೆದ ಮೂರು ನಾಲ್ಕು ದಿನಗಳ ಬೆಳವಣಿಗೆ ಗಮನಿಸಿದರೆ ಬಿಜೆಪಿಗೆ ಸಂಪೂರ್ಣ ಬಹುಮತ ದೊರೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವು ಕ್ಷೇತ್ರದಲ್ಲಿ ಆಶ್ಚರ್ಯಕರ ಫಲಿತಾಂಶ ಬರಲಿದೆ. ಈ ಬಗ್ಗೆ ಕಾರ್ಯಕರ್ತರು ಮತ್ತು ನಾಯಕರಿಗೆ ವಿಶ್ವಾಸವಿದೆ ಎಂದರು. ವಾಸ್ತವಾಂಶ ಆಧರಿಸಿ ಅಭ್ಯರ್ಥಿ ಆಯ್ಕೆಯಾಗಿದೆ. ಇಂದು ರಾಜ್ಯ ಸಮಿತಿಯ ಸಭೆ ಕರೆದಿದ್ದು, ಎರಡು ದಿನಗಳ ಕಾಲ ನಡೆಯಲಿದೆ. ಸಭೆ ಬಳಿಕ ಕೇಂದ್ರಕ್ಕೆ ಅಭ್ಯರ್ಥಿಗಳ ಪಟ್ಟಿ ಕಳುಹಿಸಲಾಗುವುದು. ಏ.8 ರಂದು ಕೇಂದ್ರದಲ್ಲಿ ಚರ್ಚೆಯಾಗಿ ಪಟ್ಟಿ ಬಿಡುಗಡೆಯಾಗಲಿದೆ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಖಾಸಗಿ ಚಾನಲ್ ಸಂದರ್ಶನವೊಂದರಲ್ಲಿ ಮತ್ತೆ ಮುಖ್ಯ ಮಂತ್ರಿಯಾಗುವ ಇಚ್ಛೆ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಅವರೇನೋ ಬಯಸಿದ್ದಾರೆ. ಆದರೆ ಜನರ ನಾಡಿ ಮಿಡಿತ ಏನಿದೆಯೋ ಯಾರಿಗೆ ಗೊತ್ತು. ಫಲಿತಾಂಶ ಬಂದ ಮೇಲೆ ಜನರ ಅಭಿಮತ ತಿಳಿಯಲಿದೆ ಎಂದರು. ಜನರ ಬೆಂಬಲ ಇದ್ದರೆ ಮಾತ್ರ ಶಾಸಕನಾಗಲು ಸಾಧ್ಯ ಎಂದರು.



ಅಲ್ಲದೇ ಸಿದ್ದರಾಮಯ್ಯ ಅವರು ಹೊಸದೇನು ಹೇಳಿಲ್ಲ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದಿಲ್ಲ. ಇಲ್ಲದಿರುವ ಅವಕಾಶಕ್ಕಾಗಿ ಗುದ್ದಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕಾಗಿ, ಮುಖ್ಯಮಂತ್ರಿ ಸ್ಥಾನಕ್ಕಾಗಿ ಹೋರಾಡುತ್ತಿದೆ. ಜನರಿಗೆ, ಕರ್ನಾಟಕಕ್ಕೆ ಒಳ್ಳೆಯದು ಮಾಡಬೇಕು ಎಂಬ ಯೋಚನೆ ಮಾಡಿಲ್ಲ ಎಂದು ತಿಳಿಸಿದರು.

ಸಿದ್ದರಾಮಯ್ಯ ಹೇಳಿರೋದು ಅಲ್ಲಿ ಆಂತರಿಕವಾಗಿ ನಡೆಯುತ್ತಿರುವ ವಿದ್ಯಮಾನಗಳ ಪ್ರತಿಬಿಂಬ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೋದ ಕಡೆಯಲ್ಲಿ ನಾನೇ ಮುಖ್ಯಮಂತ್ರಿ, ನನಗೆ ಆಶೀರ್ವಾದ ಮಾಡಿ ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಸಿದ್ದರಾಮಯ್ಯ ಅವರು ನಾನೇ ಮುಖ್ಯಮಂತ್ರಿ ಎಂದು ಹೇಳುತ್ತಾರೆ. ಮುಖ್ಯಮಂತ್ರಿ ಮಾಡೋದು ಜನ. ಆದರೆ ಜನರ ಮನಸ್ಸಿನಲ್ಲಿ ಇವರಿಬ್ಬರೂ ಇಲ್ಲ. ಡಿ.ಕೆ ಶಿವಕುಮಾರ್ ಮತ್ತು ಸಿದ್ದರಾಮಯ್ಯ ಇಬ್ಬರೂ ಮುಖ್ಯಮಂತ್ರಿ ಸ್ಥಾನದ ಕನಸು ಕಾಣುತ್ತಿದ್ದಾರೆ. ಆ ಕನಸು ನನಸಾಗೋದಿಲ್ಲ ಎಂದರು. ಆಯನೂರು ಮಂಜುನಾಥ್ ಬಂಡಾಯ, ಶಾಸಕರು ಪಕ್ಷಾಂತರ ಮಾಡುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ 125 ಶಾಸಕರು ಈಗ ಇದ್ದಾರೆ. ಅದರಲ್ಲಿ ಕೆಲವು ಕಡೆ ಇಬ್ಬರು ಆಕಾಂಕ್ಷಿಗಳು ಇದ್ದಾರೆ. ಅಲ್ಲಿ ಸ್ಥಾನ ದೊರೆಯೋಲ್ಲ ಎಂದು ಕೆಲವರು ಬಿಟ್ಟು ಹೋಗಿದ್ದಾರೆ ಅಷ್ಟೆ. ಇದರಿಂದ ಬಿಜೆಪಿ ಹಾಗೂ ಚುನಾವಣೆ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಬಿಜೆಪಿಯಿಂದ ಮತ್ತೆ ಯಾರು ಹೋಗೊಲ್ಲ. ಡಿ.ಕೆ. ಶಿವಕುಮಾರ್ ಸುಮ್ಮನೆ ಹೆಸರುಗಳನ್ನು ತೇಲಿ ಬಿಡುತ್ತಿದ್ದಾರೆ ಅಷ್ಟೆ ಎಂದು ಹೇಳಿದರು.

ಒಳ ಮೀಸಲಾತಿಗೆ ವಿರೋಧ: ಬಂಜಾರ ಸ್ವಾಮೀಜಿ ಆತ್ಮಹತ್ಯೆ ಯತ್ನ

ಹಾವೇರಿ: ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಒಳಮೀಸಲಾತಿ ವಿರೋಧಿಸಿ ಸಿಎಂ ಬೊಮ್ಮಾಯಿ ಕ್ಷೇತ್ರದಲ್ಲಿ ಬಂಜಾರ ಸಮುದಾಯದ ಪ್ರತಿಭಟನೆ ವೇಳೆ ಸ್ವಾಮೀಜಿಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ.

ಸರ್ಕಾರದ ನಡೆಯನ್ನು ಖಂಡಿಸಿ ತಹಶೀಲ್ದಾರ್ ಕಚೇರಿ ಬಳಿ ಬಂಜಾರ ಸಮುದಾಯದ ಸ್ವಾಮೀಜಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ತಕ್ಷಣ ಅಲ್ಲಿದ್ದ ಜನ ಅವರನ್ನು ರಕ್ಷಿಸಿದ್ದಾರೆ. ಸ್ವಾಮೀಜಿಯವರನ್ನು ಗುಂಡೂರು ಗ್ರಾಮದ ತಿಪ್ಪೆಸ್ವಾಮಿ ಎಂದು ಗುರುತಿಸಲಾಗಿದೆ.

ಅಂಬರೀಷ್ ಇಲ್ಲದೆ ಕಳೆಗುಂದಿದ ಮಂಡ್ಯ ಚುನಾವಣಾ ಅಖಾಡ

ಮೂರೂವರೆ ದಶಕಗಳ ಕಾಲ ಮಂಡ್ಯ ಜಿಲ್ಲಾ ರಾಜಕಾರಣದಲ್ಲಿ ಸಕ್ರಿಯರಾಗಿದ್ದ ರೆಬಲ್‌ಸ್ಟಾರ್

ಎಂ.ಕೆ.ಮೋಹನ್‌ರಾಜ್





ರಮ್ಯಾ ಹಾಗೂ ನಂದನ್ ನೀಲೇಕಣಿ ಪರ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ಅಂಬರೀಶ್.



1996ರಲ್ಲಿ ಮಂಡ್ಯ ಲೋಕಸಭಾ ಚುನಾವಣೆಯ ಪ್ರಚಾರದ ಫೋಟೋ.



ಮಂಡ್ಯದ ಗಂಡು, ರೆಬಲ್‌ಸ್ಟಾರ್ ಅಂಬರೀಷ್ ಸಿನಿಮಾ ಕ್ಷೇತ್ರ ಮಾತ್ರವಲ್ಲ ರಾಜಕಾರಣದಲ್ಲೂ ಮಿನುಗಿದವರು. ಚಿತ್ರರಂಗದಲ್ಲಿ ಯಶಸ್ಸಿನ ಉತ್ತುಂಗದಲ್ಲಿದ್ದಾಗಲೇ ರಾಜಕಾರಣಕ್ಕೆ ಪದಾರ್ಪಣೆ ಮಾಡಿದ ಅವರು, 1989ರ ರಾಜ್ಯ ವಿಧಾನಸಭಾ ಚುನಾವಣೆಯಿಂದ 2018ರ ವಿಧಾನಸಭೆ ಹಾಗೂ ಲೋಕಸಭಾ ಉಪಚುನಾವಣೆವರೆಗೂ ಸಕ್ರಿಯರಾಗಿದ್ದರು. ಅವರು 2018ರ ನವೆಂಬರ್‌ನಲ್ಲಿ ವಿಧಿವಶರಾದರು. ಜಿಲ್ಲಾ ರಾಜಕಾರಣದಲ್ಲಿ 35 ವರ್ಷಗಳ ಕಾಲ ಸಕ್ರಿಯವಾಗಿದ್ದ ಅಂಬರೀಷ್ ನಿಧನದ ಬಳಿಕ ಮಂಡ್ಯದಲ್ಲಿ ನಡೆಯುತ್ತಿರುವ ಮೊದಲ ವಿಧಾನಸಭಾ ಚುನಾವಣೆ ಅವರ ಅನುಪಸ್ಥಿತಿಯಿಂದ ಕಳೆಗುಂದಿದೆ ಎನ್ನುತ್ತಾರೆ ಅವರ ಬೆಂಬಲಿಗರು, ಅಭಿಮಾನಿಗಳು.

ಕನ್ನಡ ಚಿತ್ರರಂಗದಲ್ಲಿ ದೊಡ್ಡ ಸ್ಟಾರ್ ಆಗಿ ಮೆರೆದ ಅಂಬರೀಷ್ ಮೂಲತ: ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನ ದೊಡ್ಡರಸಿನಕೆರೆ ಗ್ರಾಮದವರು. ಚಿತ್ರರಂಗದಲ್ಲಷ್ಟೇ ಅಲ್ಲದೇ ರಾಜಕೀಯ ಕ್ಷೇತ್ರದಲ್ಲೂ ತೊಡಗಿಸಿಕೊಂಡು ಜನನಾಯಕರಾದರು. ಬರಬರುತ್ತಾ ಸಿನಿಮಾಗಿಂತ ರಾಜಕೀಯ ವಲಯದಲ್ಲೇ ಸ್ನೇಹಿತರು ಹೆಚ್ಚಾದ ಪರಿಣಾಮ, 1989ರ ಚುನಾವಣೆಯಲ್ಲಿ ಯಾವುದೇ ಪಕ್ಷ ಸೇರ್ಪಡೆಯಾಗದಿದ್ದರೂ ತಮ್ಮ ಒಡನಾಡಿಗಳ ಪರ ಚುನಾವಣಾ ಪ್ರಚಾರ ಕೈಗೊಳ್ಳುತ್ತಿದ್ದರು.

ಮಾದೇಗೌಡ ಪರ ಚುನಾವಣಾ ಪ್ರಚಾರ: 1989ರ ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಅಂದಿನ ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಜಿ.ಮಾದೇಗೌಡರ ಪರ ಚುನಾವಣಾ ಪ್ರಚಾರ ಅಖಾಡಕ್ಕಿಳಿದಿದ್ದ ಅಂಬಿ, ನಂತರದ ಪ್ರತಿ ಚುನಾವಣೆಯಲ್ಲೂ ಶಾಮನೂರು ಶಿವಶಂಕರಪ್ಪ ಸೇರಿದಂತೆ ತಮಗೆ ಬೇಕಾದವರ ಪರ ಪ್ರಚಾರಕ್ಕೆ ಹೋಗುತ್ತಿದ್ದರು. ಬಳಿಕ ಕಾಂಗ್ರೆಸ್ ಸೇರುವ ಆಸಕ್ತಿ ಹೊಂದಿದ್ದ ಅವರು ಹೆಚ್ಚಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರಕ್ಕೆ ಹೋಗುತ್ತಿದ್ದರು.

1996ರಲ್ಲಿ ಕಾಂಗ್ರೆಸ್ ಸೇರ್ಪಡೆ: ಕಾಂಗ್ರೆಸ್ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದ ಅಂಬರೀಷ್ ಎಸ್.ಎಂ.ಕೃಷ್ಣ ನೇತೃತ್ವದಲ್ಲಿ 1996ರಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾಗಿ ಮಂಡ್ಯ ಲೋಕಸಭಾ ಕ್ಷೇತ್ರದ ಟಿಕೆಟ್ ಮೇಲೆ ಕಣ್ಣಿಟ್ಟಿದ್ದರು. ಆದರೆ ಸತತ 2 ಬಾರಿ ಕಾಂಗ್ರೆಸ್‌ನಿಂದ ಗೆದ್ದು, ಹ್ಯಾಟ್ರಿಕ್ ಸಾಧಿಸಲು ಇಚ್ಛಿಸಿದ್ದ ಜಿ.ಮಾದೇಗೌಡ ಟಿಕೆಟ್ ಬಿಟ್ಟುಕೊಡಲು ನಿರಾಕರಿಸಿದರು. ಆ ಚುನಾವಣೆಯಲ್ಲಿ ಟಿಕೆಟ್ ಸಿಗದ ಕಾರಣ ಬೇಸರಗೊಂಡು ತಟಸ್ಥವಾಗಿ ಉಳಿದ ಅಂಬರೀಷ್, ಸಿನಿಮಾ ಕ್ಷೇತ್ರದಲ್ಲಿ ಮುಂದುವರೆದಿದ್ದರು. ಆದರೆ ಆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಾದೇಗೌಡರು ಸೋಲುಂಡರು.

ಮೊದಲ ಚುನಾವಣೆಯಲ್ಲೇ ಸೋಲು: ಕಾಂಗ್ರೆಸ್ ಟಿಕೆಟ್ ಸಿಗದೇ ಬೇಸರಗೊಂಡಿದ್ದ ಅಂಬರೀಷ್‌ಗೆ ಜನತಾದಳ ಗಾಳ ಹಾಕಿತ್ತು. ಅಂದಿನ ಪ್ರಧಾನಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಅಂಬರೀಷ್ ಜನತಾದಳ ಸೇರಿದರು. ದೇವೇಗೌಡರ ರಾಜೀನಾಮೆಯಿಂದ ತೆರವಾಗಿದ್ದ ಗೌಡರ ಸ್ವಕ್ಷೇತ್ರ ರಾಮನಗರದಲ್ಲಿ ಉಪಚುನಾವಣೆಗೆ ಟಿಕೆಟ್ ನೀಡಲಾಯಿತು. ಆದರೆ ಮೊದಲ ಚುನಾವಣೆಯಲ್ಲೇ ಸೋಲನ್ನಪ್ಪಿದರು.

89ರಿಂದ 2018ರವರೆಗೂ ಮಂಡ್ಯ ರಾಜಕಾರಣದಲ್ಲಿ ಸಕ್ರಿಯರಾಗಿದ್ದು, ಅದರಲ್ಲೂ 1998 ರಿಂದ ನಿರ್ಣಾಯಕ ಪಾತ್ರ ವಹಿಸುಸಿದ್ದರು. ಪ್ರತಿ ಚುನಾವಣೆಯಲ್ಲೂ ತಾರಾ ವರ್ಚಸ್ಸು ತಂದು ಕೊಡುತ್ತಿದ್ದ ಅಂಬರೀಷ್ ಅನುಪಸ್ಥಿತಿ ಈ ಬಾರಿ ಕಾಡಲಿದ್ದು, 35 ವರ್ಷಗಳ ಬಳಿಕ ಅಂಬರೀಷ್ ಇಲ್ಲದ ಮೊದಲ ವಿಧಾನಸಭಾ ಚುನಾವಣೆಗೆ ಈ ಬಾರಿ ಮಂಡ್ಯ ಜಿಲ್ಲೆ ಸಾಕ್ಷಿಯಾಗಲಿದೆ.

ರಾಜ್ಯದ ಹಲವು ಸಿಎಂಗಳ ಜೊತೆಗೆ ಹೆಚ್ಚಿನ ಒಡನಾಟ

ರಾಜ್ಯದ ಹಲವು ಮುಖ್ಯಮಂತ್ರಿಗಳ ಜೊತೆಗೆ ಉತ್ತಮ ಒಡನಾಟ ಹೊಂದಿದ್ದ ಅಂಬರೀಷ್, ಆರ್.ಗುಂಡೂರಾವ್, ಎಸ್.ಆರ್.ಬೊಮ್ಮಾಯಿ, ಎಸ್.ಬಂಗಾರಪ್ಪ, ಹೆಚ್.ಡಿ.ದೇವೇಗೌಡ, ಎಸ್.ಎಂ.ಕೃಷ್ಣ, ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲ್, ಧರಂಸಿಂಗ್, ಹೆಚ್.ಡಿ.ಕುಮಾರಸ್ವಾಮಿ, ಸಿದ್ದರಾಮಯ್ಯ, ಯಡಿಯೂರಪ್ಪ, ಸದಾನಂದಗೌಡ ಸೇರಿದಂತೆ ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಅವರ ಒಡನಾಟ ಸಾಕಷ್ಟಿತ್ತು.

1998ರಲ್ಲಿ ಮೊದಲ ಬಾರಿಗೆ ಸಂಸದ: ರಾಮನಗರದಲ್ಲಿ ಸೋತ ಅಂಬಿಗೆ 1998ರ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಜನತಾದಳ ಮತ್ತೊಂದು ಅವಕಾಶ ನೀಡಿತು. ಅಂಬಿ ತವರು ಮಂಡ್ಯ ಜಿಲ್ಲೆಯಲ್ಲಿ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದರು. ಕಳೆದ ಬಾರಿ ಟಿಕೆಟ್ ಕೊಡಲಿಲ್ಲ ಎಂಬ ಅನುಕಂಪ, ರಾಮನಗರದ ಜನ ನಮ್ಮ ಜಿಲ್ಲೆಯವ ರನ್ನು ಸೋಲಿಸಿದರು ಎಂಬ ಕೋಪ ಮತವಾಗಿ ಪರಿವರ್ತನೆ ಯಾಗಿ ಅಂಬರೀಷ್ ಬರೋಬ್ಬರಿ 1,80,523 ಮತಗಳ ಅಂತರದಿಂದ ಗೆದ್ದು ಬೀಗಿದರು. ಇದು ಆ ಕಾಲಕ್ಕೆ ದಾಖಲೆಯ ಜಯವಾಗಿತ್ತು.

1999ರಲ್ಲಿ ಮತ್ತೆ ಕಾಂಗ್ರೆಸ್ ಸೇರ್ಪಡೆ: 1999ರಲ್ಲಿ ಮತ್ತೆ ಕಾಂಗ್ರೆಸ್ ಪಕ್ಷ ಸೇರಿದ ಅಂಬರೀಷ್‌ಗೆ ಜಿ.ಮಾದೇಗೌಡರು ಸ್ಪರ್ಧೆಗೆ ಅವಕಾಶ ಮಾಡಿಕೊಟ್ಟರು. ಎಲ್ಲಕ್ಕಿಂತ ಹೆಚ್ಚಾಗಿ ಮಂಡ್ಯ ಜಿಲ್ಲೆಯ ಎಸ್.ಎಂ.ಕೃಷ್ಣರನ್ನು ಸಿಎಂ ಮಾಡಲು ಕಾಂಗ್ರೆಸ್‌ಗೆ ಬಂದಿದ್ದೇನೆ ಎಂದು ಘೋಷಿಸುವ ಅಂಬರೀಷ್ ಮಂಡ್ಯ ಜಿಲ್ಲೆಯಾದ್ಯಂತ ಪ್ರವಾಸ ಮಾಡಿದ್ದರು. ತಾವು ಸಂಸದರಾಗಿ ಎರಡನೇ ಬಾರಿ ಗೆಲ್ಲುವ ಜೊತೆಗೆ ಜಿಲ್ಲೆಯ 9 ವಿಧಾನಸಭಾ ಕ್ಷೇತ್ರಗಳ ಪೈಕಿ 7ರಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸುವಲ್ಲಿ ಯಶಸ್ವಿಯಾದರು.

2004ರ ಚುನಾವಣೆಯಲ್ಲೂ ಸಕ್ರಿಯ: 2004ರ ಚುನಾವಣೆಯಲ್ಲೂ ಕಾಂಗ್ರೆಸ್‌ನಿಂದ ಸಂಸತ್ ಪ್ರವೇಶಿಸಿ ಹ್ಯಾಟ್ರಿಕ್ ಗೆಲುವು ಸಾಧಿಸಿದ ಅಂಬರೀಷ್, ಜಿಲ್ಲೆಯಲ್ಲಿ ಮೂರು ಶಾಸಕರನ್ನು ಗೆಲ್ಲಿಸುವಲ್ಲಿಯೂ ಯಶಸ್ವಿಯಾದರು. ಜೊತೆಗೆ 3 ಬಾರಿ ಸಂಸದರಾಗಿದ್ದ ಅವರನ್ನು ಕೇಂದ್ರ ಸಂಪುಟ ಸೇರಿ ವಾರ್ತಾ ಮಂತ್ರಿಯಾಗಿದ್ದರು. ಕಾವೇರಿ ನೀರಿನ ಹೋರಾಟ ಆರಂಭವಾದಾಗ ಕೇಂದ್ರ ಸಚಿವ ಸ್ಥಾನಕ್ಕೂ ರಾಜೀನಾಮೆ ನೀಡಿದ್ದರು. ನಂತರ 2008ರಲ್ಲಿ ರಾಜ್ಯ ರಾಜಕಾರಣಕ್ಕೆ ಬಂದ ಅಂಬರೀಷ್ ತಮಗೆ ಸಂಸತ್‌ನಲ್ಲಿ ಅತೀ ಹೆಚ್ಚು ಲೀಡ್ ಕೊಡುತ್ತಿದ್ದ ಶ್ರೀರಂಗಪಟ್ಟಣದಿಂದ ವಿಧಾನಸಭೆಗೆ ಸ್ಪರ್ಧಿಸಿ ಸೋತರು. ಮತ್ತೆ 2009ರಲ್ಲಿ ಲೋಕಸಭಾ ಚುನಾವಣೆಗೆ ಒಲ್ಲದ ಮನಸ್ಸಿನಿಂದ ಸ್ಪರ್ಧಿಸಿ ಸೋಲು ಅನುಭವಿಸಿದರು. ಅದಾದ ಬಳಿಕ ಮೂರ್‍ನಾಲ್ಕು ವರ್ಷ ರಾಜಕಾರಣದಿಂದ ದೂರ ಉಳಿದಿದ್ದರು.

2013ರಲ್ಲಿ ಮತ್ತೆ ಸಕ್ರಿಯ: 2013ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಮಂಡ್ಯ ಜಿಲ್ಲಾ ರಾಜಕಾರಣದಲ್ಲಿ ಸಕ್ರಿಯರಾದ ಅಂಬಿ, ಈ ಬಾರಿ ಮತ್ತೆ ರಾಜ್ಯರಾಜಕಾರಣಕ್ಕೆ ಮರಳಿ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದರು. ಭಾರೀ ಅಂತರದಲ್ಲಿ ಗೆದಿದ್ದರು. ಈ ಗೆಲುವು ರಾಮನಗರ, ಶ್ರೀರಂಗಪಟ್ಟಣದಲ್ಲಾಗಿದ್ದ ಸೋಲನ್ನು ಮರೆಸಿತ್ತು. ಜೊತೆಗೆ ಸಿದ್ದರಾಮಯ್ಯ ಸಂಪುಟದಲ್ಲಿ ವಸತಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು. ಬಳಿಕ ನಡೆದ 2013ರಲ್ಲಿ ಲೋಕಸಭಾ ಚುನಾವಣೆಯಲ್ಲಿ ರಮ್ಯಾರನ್ನು ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು, 2014ರ ಲೋಕಸಭಾ ಚುನಾವಣೆಯಲ್ಲೂ ರಮ್ಯಾ ಗೆಲುವಿಗೆ ಶ್ರಮಿಸಿದರಾದರೂ ಗೆಲುವು ಸಾಧಿಸಲು ಆಗಲಿಲ್ಲ.

2018ರಲ್ಲಿ ಚುನಾವಣಾ ರಾಜಕಾರಣದಿಂದ ನಿವೃತ್ತಿ: ಮೂರು ಬಾರಿ ಸಂಸದರಾಗಿ, ಒಮ್ಮೆ ಶಾಸಕರಾಗಿ, ಕೇಂದ್ರ ಹಾಗೂ ರಾಜ್ಯದಲ್ಲಿ ಮಂತ್ರಿಯಾಗಿದ್ದ ಅಂಬರೀಷ್, 2018ರಲ್ಲಿ ಕಾಂಗ್ರೆಸ್ ಬಿ.ಫಾರಂ ಮನೆಗೆ ಬಂದರೂ ಸ್ಪರ್ಧಿಸಲು ನಿರಾಕರಿಸಿ, ಚುನಾವಣಾ ರಾಜಕಾರಣಕ್ಕೆ ನಿವೃತ್ತಿ ಘೋಷಿಸಿದರು. ಆದರೆ ಅವರ ಬೆಂಬಲ ಮಾತ್ರ ಕಾಂಗ್ರೆಸ್ ಪಕ್ಷಕ್ಕೆ ಇತ್ತು. ಇನ್ನು ಅದೇ ವರ್ಷ ನಡೆದ ಮಂಡ್ಯ ಲೋಕಸಭಾ ಉಪಚುನಾವಣೆಯಲ್ಲಿ ಜೆಡಿಎಸ್– ಕಾಂಗ್ರೆಸ್ ಮೈತ್ರಿ ಅಭ್ಯರ್ಥಿ ಶಿವರಾಮೇಗೌಡರಿಗೆ ಬೆಂಬಲ ಸೂಚಿಸಿದರು. ಅದಾದ ಬಳಿಕ ಅಂಬರೀಷ್ ವಿಧಿವಶರಾದರು.

ಮತ್ತೆ ಎಲ್ಲಿಯೂ ಚುನಾವಣೆಗೆ ಸ್ಪರ್ಧಿಸಲ್ಲ

- ಶಾಸಕಿ ಅನಿತಾ ಕುಮಾರಸ್ವಾಮಿ ಸ್ಪಷ್ಟನೆ
- ಸಂಕಷ್ಟದಲ್ಲಿ ಪಕ್ಷದ ಉಳಿವಿಗಾಗಿ ವರಿಷ್ಠರ ಸಲಹೆಯಂತೆ ಸ್ಪರ್ಧಿಸುವ ಅನಿವಾರ್ಯತೆಗೆ ಬದ್ಧನಾಗಿದ್ದೆ



ಬೆಂಗಳೂರು, ಏ.4(ಕೆಎಂಶಿ)–ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ ಎಂದು ರಾಮನಗರ ಶಾಸಕರಾದ ಅನಿತಾ ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಅವರು ಮತ್ತೆ ಚುನಾವಣೆಗೆ ಸ್ಪರ್ಧಿಸುತ್ತಾರೆ ಎನ್ನುವ ರೀತಿಯಲ್ಲಿ ಹಬ್ಬಿಸಲಾಗುತ್ತಿರುವ ವದಂತಿಗಳ ಬಗ್ಗೆ ಟ್ವೀಟ್ ಮೂಲಕ ಅವರು ಪ್ರತಿಕ್ರಿಯಿಸಿದ್ದಾರೆ. ಪ್ರಸಕ್ತ ವಿಧಾನಸಭೆ ಚುನಾವಣೆಯಲ್ಲಿ ನಾನು ಸ್ಪರ್ಧಿಸುತ್ತೇನೆಂಬ ವದಂತಿಗಳನ್ನು ಕೆಲವರು ವ್ಯವಸ್ಥಿತವಾಗಿ ಹಬ್ಬಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಇದು ಶುದ್ಧಸುಳ್ಳು ಮತ್ತು ಅಪಪ್ರಚಾರದ ಭಾಗವಷ್ಟೇ. ಮತ್ತೊಮ್ಮೆ ನಾನು ಚುನಾವಣೆಯಲ್ಲಿ ಸ್ಪರ್ಧಿಸುವ ಪ್ರಶ್ನೆಯೇ ಇಲ್ಲ. ಈ ಹಿಂದೆಯೇ ಸ್ಪಷ್ಟಪಡಿಸಿದ್ದೇನೆ ಎಂದು ಅವರು ತಿಳಿಸಿದ್ದಾರೆ.

ರಾಮನಗರ ಕ್ಷೇತ್ರವನ್ನು ನನ್ನ ಪುತ್ರ ನಿಖಿಲ್ ಕುಮಾರಸ್ವಾಮಿ ಅವರಿಗೆ ಬಿಟ್ಟುಕೊಟ್ಟಿದ್ದೇನೆ. ಪುನಃ ಸ್ಪರ್ಧಿಸುವ ಮಾತೆಲ್ಲಿ? 2008ರಲ್ಲಿ ಆಪರೇಷನ್ ಕಮಲದ ಉಪ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ, ಮಾಜಿ ಪ್ರಧಾನಮಂತ್ರಿಗಳಾದ ಹೆಚ್.ಡಿ.ದೇವೇಗೌಡ ಅವರ ಆದೇಶ ಗೌರವಿಸಿ ಸ್ಪರ್ಧಿಸಿದ್ದೆ. ಆ ನಂತರದ ಚುನಾವಣೆಯಲ್ಲಿ ವೀರಭದ್ರಯ್ಯ ಅವರಿಗೆ ಮಧುಗಿರಿ ಕ್ಷೇತ್ರವನ್ನು ಸಂತೋಷದಿಂದ ಬಿಟ್ಟುಕೊಟ್ಟು ಪಕ್ಷದ ಕೆಲಸ, ಮನೆಗಷ್ಟೇ ಸೀಮಿತವಾದೆ ಎಂದಿದ್ದಾರೆ.

2013ರಲ್ಲಿ ಕೂಡ ಕಾರ್ಯಕರ್ತರ ಒತ್ತಡಕ್ಕೆ ತಲೆಬಾಗಿ ಚನ್ನಪಟ್ಟಣದಲ್ಲಿ ಸ್ಪರ್ಧಿಸಬೇಕಾಯಿತು. ಆಗಲೂ ನಾನು ಪಕ್ಷ ಹಾಗೂ ವರಿಷ್ಠರ ಆದೇಶವನ್ನಷ್ಟೇ ಪಾಲಿಸಿದೆ ಎಂದು ಅವರು ಹೇಳಿದ್ದಾರೆ. 2018ರ ಉಪ ಚುನಾವಣೆ ವೇಳೆ ರಾಮನಗರ ಕ್ಷೇತ್ರದಲ್ಲಿ ಕೆಲವರು ನಮ್ಮ ಪಕ್ಷದ ಬೆನ್ನಿಗೆ ಇರಿಯುವ ಕೃತ್ಯವೆಸಗಿದಾಗ ಮತ್ತೆ ಜೆಡಿಎಸ್ ಪಕ್ಷ, ದೇವೇಗೌಡರು, ಕುಮಾರಸ್ವಾಮಿ ಅವರ ಆದೇಶದ ಮೇರೆಗೆ ರಾಮನಗರ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದೆ ಎಂದಿರುವ ಅವರು, ಹೀಗೆ ಪಕ್ಷ ಹಾಗೂ ವರಿಷ್ಠರ ಆದೇಶವನ್ನು ಶಿರಸಾ ಪಾಲಿಸಿದ್ದೇನೆ. ಅಂಥ ಕ್ಲಿಷ್ಟ ಪರಿಸ್ಥಿತಿಯಲ್ಲೂ ಮನೆ ಮಗಳೆಂದು ಭಾವಿಸಿ ನನ್ನನ್ನು ಗೆಲ್ಲಿಸಿದ ಮಧುಗಿರಿ, ರಾಮನಗರ ಕ್ಷೇತ್ರಗಳ ಮಹಾಜನತೆಗೆ ಆಜೀವ ಪರ್ಯಂತ ನಾನು ಆಭಾರಿ. ಚನ್ನಪಟ್ಟಣ ಕ್ಷೇತ್ರದ ಜನತೆಗೂ ಚಿರಋಣಿ. ಸಿಕ್ಕಿದ ಅವಕಾಶ ಬಳಸಿಕೊಂಡು ಈ ಕ್ಷೇತ್ರಗಳ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದು ಟ್ವೀಟ್‌ನಲ್ಲಿ ಬರೆದಿದ್ದಾರೆ.

ಚುನಾವಣಾ ಕಣದಿಂದ ಹಿಂದೆ ಸರಿದು ಪಕ್ಷದ ಶ್ರೇಯೋಭಿವೃದ್ಧಿ ಹಾಗೂ ನನ್ನ ಕ್ಷೇತ್ರದ ಜನರ ಒಳಿತಿಗಾಗಿಯಷ್ಟೇ ಕೆಲಸ ಮಾಡುತ್ತಿದ್ದೇನೆ. ಹೀಗಾಗಿ ಯಾರೂ ಇಂಥ ವದಂತಿಗಳನ್ನು ಹಬ್ಬಿಸಬಾರದು ಮತ್ತೂ ನಂಬಲೂಬಾರದು ಎನ್ನುವುದು ನನ್ನ ಕಳಕಳಿಯ ವಿನಂತಿ ಎಂದು ಅವರು ಮನವಿ ಮಾಡಿದ್ದಾರೆ.

ಎಲ್ಲಾ ಚುನಾವಣೆಗಳಲ್ಲಿ ಪಕ್ಷದ ಆದೇಶವನ್ನಷ್ಟೇ ಪಾಲಿಸಿ ನಡೆದಿದ್ದೇನೆಯೇ ಹೊರತು, ಮಾಜಿ ಪ್ರಧಾನಮಂತ್ರಿಗಳಾದ ಹೆಚ್.ಡಿ.ದೇವೇಗೌಡರು ಕಟ್ಟಿದ ಈ ಪಕ್ಷಕ್ಕೆ ಧಕ್ಕೆ ತರುವ ಅಥವಾ ಕುಟುಂಬದ ಗೌರವಕ್ಕೆ ಚ್ಯುತಿಯುಂಟು ಮಾಡುವ ಕೆಲಸ ಮಾಡಿಲ್ಲ. ಮುಂದೆ ಮಾಡುವುದೂ ಇಲ್ಲ. ದಯಮಾಡಿ ನನ್ನ ಭಾವನೆಗಳನ್ನು ಗೌರವಿಸಬೇಕು ಎಂದು ಮನವಿ ಮಾಡುತ್ತೇನೆ ಎಂದು ಅವರು ಹೇಳಿದ್ದಾರೆ.

ಸಹೋದರರ ನಡುವಿನ ಪ್ರತಿಷ್ಠೆಯಿಂದ ಹಾಸನದಲ್ಲಿ ನಲುಗುತ್ತಿರುವ ಜೆಡಿಎಸ್!

ಬೆಂಗಳೂರು, ಏ.4–(ಕೆಎಂಶಿ)ಹಾಸನ ರಾಜಕೀಯಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಎಂಟ್ರಿ ಕೊಡುತ್ತಿರುವುದು ಸಹೋದರ ಹೆಚ್.ಡಿ.ರೇವಣ್ಣ ಕುಟುಂಬಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಹಾಸನ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಆಯ್ಕೆಯನ್ನು ಸಹೋದರರು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಇದುವರೆಗೆ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ರೇವಣ್ಣ ಅವರ ಉಸ್ತುವಾರಿಯಲ್ಲೇ ನಡೆಯುತ್ತಿತ್ತು. ಕುಮಾರಸ್ವಾಮಿ ಈತನಕ ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಪ್ರಚಾರಕ್ಕೂ ಹೆಚ್ಚು ಒತ್ತು ಕೊಡುತ್ತಿರಲಿಲ್ಲ.

ರೇವಣ್ಣ ಅವರೂ ಇತರೆ ಜಿಲ್ಲೆಗಳ ಕ್ಷೇತ್ರಗಳ ವಿಚಾರದಲ್ಲಿ ಕುಮಾರಸ್ವಾಮಿ ಅವರ ನಿಲುವು ಬೆಂಬಲಿಸುತ್ತಿದ್ದಾರೆ. ಆದರೆ, ಈ ಬಾರಿ ರೇವಣ್ಣ ತಮ್ಮ ಪತ್ನಿ ಭವಾನಿ ರೇವಣ್ಣ ಅವರನ್ನು ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಕಣಕ್ಕಿಳಿಸಲು ಹೊರಟಿರುವುದು ಕುಮಾರಸ್ವಾಮಿ ಹಸ್ತಕ್ಷೇಪಕ್ಕೆ ಕಾರಣವಾಯಿತು.

ಕುಟುಂಬದಲ್ಲಿ ಮೂವರು ಜನಪ್ರತಿನಿಧಿಗಳಿದ್ದೂ ನಾಲ್ಕನೆಯವರನ್ನು ಕಣಕ್ಕಿಳಿಸಿದರೆ ವಿರೋಧಿಗಳು ಇದನ್ನೇ ರಾಜಕೀಯ ಅಸ್ತ್ರವಾಗಿ ಬಳಸಿಕೊಳ್ಳುತ್ತಾರೆ. ಒಂದು ಕ್ಷೇತ್ರಕ್ಕಾಗಿ 20 ಕ್ಷೇತ್ರಗಳನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ. ಹಗಲು, ರಾತ್ರಿ ಎನ್ನದೇ ಪಕ್ಷಕ್ಕೆ ದುಡಿದು ಕುಟುಂಬದವರೇ ಎಲ್ಲವನ್ನು ಪಡೆದುಕೊಂಡರೆ ಕಾರ್ಯಕರ್ತರ ಗತಿ ಏನು ಎಂಬ ವಾದವನ್ನು ಪಕ್ಷದ ಅಧಿನಾಯಕ ದೇವೇಗೌಡರು, ರೇವಣ್ಣ ಕುಟುಂಬದವರಿಗೆ ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಲ್ಲದೇ ಯಾವುದೇ ಕಾರಣಕ್ಕೂ ಭವಾನಿಗೆ ಟಿಕೆಟ್ ನೀಡಲಾಗದು ಎಂದು ಕಡ್ಡಿಮುರಿದಂತೆ ಹೇಳಿದ್ದಾರೆ.

ರೇವಣ್ಣ ಅವರು, ಭವಾನಿ ಅವರ ಪರ ಪಟ್ಟು ಹಿಡಿದು ಹಠ ಸಾಧಿಸಲು ಮುಂದಾದ ಸಂದರ್ಭದಲ್ಲಿ ಅರಸೀಕೆರೆ ಮತ್ತು ಅರಕಲಗೂಡು ಶಾಸಕರು ಪಕ್ಷ ತೊರೆದಿದ್ದು, ಅದಕ್ಕೂ ರೇವಣ್ಣ ಅವರೇ ಕಾರಣ ಎಂಬುದು ರಾಜಕೀಯ ವಲಯದಲ್ಲಿ ಸುದ್ದಿ ಹರಿದಾಡುತ್ತಿದ್ದಂತೆ ಆ ಕ್ಷೇತ್ರಗಳನ್ನು ಪ್ರತಿಷ್ಠೆಯಾಗಿ ಪರಿಗಣಿಸಿದ ಕುಮಾರಸ್ವಾಮಿ ತಮ್ಮವರನ್ನೇ ಆ ಕ್ಷೇತ್ರಗಳಲ್ಲಿ ಕಣಕ್ಕಿಳಿಸುತ್ತಿದ್ದಾರೆ. ಕುಮಾರಸ್ವಾಮಿ ಅವರ ನಿರ್ಧಾರ ರೇವಣ್ಣ ಅವರ ಮಕ್ಕಳನ್ನು ತಲ್ಲಣಗೊಳಿಸಿದೆ. ತಾಯಿ ನೆರವಿಗೆ ಆಸರೆಯಾಗಿ ನಿಂತಿರುವ ಪುತ್ರರು, ಚುನಾವಣಾ ಕಣಕ್ಕೆ ಇಳಿಸುತ್ತೇವೆ ಎಂಬ ಶಪಥ ಮಾಡಿದ್ದಾರೆ.

ಇದ್ಯಾವುದಕ್ಕೂ ಕಿವಿಗೊಡದ ಕುಮಾರಸ್ವಾಮಿ, ಪಕ್ಷದ ಹಿರಿಯ ನಾಯಕ ದೇವೇಗೌಡರ ಅನುಯಾಯಿ ಆಗಿದ್ದ ದಿ.ಪ್ರಕಾಶ್ ಅವರ ಪುತ್ರ ಸ್ವರೂಪ್ ಬೆನ್ನಿಗೆ ನಿಂತಿದ್ದಾರೆ. ಸಹೋದರರ ಪ್ರತ್ಯೇಕ ಕಠಿಣ ನಿಲುವು ಜೆಡಿಎಸ್‌ನಲ್ಲಿ ಮುಂದೇನಾಗುತ್ತದೋ ಎಂಬ ಆತಂಕಕ್ಕೆ ಎಡೆಮಾಡಿಕೊಟ್ಟಿದೆ. ಹೀಗಾಗಿ ಹಾಸನ ಟಿಕೆಟ್ ಹಂಚಿಕೆ ವಿಚಾರ ಇಬ್ಬರಿಗೂ ಪ್ರತಿಷ್ಠೆಯಾಗಿ ಪರಿಣಮಿಸಿದ್ದು, ಕಾರ್ಯಕರ್ತರು ಮತ್ತು ಪಕ್ಷದ ಮುಖಂಡರು ಚುನಾವಣೆ ಸಂದರ್ಭದಲ್ಲಿ ದಿಗಿಲುಗೊಳ್ಳುವಂತೆ ಮಾಡಿದೆ.

ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಂಧನ



ನ್ಯೂಯಾರ್ಕ್: ನೀಲಿಚಿತ್ರ ನಟಿಗೆ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಂಧನವಾಗಿದೆ. ವಿಚಾರಣೆ ಎದುರಿಸುವ ಸಲುವಾಗಿ ಡೊನಾಲ್ಡ್ ಟ್ರಂಪ್ ಫ್ಲಾರಿಡಾ ನಿವಾಸದಿಂದ ನ್ಯೂಯಾರ್ಕ್ ನಗರಕ್ಕೆ ಸೋಮವಾರ ಪ್ರಯಾಣ ಬೆಳೆಸಿದ್ದರು. ಈ ವೇಳೆ ಅವರನ್ನು ನ್ಯೂಯಾರ್ಕ್‌ನ ಮ್ಯಾನ್‌ಹಟನ್ ಕ್ರಿಮಿನಲ್ ಕೋರ್ಟ್‌ಗೆ ಪೊಲೀಸರು ಬಂಧಿಸಿ, ಕರೆದೊಯ್ದಿದ್ದಾರೆ.

ಟ್ರಂಪ್ ಕೋರ್ಟ್ ನಲ್ಲಿ ಜಡ್ಜ್ ಎದುರು ವಿಚಾರಣೆಗೆ ಹಾಜರುಪಡಿಸಲಾಗಿದೆ. ಟ್ರಂಪ್ ಬಂಧನ ಖಂಡಿಸಿ ಅವರ ಬೆಂಬಲಿಗರು ಕೋರ್ಟ್ ಮುಂದೆ ನೆರೆದಿರುವುದು ಕಂಡು ಬಂದಿದೆ. ಈ ಸಂದರ್ಭ ಟ್ರಂಪ್ ಅವರ ವಿಚಾರಣೆ ವಿರೋಧಿಸಿ ರಿಪಬ್ಲಿಕನ್ ಪಾರ್ಟಿಯ ಸದಸ್ಯರು ಪ್ರತಿಭಟನೆ ನಡೆಸುವ ಸಾಧ್ಯತೆ ದಟ್ಟವಾಗಿರುವ ಹಿನ್ನೆಲೆಯಲ್ಲಿ ಅಮೆರಿಕ ಸರ್ಕಾರವು ಸಾಕಷ್ಟು ರಕ್ಷಣಾ ಸಿಬ್ಬಂದಿಗಳನ್ನು ನಿಯೋಜಿಸುತ್ತಿದೆ. ಅಲ್ಲದೇ ಟ್ರಂಪ್ ಅವರಿಗೂ ಮಿಲಿಟರಿ ಭದ್ರತೆ ಒದಗಿಸಲಾಗುತ್ತದೆ ಎಂದು ತಿಳಿದುಬಂದಿದೆ. 2016ರ ಅಧ್ಯಕ್ಷೀಯ ಚುನಾವಣೆ ಪ್ರಚಾರ ಸಂದರ್ಭದಲ್ಲಿ ತಮ್ಮ ಜತೆಗಿನ ಸಂಬಂಧ ಬಹಿರಂಗಪಡಿಸದಿರಲು ನೀಲಿಚಿತ್ರ ತಾರೆಗೆ ಟ್ರಂಪ್ ಹಣ ಸಂದಾಯ ಮಾಡಿದ್ದ ಪ್ರಕರಣ ಇದಾಗಿದೆ.

ಪೋಷಕರೊಂದಿಗೆ ಡಾ.ಗುರುರಾಜ ಕರ್ಜಗಿ ಸಂವಾದ



ಮೈಸೂರು, ಏ. 4– ಖ್ಯಾತ ಶಿಕ್ಷಣ ತಜ್ಞರಾದ ಡಾ.ಗುರುರಾಜ ಕರ್ಜಗಿಯವರೊಂದಿಗೆ "ಶಿಕ್ಷಣದಲ್ಲಿ ಪೋಷಕರ ಪಾತ್ರ" ಕಾರ್ಯಕ್ರಮವನ್ನು ಏಪ್ರಿಲ್ 6ರ ಗುರುವಾರ ಸಂಜೆ 4.30ಕ್ಕೆ ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಕನಕದಾಸನಗರದ (ದಟ್ಟಗಳ್ಳಿ 3ನೇ ಹಂತ) 'ಮಾಂಗಲ್ಯ ಸಂಗಮ' ಭವನದಲ್ಲಿ ಏರ್ಪಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಭಾಗವಹಿಸಲು ಮುಕ್ತ ಪ್ರವೇಶಾವಕಾಶ ಕಲ್ಪಿಸಲಾಗಿದ್ದು, ಮುಂಗಡವಾಗಿ ಆಸಕ್ತರು ಸ್ಥಳಾವಕಾಶಕ್ಕಾಗಿ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಮಕ್ಕಳಿಗೆ ಶಿಕ್ಷಣ ಉತ್ತೇಜಿಸುವಲ್ಲಿ ಪೋಷಕರು ವಹಿಸಬೇಕಾದ ಕಾಳಜಿ ಹಾಗೂ ಮುಂದಾಲೋಚನೆಯ ಕ್ರಮಗಳ ಬಗ್ಗೆ ಡಾ. ಗುರುರಾಜ ಕರ್ಜಗಿಯವರಿಂದ ಸಲಹೆಗಳನ್ನು ಈ ಸಂದರ್ಭದಲ್ಲಿ ಪಡೆದುಕೊಳ್ಳಲು ಅವಕಾಶವಿರುತ್ತದೆ. ನೋಂದಾಯಿಸಲು ದೂರವಾಣಿ ಸಂಖ್ಯೆ: 9108002966ಕ್ಕೆ ಸಂಪರ್ಕಿಸಬಹುದಾಗಿದೆ.

ಒಂದನೇ ಪುಟದಿಂದ

ಎಡಿಜಿಪಿ ಅಲೋಕ್‌ಕುಮಾರ್ ಪರಿಶೀಲನೆ

ಹುಲಿ ಸಂರಕ್ಷಿತ ಪ್ರದೇಶ (ಬಂಡೀಪುರ ಟೈಗರ್ ರಿಸರ್ವ್) ವ್ಯಾಪ್ತಿ ಯಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ಗಳನ್ನು ನಿಯೋಜಿಸಿ ವ್ಯಾಪಕ ಭದ್ರತೆ ಮಾಡಿ ಕಟ್ಟೆಚ್ಚರ ವಹಿಸುವಂತೆ ಸಲಹೆ ನೀಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಸಫಾರಿ ಹೋಗುವುದರಿಂದ ಸಫಾರಿ ಕೇಂದ್ರ, ವಾಹನ ಸಾಗುವ ಮಾರ್ಗ ವನ್ನು ಸುಸಜ್ಜಿತವಾಗಿರಿಸಬೇಕು. ಸಫಾರಿ ಮಾರ್ಗದ ಗುಂಡಿಗಳನ್ನು ಮುಚ್ಚಿ ಎರಡೂ ಬದಿ ಬೆಳೆದಿರುವ ಗಿಡಗಂಟಿಗಳನ್ನು ತೆರವು ಗೊಳಿಸಿ ಸಂಚಾರಕ್ಕೆ ಅಣಿಗೊಳಿಸುವಂತೆಯೂ ಅಲೋಕ್‌ಕುಮಾರ್ ಇದೇ ಸಂದರ್ಭ ಪೊಲೀಸ್ ಅಧಿಕಾರಿಗಳಿಗೆ ತಾಕೀತು ಮಾಡಿದರು. ಮೋದಿ ಅವರು ವಿಶ್ರಾಂತಿ ಪಡೆ ಯಲು ಜಂಗಲ್ ರೆಸಾರ್ಟ್‌ನಲ್ಲಿ ಕೊಠಡಿಗಳ ಕಾಯ್ದಿರಿಸಿ, ಅವುಗಳ ಶುಚಿತ್ವ ಕಾಪಾಡಿ ಕೊಳ್ಳುವುದು. ಭದ್ರತಾ ಕಾರ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಯಾವುದೇ ಸಣ್ಣಪುಟ್ಟ ಲೋಪವಾಗ ದಂತೆ ಎಚ್ಚರ ವಹಿಸುವ ಜೊತೆಗೆ ಪ್ರಧಾನ ಮಂತ್ರಿಗಳ ಕಚೇರಿ ಮತ್ತು ಎಸ್‌ಪಿಜಿ ಅಧಿಕಾರಿಗಳು ನೀಡುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆಯೂ ಅವರು ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಪ್ರಧಾನಿ ಮೋದಿ ಪ್ರವಾಸ ಕಾರ್ಯಕ್ರಮದ ಪ್ರಕಾರ ಅವರು ಏಪ್ರಿಲ್ 8ರಂದು ರಾತ್ರಿ 8.40ಕ್ಕೆ ಚೆನ್ನೈ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವರು. ಅಲ್ಲಿಂದ ರಸ್ತೆ ಮೂಲಕ ಕಾರಿನಲ್ಲಿ ಹೋಟೆಲ್ ರ್‍ಯಾಡಿಸನ್ ಬ್ಲೂ ಪ್ಲಾಜಾಗೆ ಬಂದು ಅಂದು ರಾತ್ರಿ ವಾಸ್ತವ್ಯ ಹೂಡುವರು. ಏಪ್ರಿಲ್ 9ರಂದು ಬೆಳಗ್ಗೆ 6.30ಕ್ಕೆ ಭಾರತೀಯ ವಾಯುದಳ (ಐಎಎಫ್)ದ ಹೆಲಿಕಾಪ್ಟರ್‌ನಲ್ಲಿ ಬೆಳಗ್ಗೆ 7 ಗಂಟೆಗೆ ಚಾಮರಾಜನಗರ ಜಿಲ್ಲೆ ಮೇಲು ಕಮ್ಮನಹಳ್ಳಿ ಹೆಲಿಪ್ಯಾಡ್ ತಲುಪಿ, ಅಲ್ಲಿಂದ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಫಾರಿಗೆ ತೆರಳುವರು. ನಂತರ ತೆಪ್ಪಕಾಡು ಆನೆ ಶಿಬಿರಕ್ಕೆ ತೆರಳಿ, ಅಲ್ಲಿ ಆಸ್ಕರ್ ಪ್ರಶಸ್ತಿ ಗಳಿಸಿದ ಸಾಕ್ಷ್ಯ ಚಿತ್ರ 'ದಿ ಎಲಿಫೆಂಟ್ ವಿಸ್ಪರರ್ಸ್'ದಲ್ಲಿರುವ ಆನೆ ಮರಿ ಸಲಹಿದ ಬೊಮ್ಮ ಮತ್ತು ಬೆಳ್ಳಿ ದಂಪತಿಯನ್ನು ಸನ್ಮಾನಿಸುವರು.

ಅಲ್ಲಿಂದ 9.45ಕ್ಕೆ ಹೆಲಿಕಾಪ್ಟರ್‌ನಲ್ಲಿ ಹೊರಟು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ಏರ್ಪಡಿಸಿರುವ ಸಮಾರಂಭದಲ್ಲಿ ಹುಲಿ ಸಮೀಕ್ಷಾ ವರದಿ ಬಿಡುಗಡೆ ಮಾಡಲಿರುವ ನರೇಂದ್ರ ಮೋದಿ, ಮಧ್ಯಾಹ್ನ 12.40 ಗಂಟೆಗೆ ಮೈಸೂರಿನಿಂದ ನವದೆಹಲಿಗೆ ಹಿಂದಿರುಗುವರು ಎಂದು ಅರಣ್ಯ ಇಲಾಖೆ ಮೂಲಗಳು ತಿಳಿಸಿವೆ. ಮಾರ್ಚ್ 29ರಂದು ಎಸ್‌ಪಿಜಿ ಅಧಿಕಾರಿಗಳು ಬಂಡೀಪುರಕ್ಕೆ ಭೇಟಿ ನೀಡಿದ್ದ ವೇಳೆ ನೀಡಿದ ಸೂಚನೆಯಂತೆ ಸಫಾರಿ ಮಾರ್ಗದ ಗುಂಡಿಗಳನ್ನು ಮುಚ್ಚಿ ಪ್ರಧಾನಿಗಳ ಸಫಾರಿಗೆ ಅನುವು ಮಾಡಿಕೊಡಲಾಗುವುದು ಎಂದು ಬಂಡೀಪುರ ಟೈಗರ್ ರಿಸರ್ವ್ ನಿರ್ದೇಶಕ ಡಾ. ಪಿ. ರಮೇಶ್‌ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ನಂಜನಗೂಡು ನಂಜುಂಡೇಶ್ವರ ದೇವಸ್ಥಾನದ ಹುಂಡಿ ಹಣ ಅನ್ಯ ಉದ್ದೇಶಕ್ಕೆ ಬಳಕೆ ಯತ್ನ

ಮಾಜಿ ಸಿಎಂ ಕುಮಾರಸ್ವಾಮಿ ಸರಣಿ ಟ್ವೀಟಾಸ್ತ್ರ ಪ್ರಯೋಗ





ಬೆಂಗಳೂರು, ಏ.4–(ಕೆಎಂಶಿ) ರಾಜ್ಯ ಬಿಜೆಪಿ ಸರ್ಕಾರವು ನಂಜನಗೂಡಿನ ದೇವಾಲಯದ ಹುಂಡಿಯ ಹಣವನ್ನು ಲಪಟಾಯಿಸಲು ಹೊರಟಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಟುವಾಗಿ ಟೀಕಿಸಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ಬಿಜೆಪಿಯ ನಂಜನಗೂಡು ಶಾಸಕರು ದೇವಾಲಯದ ಹುಂಡಿ ಹಣವನ್ನು ಬೇರೆ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ಕಿಡಿಕಾರಿದ್ದಾರೆ.

ಸ್ವಯಂ ಘೋಷಿತ ಧರ್ಮೋದ್ಧಾರಕರು, ಹಿಂದೂ ಧರ್ಮವನ್ನು ಗುತ್ತಿಗೆಗೆ ಪಡೆದುಕೊಂಡವರೆಂದು ಬೀಗುವವರಿಗೆ ಧರ್ಮವೆಂದರೆ ಅಧಿಕಾರಕ್ಕಿರುವ ರಾಜಮಾರ್ಗವಾಗಿದೆ ದೇವರ ಹುಂಡಿ ಎಂಬುದು ಲಜ್ಜೆಗೆಟ್ಟು ಹೊಡೆದುಕೊಳ್ಳುವ ನಿಧಿ. ಇವರಿಗೆ ನಾಚಿಕೆ, ಸಂಕೋಚ ಎನ್ನುವುದು ಕನಿಷ್ಠಕ್ಕಿಂತ ಕಡಿಮೆ ಎನ್ನುವುದಕ್ಕೆ ಇಲ್ಲಿದೆ ಸಾಕ್ಷಿ ಎಂದು ದೇವರ ಹುಂಡಿಗೆ ಬಿಜೆಪಿ ಕನ್ನ ಎಂದು ಹ್ಯಾಷ್ ಟ್ಯಾಗ್ ಹಾಕಿದ್ದಾರೆ.

ನಾಡಿಗೆ ನಾಡೇ ಶ್ರದ್ಧಾಭಕ್ತಿಯಿಂದ ನಡೆದುಕೊಳ್ಳುವ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವರ ಹುಂಡಿಗೆ ಬಿಜೆಪಿ ಶಾಸಕ ಬಿ.ಹರ್ಷವರ್ಧನ್ ಅವರು ಕೈ ಹಾಕಿರುವುದು ದೈವಕ್ಕೆ ಎಸಗಿದ ಅಪಮಾನ. ಇದು ಯೋಜನೆಗಳ ಹೆಸರಿನಲ್ಲಿ ದೇವರ ಹುಂಡಿಗೂ ಕನ್ನ ಕೊರೆಯುವ ಬಿಜೆಪಿಯ ನೈಜ ಜಾಯಮಾನ. ಕಮಲ ಪಕ್ಷ ಮತ್ತೊಮ್ಮೆ ಬೆತ್ತಲಾಗಿದೆ ಎಂದು ಕುಮಾರಸ್ವಾಮಿ ಅವರು ಕುಟುಕಿದ್ದಾರೆ. ಮುಜರಾಯಿ ದೇವಾಲಯದ ಆದಾಯ ಆಯಾ ದೇಗುಲದ ಅಭಿವೃದ್ಧಿಗೇ ಬಳಸಬೇಕು ಎನ್ನುವುದು ಕಾನೂನು. ರಾಜ್ಯ ಬಿಜೆಪಿ ಸರ್ಕಾರ ಕಾನೂನನ್ನು ಗಾಳಿಗೆ ತೂರಿ, 40%ಗಾಗಿ ದೇವರ ದುಡ್ಡನ್ನೇ ನುಂಗಿನೀರು ಕುಡಿದು, ಆ ಹಣವನ್ನೂ ಚುನಾವಣೆಗೆ ಸುರಿಯಲು ಹೊರಟಿದೆ. ಪಾಪದ ಪಕ್ಷಕ್ಕೆ ಪ್ರಾಯಶ್ಚಿತ್ತ ತಪ್ಪದು. ಶ್ರೀ ನಂಜುಂಡೇಶ್ವರನ ಶಾಪವೂ ತಟ್ಟದೆ ಇರದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಹೇಳುವುದು ಒಂದು, ಮಾಡುವುದು ಇನ್ನೊಂದು. ಧರ್ಮ, ದೇವರು ಎನ್ನುವುದು ಬಿಜೆಪಿಗೆ ಮತ ಫಸಲು ಕೊಡುವ ಸಾಧನಗಳಷ್ಟೇ. ಶ್ರದ್ಧೆ, ಭಕ್ತಿ ಜನರದ್ದು; ಭುಕ್ತಿ ಮಾತ್ರ ಬಿಜೆಪಿಯದ್ದು. ನೀಚತನದ ಪರಮಾವಧಿ ಇದು. ಸಮುದಾಯ ಭವನಗಳ ನಿರ್ಮಾಣಕ್ಕೆ ದೇವರ ದುಡ್ಡೇ ಬೇಕೆ? ಕ್ಷೇತ್ರಕ್ಕೆ ಸರ್ಕಾರ ಕೊಟ್ಟ ಹಣ, ಶಾಸಕರ ವಿಶೇಷ ಅನುದಾನ ಇತ್ಯಾದಿಗಳೆಲ್ಲ ಎಲ್ಲಿ ಹೋದವು ಎಂದು ಪ್ರಶ್ನಿಸಿದ್ದಾರೆ. ರಾಜ್ಯ ಬಿಜೆಪಿ ಸರ್ಕಾರವು ಶ್ರೀ ನಂಜುಂಡೇಶ್ವರ ದೇವರ ಹುಂಡಿಯನ್ನು ಎಗರಿಸುವ ಶಾಸಕರ ಧೂರ್ತ ಪ್ರಯತ್ನಕ್ಕೆ ತಡೆ ಹಾಕಬೇಕು. ಈ ಬಗ್ಗೆ ಹೊರಡಿಸಿರುವ ಆದೇಶವನ್ನು ಕೂಡಲೇ ಹಿಂಪಡೆಯಬೇಕು. ದೇವರ ದುಡ್ಡನ್ನು ದೇವಾಲಯದ ಅಭಿವೃದ್ಧಿಗೇ ಬಳಸಬೇಕು ಎಂದು ಅವರು ಒತ್ತಾಯ ಮಾಡಿದ್ದಾರೆ.

ಎರಡು ಕೃತಿಗಳ ಬಿಡುಗಡೆ, ಮೂರ್ಖರ ದಿನಾಚರಣೆ



ಮೈಸೂರು, ಏ. 4– ಮೈಸೂರಿನ ಅಭಿರುಚಿ ಬಳಗ, ಎನ್.ವಿ.ರಮೇಶ್ ಕಲಾ ಬಳಗ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಸಂಯುಕ್ತ ಆಶ್ರಯದಲ್ಲಿ ಎನ್.ವಿ. ರಮೇಶ್ ಅವರ 'ಪ್ರತಿನಿತ್ಯ ಆರೋಗ್ಯದ ಬಗ್ಗೆ ಚಿಂತಿಸೋಣ' ಹಾಗೂ 'ಮನಸ್ಸಿನ ಅಲೆಗಳ ಉಯ್ಯಾಲೆ' ಪುಸ್ತಕಗಳ ಬಿಡುಗಡೆ ಜೊತೆಗೆ 'ಮೂರ್ಖರ ದಿನಾಚರಣೆ' ಯಂದು ಹಾಸ್ಯ ಕವಿಗೋಷ್ಠಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಮೈಸೂರಿನ ಕೃಷ್ಣಮೂರ್ತಿಪುರಂ 2ನೇ ಕ್ರಾಸ್‌ನಲ್ಲಿರುವ ನಮನ ಕಲಾ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ತ್ರಿಭಾಷಾ ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್ ಪುಸ್ತಕಗಳ ಲೋಕಾರ್ಪಣೆ ಮಾಡಿದರು. ಬಳಿಕ ಮಾತನಾಡಿದ ಅವರು, ಮೈಸೂರಿನ ಸಂಸ್ಕೃತಿಯ ಇತಿಹಾಸದಲ್ಲಿ ಬಾನುಲಿ ಹಾಗೂ ರಂಗಭೂಮಿಗಳಿಗೆ ಕೊಡುಗೆ ಸಲ್ಲಿಸಿದ ತಂದೆ–ಮಕ್ಕಳಾದ ಎನ್.ಎಸ್.ವಾಮನ್ ಹಾಗೂ ಎನ್.ವಿ.ರಮೇಶ್ ಅವರನ್ನು ಮೈಸೂರು ಹಾಗೂ ಕನ್ನಡ ನಾಡು ಎಂದೆಂದಿಗೂ ಮರೆಯದು. ತಮ್ಮ 75 ಪುಸ್ತಕಗಳಲ್ಲಿ 15 ಆರೋಗ್ಯ ಶಿಕ್ಷಣ ಪುಸ್ತಕಗಳನ್ನು ಬರೆದು ಪ್ರಕಟಿಸಿರುವ ಎನ್.ವಿ. ರಮೇಶ್ ಆ್ಯಕ್ಟರ್ ಆದರೂ ಡಾಕ್ಟರ್‌ರಂತೆ ವೈದ್ಯಲೋಕ ಹಾಗೂ ಹೆಲ್ತ್ ವಿಷನ್‌ನಂತಹ ಆರೋಗ್ಯ ಮಾಸಿಕಗಳೊಂದಿಗೆ ಕನ್ನಡದ ವಿವಿಧ ಪತ್ರಿಕೆಗಳು ಹಾಗೂ ಸಾಪ್ತಾಹಿಕಗಳಲ್ಲಿ 40 ವರ್ಷಗಳಿಂದ ಅಂಕಣ ಬರೆಯುತ್ತಿರುವುದು ಗಮನಾರ್ಹ ಎಂದರು.


ಹಿರಿಯ ಲೇಖಕರಾದ ಆಗುಂಬೆ ನಟರಾಜ್ ಮಾತನಾಡಿ, ನಮ್ಮೆಲ್ಲರಿಗೂ ಐತಿಹಾಸಿಕ ಹಾಗೂ ಸಾಮಾಜಿಕ ಪ್ರಜ್ಞೆ ಇರಬೇಕು. ಪ್ರಜ್ಞೆ ಇಲ್ಲದೇ ದೇಶಾಭಿಮಾನ ಹಾಗೂ ಭಾಷಾ ಪ್ರೇಮ ಇರದ ಇಂದಿನ ತಲೆಮಾರಿಗೆ ಹಿರಿಯರು ಮಾರ್ಗದರ್ಶನ ನೀಡಬೇಕು ಎಂದು ಕರೆಯಿತ್ತರು. 'ಪ್ರತಿನಿತ್ಯ ಆರೋಗ್ಯದ ಬಗ್ಗೆ ಚಿಂತಿಸೋಣ' ಪುಸ್ತಕದ ಬಗ್ಗೆ ಸಾಹಿತಿ ಡಾ. ಪಾರ್ಶ್ವನಾಥ್, 'ಮನಸ್ಸಿನ ಅಲೆಗಳ ಉಯ್ಯಾಲೆ' ಪುಸ್ತಕದ ಬಗ್ಗೆ ಕೆ.ಆರ್. ನಗರದ ಡಾ. ಭೇರ್ಯ ರಾಮ್‌ಕುಮಾರ್ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎನ್.ವಿ.ರಮೇಶ್ ಕುಟುಂಬದಲ್ಲಿ ನಡೆಯುವ ಜನ್ಮದಿನ ವಿವಾಹ ವಾರ್ಷಿಕೋತ್ಸವ ಹಾಗೂ ಹಿರಿಯರ ದಿನಗಳಂದು ಜನ ಸಾರ್ವಜನಿಕವಾಗಿ ಜನರೊಂದಿಗೆ ಬೆರೆತು ಆಚರಿಸಬೇಕು. ಇದರಿಂದ ಸಾಹಿತ್ಯ, ಸಂಗೀತ, ನಾಟಕ ಮುಂತಾದ ಕಲೆಗಳು ಉಳಿದು ಬೆಳೆಯುತ್ತವೆ ಎಂದರು.

ಇಂದು ನೀರು ಸರಬರಾಜಿನಲ್ಲಿ ವ್ಯತ್ಯಯ

ಮೈಸೂರು, ಏ. 4– ಮೈಸೂರು ನಗರಕ್ಕೆ ನೀರು ಕುಡಿಯುವ ನೀರು ಸರಬರಾಜು ಮಾಡುವ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಜ್ಯುವೆಲ್ ಫಿಲ್ಟರ್‌ನಲ್ಲಿ ತಾಂತ್ರಿಕ ಸಮಸ್ಯೆ ಇರುವುದರಿಂದ ಏ. 5 ರಂದು ಮೆಟ್ರೋಪೋಲ್, ರಾಮಸ್ವಾಮಿ ಸರ್ಕಲ್, ಅಗ್ರಹಾರ, ಜೆ.ಪಿ.ನಗರ, ವಿದ್ಯಾರಣ್ಯಪುರಂ, ಅಶೋಕಪುರಂ, ಭಾಗಶಃ ಬನ್ನಿಮಂಟಪ, ವೀರನಗೆರೆ, ದೇವರಾಜ ಮೊಹಲ್ಲಾ, ವಾರ್ಡ್ ಸಂಖ್ಯೆ 8, 17, 23, 49, 50, 51, 55, 56, 60, 61, 62 ಹಾಗೂ ಇತರೆ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನೀರು ಸರಬರಾಜು ಮತ್ತು ಒಳಚರಂಡಿ ಪಶ್ಚಿಮ ವಿಭಾಗದ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹುಲಿ ಸಂರಕ್ಷಣೆಯಲ್ಲಿ ಭಾರತದ ಹೆಗ್ಗಳಿಕೆ



ಪ್ರಧಾನಮಂತ್ರಿ ನರೇಂದ್ರ ಮೋದಿ ಮೈಸೂರಲ್ಲಿ ಇದೇ ತಿಂಗಳ ಒಂಬತ್ತರಂದು ದೇಶದ ಇತ್ತೀಚಿನ ಹುಲಿ ಗಣತಿಯ ವರದಿಯನ್ನು (Tiger Census Report) ಬಿಡುಗಡೆಗೊಳಿಸಿ, ಹುಲಿ ಯೋಜನೆಯ 50ನೇ ವರ್ಷದ ಸಂಭ್ರಮಾಚರಣೆಗೆ ಚಾಲನೆ ನೀಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಹುಲಿ ಯೋಜನೆಯ ಬಗ್ಗೆ ಕೆಲವು ವಿವರಗಳನ್ನು ತಿಳಿದುಕೊಳ್ಳುವುದು ಪ್ರಸ್ತುತವೆನಿಸುತ್ತದೆ. ದೇಶದಲ್ಲಿ ನಶಿಸುತ್ತಿರುವ ಹುಲಿ ಸಂತತಿಯ ವೃದ್ಧಿಗೆ ಕೇಂದ್ರ ಸರ್ಕಾರ 50 ವರ್ಷಗಳ ಹಿಂದೆ (1973) ಪ್ರಾರಂಭಿಸಿದ್ದ ಟೈಗರ್ ಪ್ರಾಜೆಕ್ಟ್ ಯೋಜನೆ ಸಾಕಷ್ಟು ಯಶಸ್ವಿಯಾಗಿದೆ. ಎಲ್ಲರಿಗೂ ಗೊತ್ತಿರುವ ಹಾಗೆ ಅತ್ಯಂತ ಸುಂದರವಾದ ಪ್ರಾಣಿ ಎಂಬ ಅಭಿದಾನಕ್ಕೆ ಪಾತ್ರವಾಗಿರುವ ಹುಲಿಯನ್ನು "ಬಿಗ್ ಕ್ಯಾಟ್" ಎಂದೂ ಕರೆಯಲಾಗುತ್ತದೆ. ನಮ್ಮ ದೇಶದ ರಾಷ್ಟ್ರೀಯ ಪ್ರಾಣಿಯೂ ಹುಲಿಯೇ ಆಗಿದೆ. ಆದರೆ ಅತ್ಯಂತ ಕಳವಳಕಾರಿಯಾದ ಸಂಗತಿಯೆಂದರೆ ಹುಲಿ ಸಂತತಿ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿರುವುದು. ಪ್ರಸ್ತುತ ಭಾರತದ ವಿವಿಧ ಹುಲಿರಕ್ಷಿತ ಅರಣ್ಯಗಳಲ್ಲಿ 3,000 ಹುಲಿಗಳಿವೆ ಎಂದು ಅಂದಾಜಿಸಲಾಗಿದೆ. ಅದೇ ವೇಳೆ ಇಡೀ ವಿಶ್ವದಲ್ಲಿರುವ ಒಟ್ಟು ಹುಲಿಗಳ ಪೈಕಿ ಶೇಕಡಾ 70 ರಷ್ಟು ನಮ್ಮ ದೇಶದಲ್ಲೇ ಇವೆ ಮತ್ತು ಈ ಸಂಖ್ಯೆ ಬರುವ ವರ್ಷಗಳಲ್ಲಿ ಹೆಚ್ಚಾಗುವ ನಿರೀಕ್ಷೆಯೂ ಇದೆ.

ಆಘಾತಕಾರಿ ಸಂಗತಿಯೆಂದರೆ, ದೇಶದ ಮೂರು ಹುಲಿ ಸಂರಕ್ಷಿತ ಪ್ರದೇಶಗಳಾದ ದಂಪಾ (ಮಿಜೊರಾಮ್), ಬಕ್ಸಾ (ಪಶ್ಚಿಮ ಬಂಗಾಳ) ಹಾಗೂ ಪಲಮೌ (ಜಾರ್ಖಂಡ್) ಇವುಗಳಲ್ಲಿ 2018ರ ವರದಿಯ ಪ್ರಕಾರ ಯಾವುದೇ ಹುಲಿ ಉಳಿದಿಲ್ಲ. ಆಶಾದಾಯಕ ಸಂಗತಿ ಎಂದರೆ, ಭಾರತವು ವಿಶ್ವದ ಶೇ.8ರಷ್ಟು ಜೀವ ವೈವಿಧ್ಯದ ನೆಲೆಯಾಗಿದೆ. ಅದೇ ರೀತಿ ಪ್ರತಿ ವರ್ಷದ ಜುಲೈ 29ನೇ ದಿನಾಂಕವನ್ನು 'ಅಂತಾರಾಷ್ಟ್ರೀಯ ಹುಲಿ' ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ.

ಕಳೆದ ಶತಮಾನದ ಅಂತ್ಯದ ವೇಳೆಗೆ (1900) ದೇಶದಲ್ಲಿ 20,000ದಿಂದ 40,000ವರೆಗೆ ಹುಲಿಗಳು ಇರುತ್ತವೆ ಎಂದು ಅಂದಾಜಿಸಲಾಗಿತ್ತಾದರೂ ಸಹ ವಿವಿಧ ಕಾರಣಗಳಿಗೋಸ್ಕರವಾಗಿ, ವಿಶೇಷವಾಗಿ ಹುಲಿ ಉಗುರು ಮತ್ತು ಚರ್ಮಗಳಿಗಾಗಿ, ದಾರುಣ ರೀತಿಯಲ್ಲಿ ಹುಲಿಗಳ ಹತ್ಯೆಯಾಗುತ್ತಿರುವುದರಿಂದ, ಹುಲಿಗಳ ಸಂಖ್ಯೆ ಬರುಬರುತ್ತ ಕ್ಷೀಣಿಸುತ್ತಿದೆ 1970ರ ಹೊತ್ತಿಗೆ ದೇಶದಲ್ಲಿ 2000ಕ್ಕೂ ಕಡಿಮೆ ಹುಲಿಗಳಿದ್ದವು. ಆಗ ಹಲವಾರು ವ್ಯಾಘ್ರ ಪ್ರಿಯ ಸಂಘಟನೆಗಳು ಹುಲಿ ಸಂತತಿಯ ರಕ್ಷಣೆಗೆ ಮುಂದಾಗಬೇಕೆಂದು ಪ್ರಧಾನಮಂತ್ರಿ ಕಾರ್ಯಾಲಯದ ಮೊರೆ ಹೋದವು. ಆಗ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ಡಾ.ಕರಣ್ ಸಿಂಗ್‌ರವರ ನೇತೃತ್ವದಲ್ಲಿ ಒಂದು ತಂಡವನ್ನು ರಚಿಸಿದರು. ಡಾ. ಕರಣ್ ಸಿಂಗ್‌ರವರು ಹುಲಿಗಳ ಸಂರಕ್ಷಣೆಯ ವಿಷಯದಲ್ಲಿ ಮಹತ್ತರವಾದ ನಿರ್ಧಾರ ತೆಗೆದುಕೊಳ್ಳುವ ಮೂಲಕ ಹುಲಿಗಳ ಸಂರಕ್ಷಣೆಗೆ ಹೊಸ ಭಾಷ್ಯ ಬರೆದರು. ನಂತರ ಕೇಂದ್ರ ಸರ್ಕಾರ ಕರ್ನಾಟಕದ ಬಂಡಿಪುರ ಸೇರಿದಂತೆ, ಒಂಬತ್ತು ಹುಲಿ ರಕ್ಷಿತ ಪ್ರದೇಶಗಳನ್ನು ಸ್ಥಾಪಿಸಿತು. 1980ರ ಹೊತ್ತಿಗೆ ದೇಶದಲ್ಲಿ 15 ಹುಲಿ ಸಂರಕ್ಷಿತ ಪ್ರದೇಶಗಳಿದ್ದವು. ನಂತರ, 2005–06ರ ಹೊತ್ತಿಗೆ ಅವುಗಳ ಸಂಖ್ಯೆ 28ಕ್ಕೆ ಏರಿತು. ಪ್ರಸ್ತುತ ದೇಶಾದ್ಯಂತ 53 ಹುಲಿ ಸಂರಕ್ಷಿತ ಪ್ರದೇಶಗಳಿವೆ. ನಂತರದ ವರ್ಷಗಳಲ್ಲಿ, 'ಕೇಂದ್ರ ಸರ್ಕಾರ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ' ರಚಿಸಿತು. 2010ರಲ್ಲಿ ದೇಶಾದ್ಯಂತ 1706 ರಷ್ಟಿದ್ದ ಹುಲಿಗಳ ಸಂಖ್ಯೆ, 2014ರಲ್ಲಿ 2,226 ಹಾಗೂ 2018ರಲ್ಲಿ 2,967ರಷ್ಟಾಯಿತು.

ವನ್ಯಜೀವಿ ಹಾಗೂ ಸಂರಕ್ಷಣಾ ತಜ್ಞರ ಪ್ರಕಾರ ಕೇವಲ ಅಂಕಿ ಅಂಶಗಳು "ಹುಲಿ ಯೋಜನೆ'ಯ ಯಶಸ್ಸಿನ ಅಳತೆಗೋಲಾಗಲಾರದು. ಪಶ್ಚಿಮ ಘಟ್ಟಗಳ ಕೆಲವು ಪ್ರದೇಶಗಳಲ್ಲಿ ಹುಲಿಗಳ ಸಂಖ್ಯೆ ತುಂಬಾ ಕ್ಷೀಣಿಸಿದೆ. ಅರಣ್ಯಗಳ ನಾಶ ಸಹ ಹುಲಿ ಸಂತತಿಯ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸಿದೆ. ಆದರೆ ಒಟ್ಟಾರೆಯಾಗಿ, ಹುಲಿ ಯೋಜನೆ ತಕ್ಕ ಮಟ್ಟಿನ ಯಶಸ್ಸು ಸಾಧಿಸಿದ್ದು, ಮುಂಬರುವ ವರ್ಷಗಳಲ್ಲಿ ಈ ಅಪರೂಪದ ಪ್ರಾಣಿಯ ಸಂತತಿಯ ಉಳಿವಿಗೆ ಎಲ್ಲಾ ರಾಜ್ಯ ಸರ್ಕಾರಗಳು ಹಾಗೂ ಕೇಂದ್ರ ಸರ್ಕಾರ ದಿಟ್ಟ ಹಾಗೂ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಪ್ರಸ್ತುತ ದೇಶದಲ್ಲಿ ಮಧ್ಯಪ್ರದೇಶ ಅತಿ ಹೆಚ್ಚು ಹುಲಿಗಳನ್ನು(526) ಹೊಂದಿರುವ ರಾಜ್ಯವಾದರೆ ನಂತರದ ಸ್ಥಾನ ನಮ್ಮ ಕರ್ನಾಟಕದ್ದು (524). ಉಳಿದಂತೆ, ಉತ್ತರ ಖಂಡದಲ್ಲಿ 442, ತಮಿಳುನಾಡಿನಲ್ಲಿ 224, ಮಹಾರಾಷ್ಟ್ರದಲ್ಲಿ 190, ಕೇರಳದಲ್ಲಿ 136 ಹಾಗೂ ಅಸ್ಸಾಂನಲ್ಲಿ 167 ಹುಲಿಗಳು ಇವೆ ಎಂದು ಅಂದಾಜಿಸಲಾಗಿದೆ. ದೇಶದ ಟಾಪ್ ಟೆನ್ ಹುಲಿ ಸಂರಕ್ಷಿತ ಪ್ರದೇಶಗಳು ಈ ಇಂತಿವೆ.

1. ನಾಗಾರ್ಜುನ ಸಾಗರ್ ಶ್ರೀಶೈಲಂ–ಆಂಧ್ರ ಪ್ರದೇಶ ಮತ್ತು ತೆಲಂಗಾಣ 3296.31 ಚ.ಕಿ.ಮೀ. ವಿಸ್ತಾರ
2. ಮನಸ್ ರಾಷ್ಟ್ರೀಯ ಉದ್ಯಾನವನ–ಅಸ್ಸಾಂ 3150.92 ಚ.ಕಿ.ಮೀ. ವಿಸ್ತಾರ
3. ಮೆಲ್ ಘಾಟ್ ಹುಲಿ ಸಂರಕ್ಷಿತ ಪ್ರದೇಶ–ಮಹಾರಾಷ್ಟ 2768.52 ಚ.ಕಿ.ಮೀ.
4. ಸಿಮಿಲಿಪಾಲ್ ರಾಷ್ಟ್ರೀಯ ಉದ್ಯಾನವನ 2759 ಚ.ಕಿ.ಮೀ.
5. ಅಮ್ರಾಬಾದ್ ಹುಲಿ ಸಂರಕ್ಷಿತ ಪ್ರದೇಶ– ತೆಲಂಗಾಣ 2611.39 ಚ.ಕಿ.ಮೀ.
6. ಸುಂದರ್ ಬನ್ಸ್ ಹುಲಿ ಸಂರಕ್ಷಿತ ಪ್ರದೇಶ–ಪ.ಬಂಗಾಳ 2584.89 ಚ.ಕಿ.ಮೀ.
7. ದುದ್ವಾ ಹುಲಿ ಸಂರಕ್ಷಿತ ಪ್ರದೇಶ– ಉತ್ತರ ಪ್ರದೇಶ 2201.77 ಚ.ಕಿ.ಮೀ.
8. ಸಾತ್ಪುರ ಹುಲಿ ಸಂರಕ್ಷಿತ ಪ್ರದೇಶ – ಮಧ್ಯ ಪ್ರದೇಶ 2133.30 ಚ.ಕಿ.ಮೀ.
9. ನಾಮದಾಫ ಹುಲಿ ಸಂರಕ್ಷಿತ ಪ್ರದೇಶ–ಆಂಧ್ರಪ್ರದೇಶ 2051 ಚ.ಕಿ.ಮೀ.
10. ಕನ್ಹಾ ಹುಲಿ ಸಂರಕ್ಷಿತ ಪ್ರದೇಶ–ಮಾಂಡ್ಲ ಜಿಲ್ಲೆ 2051 ಚ.ಕಿ.ಮೀ.

■ ಕೆ.ವಿ.ವಾಸು, ವಕೀಲರು,
ಮೊ.9341731661

ಮೈಸೂರು ಮಿತ್ರ ಬುಧವಾರ 5 ಏಪ್ರಿಲ್ 2023

'ಕುಲಶಾಸ್ತ್ರ ಅಧ್ಯಯನ'ದ ಹಿನ್ನೆಲೆಯಲ್ಲಿ

ಕೊಡವೇತರ ಸಮುದಾಯಗಳ ಬಗ್ಗೆ ತಾರತಮ್ಯ ಬೇಡ

ಸೇವ್ ಕೊಡಗು ವೇದಿಕೆ ತೀವ್ರ ವಿರೋಧ



ಮಡಿಕೇರಿ, ಏ.4– 'ಕುಲಶಾಸ್ತ್ರ ಅಧ್ಯಯನ'ದ ಹಿನ್ನೆಲೆಯಲ್ಲಿ ಕೊಡವ ಭಾಷೆಯನ್ನಾಡುವ ಕೊಡವೇತರ ಸಮುದಾಯಗಳನ್ನು ತಾರತಮ್ಯ ಬೇಡ. ಇಂತಹ ಪ್ರಯತ್ನಗಳನ್ನು ಸೇವ್ ಕೊಡಗು ವೇದಿಕೆ ತೀವ್ರವಾಗಿ ವಿರೋಧಿಸುತ್ತದೆ ಎಂದು ವೇದಿಕೆಯ ಪದಾಧಿಕಾರಿ ಕೆ.ಬಿ. ಬೋಪಣ್ಣ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕುಲಶಾಸ್ತ್ರ ಅಧ್ಯಯನ ವಿಚಾರದಲ್ಲಿ ಸ್ವಯಂಘೋಷಿತ ನಾಯಕರೊಬ್ಬರು ಕೊಡವ ಭಾಷೆಯನ್ನಾಡುವ ಜನಾಂಗಗಳನ್ನು ಪ್ರಾಣಿಗಳಿಗೆ ಹೋಲಿಕೆ ಮಾಡಿ ಹೇಳಿಕೆ ನೀಡಿರುವುದು ಜನಾಂಗೀಯ ತಾರತಮ್ಯವಾಗಿದೆ ಎಂದು ಆರೋಪಿಸಿದರು. ಸಮಾನತೆ, ಸಹೋದರತ್ವ ಮತ್ತು ಪ್ರಜಾಸತ್ತಾತ್ಮಕತೆಯ ಬುನಾದಿಯ ಮೇಲೆ ರಚಿತವಾಗಿರುವ ಭಾರತದ ಸಂವಿಧಾನ ಮತ್ತು ಬಾಬಾ ಸಾಹೇಬ್ ಡಾ.ಬಿ. ಆರ್.ಅಂಬೇಡ್ಕರ್ ಅವರನ್ನು ಮಾತು ಮಾತಿಗೂ ಉದ್ಧರಿಸುವ ಈ ವ್ಯಕ್ತಿ ಒಂದು ಜನಾಂಗವನ್ನು ಶ್ರೇಷ್ಠವೆಂದು ಇತರ ಕೊಡವ ಭಾಷಿಕ ಜನಾಂಗಗಳು ಕೀಳೆಂದು ಹೇಳ ಹೊರಟಿರುವುದು ವಿಪರ್ಯಾಸ. ಇದರಲ್ಲಿ ಇತರ ಜನಾಂಗದವರನ್ನು ಕೊಡವ ಸಂಸ್ಕೃತಿಯ ಪರಿಧಿಯಿಂದ ಹೊರದಬ್ಬಿ ಅವರಿಗೆ ತ್ರಿಶಂಕು ಸ್ವರ್ಗ ಸೃಷ್ಟಿಸುವ ಹುನ್ನಾರ ಅಡಗಿದೆ ಎಂದು ಆರೋಪಿಸಿದರು. ಕೊಡವ ಭಾಷೆ, ಸಂಸ್ಕೃತಿ, ಆಚಾರ–ವಿಚಾರ, ನಡೆ–ನುಡಿ, ಪದ್ಧತಿ, ಪರಂಪರೆ ಎಲ್ಲವೂ ಒಂದೇ ಆಗಿರುವ ಕೊಡವ ಭಾಷಿಕ ಜನಾಂಗಗಳಲ್ಲಿ ಯಾರು ಶ್ರೇಷ್ಠರು ಮತ್ತು ಹೇಗೆ ಎಂಬುದನ್ನು ಸಮರ್ಥವಾಗಿ ವಿವರಿಸಲು ಸಾಧ್ಯವಾಗದೆ, ಅನಗತ್ಯ ಹೇಳಿಕೆಗಳನ್ನು ನೀಡುವುದು ಅವರ ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ ಎಂದು ಕಟುವಾಗಿ ನುಡಿದರು.

ಕಳೆದ ಎರಡು ಮೂರು ದಶಕಗಳಿಂದ ವಿವಿಧ ಅಜೆಂಡಾಗಳನ್ನು ಮುಗ್ಧ ಜನರ ಮೇಲೆ ಹೇರುವ ಪ್ರಯತ್ನಗಳನ್ನು ನಡೆಸುತ್ತಾ, ಅದರಲ್ಲಿ ಸಫಲತೆ ಕಾಣದೆ ಭ್ರಮ ನಿರಸನಗೊಂಡು ಕೊಡವ ಭಾಷಿಕ ಸಮುದಾಯಗಳ ಬಗ್ಗೆ ಹೇಳಿಕೆ ನೀಡಿರುವುದು ಅವರ ವಿಫಲತೆಯ ಪರಾಕಾಷ್ಠೆ ಆಗಿದೆ ಎಂದು ಬೋಪಣ್ಣ ಲೇವಡಿ ಮಾಡಿದರು.

ಇದೇ ರೀತಿ ಕೊಡವ ನಾಟಕಕಾರರೊಬ್ಬರು ನೀಡಿರುವ ಹೇಳಿಕೆ ಕೊಡವ ಸಮುದಾಯವನ್ನು ಮುಜುಗರಕ್ಕೀಡು ಮಾಡಿದೆ. ಇತಿಹಾಸದ ಪರಿಜ್ಞಾನವಿಲ್ಲದೆ ನೀಡುವ ಇಂತಹ ಹೇಳಿಕೆಗಳು ಇತಿಹಾಸಕ್ಕೆ ಅಪಚಾರ ವೆಸಗಿದಂತೆ ಎಂದು ಕೆ.ಬಿ. ಬೋಪಣ್ಣ ಹೇಳಿದರು. ಕೊಡವ ಭಾಷಿಕ ಸಮುದಾಯಗಳ ವಿರುದ್ಧದ ಹೇಳಿಕೆಗಳ ಬಗ್ಗೆ ಅಖಿಲ ಕೊಡವ ಸಮಾಜ ಹೊರತುಪಡಿಸಿದಂತೆ ಸಮುದಾಯದ ಮುಖಂಡರು ತಮ್ಮ ಅಭಿಪ್ರಾಯ ವ್ಯಕ್ತಪಡಿಸದಿರುವುದು ದುರದೃಷ್ಟಕರವೆಂದು ಬೋಪಣ್ಣ ಅಭಿಪ್ರಾಯಿಸಿದರು.

ಆಯ್ಕೆ ಪಕ್ಷಾತೀತವಾಗಿರಲಿ: ಈಗಾಗಲೇ ಕರ್ನಾಟಕ ರಾಜ್ಯ ವಿಧಾನಸಭೆಗೆ ಚುನಾವಣೆಗೆ ಘೋಷಣೆಯಾಗಿದ್ದು, ಕೊಡಗಿನಲ್ಲಿ ವಿವಿಧ ಸಮುದಾಯಗಳ ಸಾಮರಸ್ಯಕ್ಕೆ ಒತ್ತು ನೀಡುವ ಮತ್ತು ಕೊಡಗಿನ ಅಭಿವೃದ್ಧಿಯಲ್ಲಿ ಭ್ರಷ್ಟಾಚಾರ ಮುಕ್ತ ಆಡಳಿತ ನೀಡುವ ಅಭ್ಯರ್ಥಿಯನ್ನು ಪಕ್ಷಾತೀತವಾಗಿ ಆಯ್ಕೆ ಮಾಡಿದರೆ ಭ್ರಷ್ಟಾಚಾರ ರಹಿತ ಸ್ವಚ್ಛ ಆಡಳಿತ ಪಡೆಯಲು ಸಾಧ್ಯವಾಗುತ್ತದೆ. ಕೊಡಗಿನ ಮತದಾರರು ಈ ಬಗ್ಗೆ ಚಿಂತಿಸಿ ತಮ್ಮ ಮೌಲ್ಯಯುತ ಮತವನ್ನು ನೀಡುವಂತೆ ಬೋಪಣ್ಣ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಪದಾಧಿಕಾರಿಗಳಾದ ಬಿ.ಟಿ.ದಿನೇಶ್, ಜಿನ್ನು ನಾಣಯ್ಯ ಉಪಸ್ಥಿತರಿದ್ದರು.

ಕೊಡವ ಕುಟುಂಬಗಳ ಅಪ್ಪಚೆಟ್ಟೋಳಂಡ ಹಾಕಿ ಉತ್ಸವ

ಕ್ವಾರ್ಟರ್ ಫೈನಲ್‌ಗೆ ಪುದಿಯೊಕ್ಕಡ, ಕುಲ್ಲೇಟೀರ, ಕಂಬೀರಂಡ, ನೆಲ್ಲಮಕ್ಕಡ ತಂಡಗಳು

ಏ.7ರಂದು ಸೆಮಿಫೈನಲ್, ಏ.9ರಂದು ಫೈನಲ್ ಪಂದ್ಯ

ಇಂದಿನ ಪ್ರೀ ಕ್ವಾರ್ಟರ್ ಪಂದ್ಯಗಳು:
9.30 ಕಲಿಯಂಡ – ಚೆಕ್ಕೇರ
11.00 ಅಮ್ಮಣಿಚಂಡ – ಕರಿನೆರವಂಡ
1.00 ಕೊಂಗಂಡ – ಪಳಂಗಂಡ
2.30 ಮುರುವಂಡ – ಕುಪ್ಪಂಡ



ನಾಪೋಕ್ಲು, ಏ.4– ಕೊಡವ ಕುಟುಂಬಗಳ ನಡುವಿನ 23ನೇ ವರ್ಷದ ಅಪ್ಪಚೆಟ್ಟೋಳಂಡ ಹಾಕಿ ಪ್ರೀ ಕ್ವಾರ್ಟರ್ ಪಂದ್ಯದಲ್ಲಿ ಪುದಿಯೊಕ್ಕಡ, ಕುಲ್ಲೇಟೀರ, ಕಂಬೀರಂಡ, ನೆಲ್ಲಮಕ್ಕಡ ತಂಡಗಳು ಗೆದ್ದು ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಜನರಲ್ ತಿಮ್ಮಯ್ಯ ತಾಲೂಕು ಕ್ರೀಡಾಂಗಣದ ಮೈದಾನದಲ್ಲಿ ಏ.7 ರಂದು ಸೆಮಿ ಫೈನಲ್ ಪಂದ್ಯ ಮತ್ತು ಏ 9 ರಂದು ಫೈನಲ್ ಪಂದ್ಯ ನಡೆಯಲಿದೆ.

ವಿವರ: ಪುದಿಯೊಕ್ಕಡ ಮತ್ತು ಚೌರೀರ ನಡುವೆ ನಡೆದ ಪಂದ್ಯದಲ್ಲಿ ಪುದಿಯೊಕ್ಕಡ 3–2 ಗೋಲುಗಳ ಅಂತರದಲ್ಲಿ ಗೆಲುವು ಪಡೆದುಕೊಂಡಿತು. ಪುದಿಯೊಕ್ಕಡ ಪರ ಬೋಜಣ್ಣ, ಪ್ರಧಾನ್ ಸೋಮಣ್ಣ, ವಿಪನ್ ಸೋಮಣ್ಣ ಗೋಲು ದಾಖಲಿಸಿದರು. ಕುಲ್ಲೇಟೀರ ತಂಡ ಪೆಮ್ಮಂಡ ವಿರುದ್ಧ 4–2 ಗೋಲುಗಳ ಗೆಲುವು ಪಡೆದುಕೊಂಡಿತು. ಯಶಿಕ್ ಮುತ್ತಣ್ಣ 2, ಅವಿನಾಶ್ ಮಾದಪ್ಪ ಅರ್ಜನ್ ಸೋಮಣ್ಣ ತಲಾ ಒಂದು ಗೋಲು ಹೊಡೆದರು.

ಕಂಬೀರಂಡ, ಮುಕ್ಕಾಟೀರ (ಪುಲಿಕೋಟ್) ವಿರುದ್ಧ 2–1 ಗೋಲುಗಳಿಂದ ಗೆಲುವಿನ ನಗೆ ಬೀರಿತು. ಬೋಪಣ್ಣ ಮತ್ತು ಮಯ್ಯೂರ್ ತಲಾ ಒಂದೊಂದು ಗೋಲು ದಾಖಲಿಸಿದರು.

ನೆಲ್ಲಮಕ್ಕಡ ತಂಡ ಬೊವ್ವೇರಿಯಂಡ ವಿರುದ್ಧ 8–0 ಗೋಲುಗಳಲ್ಲಿ ಭರ್ಜರಿ ಗೆಲುವು ದಾಖಲಿಸಿತು. ಸೋಮಯ್ಯ 3, ಆಕಾಶ್, ಅಯ್ಯಪ್ಪ, ಪ್ರತೀಕ್ ಪೂವಣ್ಣ, ಮೊಣ್ಣಪ್ಪ ತಲಾ ಒಂದೊಂದು ಗೋಲು ಹೊಡೆದು ಸಂಭ್ರಮಿಸಿದರು.

ಕೊಡಗು ಜಿಲ್ಲೆಗೆ ಮತ್ತೊಂದು ಹೆಮ್ಮೆಯ ಗರಿ

ಕೊಡಗಿನ ಐಚೆಟ್ಟಿರ ಅಯ್ಯಪ್ಪ ವಾಯುಪಡೆಯ 'ಏರ್ ವೈಸ್ ಮಾರ್ಷಲ್' ಆಗಿ ಪದೋನ್ನತಿ



ಮಡಿಕೇರಿ, ಏ.4– ಯೋಧ ಪರಂಪರೆಯ ಕೊಡಗು ಜಿಲ್ಲೆಗೆ ಮತ್ತೊಂದು ಹೆಮ್ಮೆಯ ಗರಿ ಮೂಡಿದೆ. ಭಾರತೀಯ ವಾಯುಪಡೆಯಲ್ಲಿ ಏರ್‌ಕಮಾಂಡರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಕೊಡಗಿನವರಾದ ಐಚೆಟ್ಟಿರ ಅಯ್ಯಪ್ಪ(ಪ್ರದೀಪ್) ಅವರು 'ಏರ್‌ವೈಸ್ ಮಾರ್ಷಲ್' ಹುದ್ದೆಗೆ ಪದೋನ್ನತಿ ಹೊಂದಿದ್ದಾರೆ. ಇದೀಗ ನವ ದೆಹಲಿಯಲ್ಲಿರುವ ವಾಯುಪಡೆಯ ಕೇಂದ್ರ ಕಚೇರಿಗೆ ನಿಯೋಜಿಸಲ್ಪಟ್ಟಿದ್ದಾರೆ.

ಕೊಡಗಿನವರಾದ ನಿವೃತ್ತ ಬ್ರಿಗೇಡಿಯರ್ ಐಚೆಟ್ಟಿರ ಕುಟ್ಟಪ್ಪ ಮತ್ತು ಸೀತಾ(ತಾಮನೆ ಕೋದಂಡ) ಅವರ ಪುತ್ರರಾಗಿರುವ ಅಯ್ಯಪ್ಪ ಅವರು ಎನ್‌ಡಿಎ ವಿದ್ಯಾರ್ಥಿಯಾಗಿ ವಾಯುಪಡೆ ಸೇರ್ಪಡೆಯಾಗಿದ್ದರು. ಬಳಿಕ ಮಿಗ್ 'ಫೈಟರ್ ಪೈಲಟ್' ಆಗಿ ಕರ್ತವ್ಯ ನಿರ್ವಹಿಸಿದ್ದರು. ತಮ್ಮ ಕರ್ತವ್ಯ ನಿಷ್ಠೆಯಿಂದ 'ವಾಯುಸೇನಾ ಮೆಡಲ್' ಮತ್ತು 'ವಿಶಿಷ್ಟ ಸೇವಾ ಮೆಡಲ್' ಸೇವಾ ಪುರಸ್ಕಾರಗಳಿಗೆ ಐ.ಅಯ್ಯಪ್ಪ ಅವರು ಪಾತ್ರರಾಗಿದ್ದಾರೆ.

ಐಚೆಟ್ಟಿರ ಕುಟುಂಬದವರಾದ ಬೋಪಯ್ಯ ಉತ್ತಯ್ಯ ಅವರು ಭಾರತೀಯ ನೌಕಾಪಡೆಯಲ್ಲಿ 'ರಿಯರ್ ಎಡ್ಮಿರಲ್' ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಭಾರತೀಯ ಭೂಸೇನೆಯಲ್ಲಿ 'ಮೇಜರ್ ಜನರಲ್' ಹುದ್ದೆಗೆ ಈ ಎರಡು ಹುದ್ದೆಗಳು ಸರಿಸಮಾನವಾಗಿದೆ. ಪ್ರಸ್ತುತ ಇವರುಗಳಲ್ಲದೆ ಭಾರತೀಯ ಭೂಸೇನೆಯಲ್ಲಿ 'ಲೆಫ್ಟಿನೆಂಟ್ ಜನರಲ್'ಗಳಾಗಿ ಕೊಡಗಿನವರಾದ ಕೋದಂಡ.ಪಿ.ಕಾರ್ಯಪ್ಪ ಚೆನ್ನೀರ ಬನ್ಸಿ ಪೊನ್ನಪ್ಪ ಕರ್ತವ್ಯ ನಿರ್ವಹಿಸುತ್ತಿರುವುದು ಹೆಮ್ಮೆಯ ವಿಚಾರವಾಗಿದೆ.

ಕುಶಾಲನಗರ ಚೆಕ್‌ಪೋಸ್ಟ್‌ಗಳಲ್ಲಿ ಹದ್ದಿನಕಣ್ಣು

5.50 ಲಕ್ಷ ರೂ. ನಗದು ವಶ, ದಾಖಲೆ ತೋರಿಸಿದ ನಂತರ ವಾಪಾಸ್



ಕುಶಾಲನಗರ, ಏ.4– ಕೊಡಗು–ಮೈಸೂರು–ಹಾಸನ ಗಡಿಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಲಾಗುತ್ತಿದ್ದು, ಕಟ್ಟೆಚ್ಚರ ವಹಿಸಲಾಗಿದೆ.

ಕೊಡಗು–ಹಾಸನ ಗಡಿ ಶಿರಂಗಾಲ ಗೇಟ್ ಬಳಿ ಒಂದು ತಪಾಸಣೆ ಕೇಂದ್ರ ಮತ್ತು ಕೊಡಗು–ಮೈಸೂರು ಗಡಿ ಕಾವೇರಿ ಸೇತುವೆ ಬಳಿ ಕೊಡಗು ಮತ್ತು ಮೈಸೂರು ಪೊಲೀಸರ ಎರಡು ತಪಾಸಣಾ ಕೇಂದ್ರಗಳಲ್ಲಿ ಪೊಲೀಸ್ ಸಿಬ್ಬಂದಿಗಳು ತಪಾಸಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ತಪಾಸಣೆ ಆರಂಭಿಸಿದ ಬಳಿಕ ಇದೇ ಪ್ರಥಮ ಬಾರಿ ಎಂಬಂತೆ ಕೊಡಗು ಪೊಲೀಸರಿಗೆ ಸಮರ್ಪಕ ದಾಖಲೆ ರಹಿತ ಹಣ ಮಂಗಳವಾರ ಪತ್ತೆಯಾಗಿದೆ.

ಕುಶಾಲನಗರ ಅರಣ್ಯ ತಪಾಸಣಾ ಗೇಟ್ ಬಳಿ ಮೈಸೂರು ಜಿಲ್ಲೆಯಿಂದ ಕೊಡಗಿಗೆ ಪ್ರವೇಶಿಸುತ್ತಿದ್ದ ವಾಹನಗಳ ತಪಾಸಣೆ ಕೇಂದ್ರದಲ್ಲಿ ತಪಾಸಣೆ ಸಂದರ್ಭ ನಾಲ್ಕು ಪ್ರತ್ಯೇಕ ಪ್ರಕರಣಗಳಲ್ಲಿ ಒಟ್ಟು 5.50 ಲಕ್ಷ ಹಣ ಪತ್ತೆಯಾಗಿದೆ. ಆ ಸಂದರ್ಭ ಸಮರ್ಪಕ ದಾಖಲಾತಿ ಇಲ್ಲದ ಕಾರಣ ತಪಾಸಣಾ ಅಧಿಕಾರಿಗಳು ಹಣ ವಶಕ್ಕೆ ಪಡೆದಿದ್ದರು. ನಂತರ ಸೂಕ್ತ ದಾಖಲಾತಿಗಳನ್ನು ಒದಗಿಸಿದ ಬಳಿಕ ಅಷ್ಟೂ ಹಣ ಸ್ಥಳದಲ್ಲಿಯೇ ವಾಪಾಸ್ ಮಾಡಲಾಯಿತು.

ಇನ್ನು ತಪಾಸಣಾ ಅಧಿಕಾರಿಗಳ ವರ್ತನೆಯನ್ನು ಕುಶಾಲನಗರ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಬಿ.ಅಮೃತ್ ರಾಜ್ ಖಂಡಿಸಿದ್ದಾರೆ. ಕೆಲವು ಅಧಿಕಾರಿಗಳು ಪ್ರಯಾಣಿಕರೊಂದಿಗೆ ಉದ್ಧಟತನದಿಂದ ವರ್ತಿಸುತ್ತಿದ್ದಾರೆ. ಸಮರ್ಪಕ ದಾಖಲೆಗಳನ್ನು ಒದಗಿಸಿದರೂ ಕೂಡ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿದರು. ಈ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದ ಅವರು, ನಿರ್ದಿಷ್ಟ ದಾಖಲೆಗಳ ಬಗ್ಗೆ ಜಿಲ್ಲಾಧಿಕಾರಿಗಳು ಸ್ಪಷ್ಟ ಪ್ರಕಟಣೆ ಹೊರಡಿಸುವಂತೆ ಆಗ್ರಹಿಸಿದರು. ತಪಾಸಣೆ ಕಾರ್ಯ ನಿಧಾನಗತಿ ಕಾರಣ ಸೇತುವೆ ಮೇಲೆ ವಾಹನಗಳ ಸರದಿ ಸಾಲು ಉಂಟಾಗುತ್ತಿರುವ ಕಾರಣ ಪ್ರಯಾಣಿಕರು, ಪ್ರವಾಸಿಗರು ವಿಳಂಬ ಕಾರ್ಯಕ್ಕೆ ಅಸಮಾಧಾನ ವ್ಯಕ್ತಪಡಿಸುತ್ತಿದ್ದ ದೃಶ್ಯ ಕಂಡುಬಂತು.

ಅಕ್ರಮ ಮದ್ಯ ವಶ: ಒಬ್ಬನ ಬಂಧನ

ಸುಂಟಿಕೊಪ್ಪ, ಏ.4– ಯಾವುದೇ ಪೂರ್ವಾನುಮತಿ ಇಲ್ಲದೇ ಅಕ್ರಮವಾಗಿ ಮದ್ಯ ಕೊಂಡ್ಯೊಯ್ಯುತ್ತಿದ್ದ ವ್ಯಕ್ತಿಯನ್ನು ಸುಂಟಿಕೊಪ್ಪ ಪೊಲೀಸರು ಮಾಲು ಸಹಿತ ಬಂಧಿಸಿದ್ದಾರೆ.

ಸುಂಟಿಕೊಪ್ಪದಿಂದ ಮೋಟಾರ್ ಬೈಕ್‌ನಲ್ಲಿ 42 ಪ್ಯಾಕೇಟ್ ಮದ್ಯವನ್ನು ಅಕ್ರಮವಾಗಿ ಹಾಲೇರಿಗೆ ಸಾಗಿಸುತ್ತಿದ್ದ ರವಿ ಎಂಬಾತನನ್ನು ಪೊಲೀಸರು ಬಂಧಿಸಿ ಮೊಕದ್ದಮೆ ದಾಖಲಿಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಚುನಾವಣೆ ಬಹಿಷ್ಕಾರಕ್ಕೆ ನಿರ್ಧಾರ

ರಾಜಕೀಯ ಪಕ್ಷಗಳ ಮುಖಂಡರ ಪ್ರವೇಶಕ್ಕೂ ಅವಕಾಶವಿಲ್ಲ



ಕುಶಾಲನಗರ, ಏ.4– ಗಂಧದ ಕೋಟೆ ಗ್ರಾಮವೊಂದರ ಬಡಾವಣೆಯ ನಿವಾಸಿಗಳು ಎರಡು ದಶಕಗಳಿಂದ ಮೂಲಸೌಕರ್ಯ ಕಲ್ಪಿಸದೆ ನಿರ್ಲಕ್ಷ್ಯ ವಹಿಸುವುದರೊಂದಿಗೆ ಗ್ರಾಮವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ ಎಂದು ಬೇಸರಗೊಂಡು ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸುವುದರೊಂದಿಗೆ ಯಾವುದೇ ರಾಜಕೀಯ ಪಕ್ಷಗಳ ಮುಖಂಡರನ್ನು ಗ್ರಾಮಕ್ಕೆ ಸೇರಿಸದಿರಲು ನಿರ್ಧರಿಸಿದ್ದಾರೆ.

ಕಳೆದ ಎರಡು ದಶಕಗಳಿಂದ ಮೂಲಭೂತ ಸೌಲಭ್ಯಗಳಾದ ರಸ್ತೆ, ಒಳಚರಂಡಿ ಹಾಗೂ ಬೀದಿ ದೀಪಗಳನ್ನು ಕಲ್ಪಿಸದೆ ಸ್ಥಳೀಯ ಸಂಸ್ಥೆ ಹಾಗೂ ಜನಪ್ರತಿನಿಧಿಗಳು ಸಂಪೂರ್ಣ ನಿರ್ಲಕ್ಷ್ಯ ತೋರಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು. ಮೈಸೂರು–ಮಡಿಕೇರಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿಯೇ ಇರುವ ಈ ಬಡಾವಣೆಗೆ ಹೋಗಿ ಬರಲು ಸೂಕ್ತ ರಸ್ತೆ ವ್ಯವಸ್ಥೆ ಇಲ್ಲ. ಈಗಿರುವ ರಸ್ತೆ ತುಂಬ ಕಿರಿದಾಗಿದ್ದು, ವಾಹನಗಳು ಓಡಾಡಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಇದೆ ಜಾಗವನ್ನು ಒತ್ತುವರಿ ಮಾಡಿಕೊಂಡು ವ್ಯಕ್ತಿಯೊಬ್ಬರು ಕಾಂಪೌಂಡ್ ನಿರ್ಮಿಸಿಕೊಂಡಿದ್ದಾರೆ ಎಂದು ನಿವಾಸಿ ಎನ್.ರವೀಂದ್ರ ಹಾಗೂ ಪುಷ್ಪಾ ದೂರಿದ್ದಾರೆ.

ನಿತ್ಯ ನರಕಯಾತನೆ ಅನುಭವಿಸುತ್ತಿರುವ ನಿವಾಸಿಗಳು ಚುನಾವಣೆ ಬಹಿಷ್ಕರಿಸಿದ್ದು, ಯಾವುದೇ ಪಕ್ಷಗಳ ನಾಯಕರು ನಮ್ಮ ಬಡಾವಣೆಗೆ ಬರಬಾರದು ಎಂದು ಬ್ಯಾನರ್ ಅಳವಡಿಸುವ ಮೂಲಕ ಎಚ್ಚರಿಕೆ ನೀಡಿದ್ದಾರೆ. ಬಡಾವಣೆಯ ನಿವಾಸಿಗಳಾದ ಚಂದ್ರೇಶ್, ನಾಗಮ್ಮ, ಲಕ್ಷ್ಮಿ, ಎಸ್.ಮಣಿ ಸೇರಿದಂತೆ ಇಪ್ಪತ್ತೈದು ಮಂದಿ ಸಹಿ ಮಾಡಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ.

ಗುಂಡಿಗಳೇ ಇಲ್ಲಿ ರಸ್ತೆ... ಜನರ ಪರದಾಟ



ಜನಪ್ರತಿನಿಧಿಗಳಿಗೆ ಹಿಡಿಶಾಪ ಹಾಕುತ್ತಿರುವ ಗ್ರಾಮಸ್ಥರು

ಚಾಮರಾಜನಗರ, ಏ.4– ತಾಲೂಕಿನ ಚಂದಕವಾಡಿ ಗ್ರಾಮದ ಮುಖ್ಯ ರಸ್ತೆಯಿಂದ ದಡದಹಳ್ಳಿ ಮಾರ್ಗವಾಗಿ ಕುಂಬೇಶ್ವರ ಮತ್ತು ಕಾಳಿಕಾಂಬ ಕಾಲೋನಿಗೆ ಹೋಗುವ ರಸ್ತೆ ತೀರಾ ಹದಗೆಟ್ಟಿದ್ದು ಕ್ಷೇತ್ರದ ಜನಪ್ರತಿನಿಧಿಗಳಿಗೆ ಜನತೆ ಶಾಪ ಹಾಕುವಂತಾಗಿದೆ.

ದಡದಹಳ್ಳಿ ಗ್ರಾಮದ ಈ ರಸ್ತೆ ಸುಮಾರು 12ಕಿ.ಮೀ ಉದ್ದವಿದ್ದು ಇದು ಅಭಿವೃದ್ಧಿ ಕಂಡು ಹತ್ತಾರು ವರ್ಷಗಳೆ ಕಳೆದಿದೆ. ಈ ರಸ್ತೆಯ ಉದ್ದಕ್ಕೂ ಗುಂಡಿಗಳು ಬಿದ್ದಿದ್ದು, ಸಂಚಾರವೇ ದುಸ್ತರವಾಗಿದೆ. ಅದರಲ್ಲೂ ಇದು ಪಕ್ಕಾ ಗ್ರಾಮೀಣ ರಸ್ತೆಯಾಗಿದ್ದು, ಬೆಳೆಗಳ ಸಾಗಾಣಿಕೆ ಹೆಚ್ಚಾಗಿದೆ, ಕಬ್ಬು ತುಂಬಿದ ಲಾರಿಗಳು ಸಂಚರಿಸುವಾಗ ನೃತ್ಯ ಮಾಡುವಂತೆ ಭಾಸವಾಗುತ್ತದೆ. ಇದರ ಪಕ್ಕದಲ್ಲಿ ಸಂಚಾರ ಮಾಡಲು ಭಯವಾಗುತ್ತದೆ.

ಸಣ್ಣ ಪ್ರಮಾಣದ ಮಳೆಯಾದರೂ ರಸ್ತೆಯೆಲ್ಲಾ ಕೆಸರುಮಯವಾಗುತ್ತದೆ. ಬಿಸಿಲಾದರೆ ಧೂಳುಮಯವಾಗುತ್ತದೆ/ ಇದರಿಂದ ತೊಂದರೆಯಾಗಿ ಹಲವಾರು ಅಪಘಾತವು ಸಂಭವಿಸಿದೆ. ಇಂತಹ ಘಟನೆಯಿಂದ ದಡದಹಳ್ಳಿ ಗ್ರಾಮದ ವ್ಯಕ್ತಿಯೊಬ್ಬ ಕಾಲು ಕಳೆದುಕೊಂಡಿದ್ದಾರೆ.

ಕ್ಷೇತ್ರದಲ್ಲಿ ಸ್ಥಳೀಯ ಶಾಸಕ ಪುಟ್ಟರಂಗಶೆಟ್ಟಿ ಮೂರು ಬಾರಿ ಶಾಸಕರಾಗಿ ಆಯ್ಕೆಯಾದರೂ ಈ ರಸ್ತೆ ಬಗ್ಗೆ ಗಮನ ಹರಿಸಿಲ್ಲ. ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಇದರ ಬಗ್ಗೆ ಚಕಾರ ಎತ್ತಿಲ್ಲ. ಸದ್ಯ ಶಾಸಕರ ಅವಧಿಯು ಮುಕ್ತಾಯವಾಗಿದೆ. ದಡದಹಳ್ಳಿ, ಮಹದೇಶ್ವರ ಕಾಲೋನಿ ಅಯ್ಯನಪುರ, ಅರಳೀಪುರ, ಕುಂಬೇಶ್ವರ ಕಾಲೋನಿ, ಕಾಳಿಕಾಂಭ ಕಾಲೋನಿ, ಹೆಬ್ಬಸೂರು ಗ್ರಾಮ ಜನರ ಸಂಚಾರಕ್ಕೆ ತುಂಬಾ ತೊಂದರೆಯಾಗಿದೆ. ಅಲ್ಲದೆ ಶಾಲಾ–ಕಾಲೇಜು ವಿದ್ಯಾರ್ಥಿಗಳು ಈ ರಸ್ತೆಯಲ್ಲಿ ಓಡಾಡಬೇಕಾಗಿದೆ. ಇನ್ನಾದರೂ ಈ ರಸ್ತೆ ಬೇಗ ಅಭಿವೃದ್ಧಿಪಡಿಸಿ ಎಂದು ಜನರು ಶಪಿಸುತ್ತಾ ಮನವಿ ಮಾಡಿದ್ದಾರೆ.

ಕೊಳ್ಳೇಗಾಲದಲ್ಲಿ ಧಾರಾಕಾರ ಮಳೆಗೆ ಗೋಡೆ ಕುಸಿತ

9 ಮಂದಿ ಪವಾಡಸದೃಶ ರೀತಿಯಲ್ಲಿ ಪಾರು



ಎರಡು ಹೀರೊ ಹೋಂಡಾ ಬೈಕ್ ಜಖಂ, ಚರಂಡಿ ತುಂಬಿ ರಸ್ತೆಗೆ ಹರಿದ ನೀರು, ಮನೆಗಳಿಗೆ ನೀರು ನುಗ್ಗಿ ಅವಾಂತರ



ಕೊಳ್ಳೇಗಾಲ, ಏ.4– ಕೊಳ್ಳೇಗಾಲ ಪಟ್ಟಣದಲ್ಲಿ ಮಂಗಳವಾರ ಮಧ್ಯರಾತ್ರಿ ಸುರಿದ ಬಿರುಗಾಳಿ ಮಳೆಗೆ ಅನೇಕ ಅನಾಹುತಗಳು ಸಂಭವಿಸಿದ್ದು, ಮನೆ ಗೋಡೆ ಕುಸಿದು 9 ಮಂದಿ ಪವಾಡ ಸದೃಶ ರೀತಿಯಲ್ಲಿ ಪ್ರಾಣಾಪಾಯದಿಂದ ಪಾರಾ ಗಿದ್ದಾರೆ. ಎರಡು ಬೈಕ್‌ಗಳು ಜಖಂ ಗೊಂಡಿದ್ದು, ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ.

2 ಬೈಕ್ ಜಖಂ, 9 ಮಂದಿ ಪಾರು: ರಾತ್ರಿ ಬಿದ್ದ ಭಾರೀ ಮಳೆಗೆ ಪಟ್ಟಣದ ಮುಡಿಗುಂಡ ಬಡಾವಣೆಯ ಮಹದೇವಮ್ಮ ಎಂಬುವರ ಮನೆ ಗೋಡೆ ಕುಸಿದು, ಎರಡು ಬೈಕ್ ಜಖಂಗೊಂಡಿದೆ.

ಮುಡಿಗುಂಡದಲ್ಲಿ ಕಂಡಾಯ ಮೆರವಣಿಗೆ ಇದ್ದುದರಿಂದ ಮಹದೇವಮ್ಮ ಅವರ ಮನೆಗೆ ಅತಿಥಿಗಳು ಆಗಮಿಸಿದ್ದು, ರಾತ್ರಿ ಮಲಗಿದ್ದಾಗ ಮನೆಗೋಡೆ ಹೊರ ಭಾಗಕ್ಕೆ ಬಿದ್ದಿದ್ದರಿಂದ ಒಳಭಾಗದಲ್ಲಿ ಮಲಗಿದ್ದ ಮಹದೇವಮ್ಮ ಸೇರಿದಂತೆ 9 ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಗೋಡೆ ಕುಸಿತದಿಂದ ಹೊರಭಾಗದಲ್ಲಿ ನಿಲ್ಲಿಸಿದ್ದ ಎರಡು ಬೈಕ್‌ಗಳು ಜಖಂಗೊಂಡಿದೆ.

ಪಟ್ಟಣದ ನಂಜಯ್ಯನಕಟ್ಟೆ ಬಡಾವಣೆಯಲ್ಲಿ ಮಳೆಯಿಂದ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತವಾಗಿದೆ. ವಿದ್ಯುತ್ ತಂತಿ ತುಂಡಾಗಿ ರಸ್ತೆಯ ಬದಿಯಲ್ಲಿ ಬಿದ್ದಿತ್ತಾದರೂ ಯಾವುದೇ ಅಪಾಯ ಸಂಭವಿಸಲಿಲ್ಲ. ಮಳೆ, ಗಾಳಿಗೆ ಮರದ ಕೊಂಬೆಯೊಂದು ಮುರಿದು ಬಿದ್ದ ಪರಿಣಾಮ ನಂಜಯ್ಯನ ಕಟ್ಟೆಯ ಸಂಗೀತರಾಜು ಅವರ ಮನೆಯ ಮೇಲ್ಭಾಗದ ಶೀಟ್ ಜಖಂಗೊಂಡಿದೆ. ಪಟ್ಟಣದ ಹಳ್ಳಿ ಬಸವೇಶ್ವರ ನಗರದ ಕೆಲ ಸಂಪರ್ಕ ಕಲ್ಪಿಸುವ ರಸ್ತೆಗಳ ಚರಂಡಿ ತುಂಬಿ ರಸ್ತೆಗೆ ಹರಿದಿದೆ. ಇದರಿಂದ ಕೆಲಕಾಲ ಸಂಚರಿಸಲು ನಾಗರಿಕರು ಭವಣೆ ಪಡುವಂತಾಯಿತು.

ನಂಜಯ್ಯನ ಕಟ್ಟೆ ಬಡಾವಣೆಗೆ ನೀರು ನುಗ್ಗಿರುವ ವಿಚಾರ ತಿಳಿಯುತ್ತಿದ್ದಂತೆ ನಗರ ಸಭೆ ಮಾಜಿ ಅಧ್ಯಕ್ಷ ಶಾಂತರಾಜು, ಅಧಿಕಾರಿ ಚೇತನ್ ಇನ್ನಿತರರು ಭೇಟಿ ನೀಡಿ ಪರಿಶೀಲಿಸಿದರಲ್ಲದೆ, ಪೌರ ಕಾರ್ಮಿಕರ ಮೂಲಕ ನೀರನ್ನು ಹೊರ ಹಾಕಿಸಿ ಕ್ರಮ ಕೈಗೊಂಡರು. ಸಂಬಂಧಪಟ್ಟ ಅಧಿಕಾರಿಗಳು ಹಾನಿ ಗೊಂಡ ಪ್ರದೇಶಗಳಿಗೆ ಭೇಟಿ ನೀಡಿ, ಸೂಕ್ತ ಪರಿಹಾರ ದೊರಕಿಸಿಕೊಡಬೇಕು ಎಂದು ನಿವಾಸಿಗಳು ಮನವಿ ಮಾಡಿದ್ದಾರೆ.

ಖಾಸಗಿ ಬಸ್ ಮೊಪೆಡ್, ಬೈಕ್‌ಗೆ ಡಿಕ್ಕಿ: ಓರ್ವ ಸಾವು





ಗುಂಡ್ಲುಪೇಟೆ, ಏ.4– ರಾಷ್ಟ್ರೀಯ ಹೆದ್ದಾರಿಯಲ್ಲಿ ವೇಗವಾಗಿ ಚಲಿಸುತ್ತಿದ್ದ ಬಸ್ ಚಾಲಕನ ನಿಯಂತ್ರಣ ತಪ್ಪಿ ಬೈಕ್ ಹಾಗೂ ಮೊಪೆಡ್‌ಗಳಿಗೆ ಡಿಕ್ಕಿ ಹೊಡೆದು ವ್ಯಕ್ತಿಯೊಬ್ಬರು ಸ್ಥಳದಲ್ಲಿಯೇ ಸಾವಿಗೀಡಾದ ಘಟನೆ ಪಟ್ಟಣದ ಹೊರವಲಯದಲ್ಲಿ ಮಂಗಳವಾರ ನಡೆದಿದೆ.

ಪಟ್ಟಣದಿಂದ ಮೈಸೂರಿನತ್ತ ವೇಗವಾಗಿ ಸಾಗುತ್ತಿದ್ದ ಖಾಸಗಿ ಬಸ್ಸು ಪಟ್ಟಣದ ಹೊರವಲಯದಲ್ಲಿರುವ ಅಸ್ಸಿಸಿ ಆಸ್ಪತ್ರೆಯ ಬಳಿ ಮೊಪೆಡ್‌ಗೆ ಡಿಕ್ಕಿ ಹೊಡೆದ ಪರಿಣಾಮ ಮಾಡ್ರಹಳ್ಳಿ ಗ್ರಾಮದ ರಾಜಣ್ಣ (50) ಎಂಬುವರು ಸ್ಥಳದಲ್ಲಿಯೇ ಸಾವಿಗೀಡಾದರು. ನಂತರ ಎದುರು ಬರುತ್ತಿದ್ದ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಕಿಲಗೆರೆ ಗ್ರಾಮದ ವೆಂಕಟಯ್ಯ (80) ಎಂಬುವರ ಕಾಲುಗಳು ಮುರಿದಿವೆ. ಘಟನೆಯಲ್ಲಿ ಆರು ಜನರಿಗೆ ಗಾಯಗಳಾಗಿದ್ದು ಎಲ್ಲಾ ಗಾಯಾಳುಗಳನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ. ತೀವ್ರ ಗಾಯಗೊಂಡ ವೆಂಕಟಯ್ಯ ಅವರನ್ನು ಮೈಸೂರಿಗೆ ಕರೆದೊಯ್ಯಲಾಗಿದ್ದು ಅವರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದುಬಂದಿದೆ.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿರುವ ಪಟ್ಟಣ ಠಾಣೆಯ ಪೊಲೀಸರು ಚಾಲಕ ಹಾಗೂ ಬಸ್ ವಶಕ್ಕೆ ಪಡೆದುಕೊಂಡರು.

ಚಾಮರಾಜನಗರ ಜಿಲ್ಲಾ ಚುನಾವಣಾ ರಾಯಭಾರಿ ಮಾದಮ್ಮ




ಚಾಮರಾಜನಗರ, ಏ.4– ಸೂಲಗಿತ್ತಿ ಮತ್ತು ಬುಡಕಟ್ಟು ವೈದ್ಯ ಪದ್ಧತಿಯನ್ನು ಉತ್ತೇಜಿಸುವ ಮೂಲಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ 92 ವರ್ಷದ ಸೋಲಿಗರ ಮಾದಮ್ಮ ಚಾಮರಾಜನಗರ ಜಿಲ್ಲೆಯ ಚುನಾವಣಾ ರಾಯಭಾರಿಯಾಗಿ ಆಯ್ಕೆಯಾಗಿದ್ದಾರೆ.

ಸೋಲಿಗ ಬುಡಕಟ್ಟು ಸಮುದಾಯದ ಮಾದಮ್ಮ ಅವರು ಇತ್ತೀಚೆಗೆ ಹನೂರು ತಾಲೂಕಿನ ಜೀರಿಗೆ ದೊಡ್ಡಿ ಗ್ರಾಮಕ್ಕೆ ವಿದ್ಯುತ್ ಪೂರೈಕೆಗಾಗಿ ಹೋರಾಟ ನಡೆಸಿ ಸುದ್ದಿಯಾಗಿದ್ದರು. ವಸತಿ ಸಚಿವ ವಿ.ಸೋಮಣ್ಣ ಅವರು ಸಂಬಂಧಪಟ್ಟ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಕೂಡಲೇ ಕಾಮಗಾರಿ ಆರಂಭಿಸುವಂತೆ ಸೂಚಿಸಿದ ಹಿನ್ನೆಲೆಯಲ್ಲಿ ಅವರ ಗ್ರಾಮಕ್ಕೆ ವಿದ್ಯುತ್ ಪೂರೈಕೆಯಾಗಿದೆ.

ಜಿಲ್ಲಾಡಳಿತವು ಅವರನ್ನು ಚುನಾವಣಾ ರಾಯಭಾರಿಯನ್ನಾಗಿ ಮಾಡುವುದರೊಂದಿಗೆ, ಶಾಲಾ ಶಿಕ್ಷಕಿ ಮತ್ತು ಪಂಚಾಯತ್ ಅಧಿಕಾರಿಗಳು ಮಾದಮ್ಮ ಅವರಿಗೆ ನಾಲ್ಕು ಗಂಟೆಗಳ ಕಾಲ ತರಬೇತಿ ನೀಡಿ ಮತದಾನದ ಮಹತ್ವ ಹಾಗೂ, ಮತದಾರರಿಗೆ ತಮ್ಮ ಹಕ್ಕು ಚಲಾಯಿಸುವಂತೆ ಮನವಿ ಮಾಡಿರುವ ವಿಡಿಯೋ ರೆಕಾರ್ಡ್ ಮಾಡಿದರು. ಮತದಾನ ನಮ್ಮ ಹಕ್ಕು, ದೇಶದ ಹಿತದೃಷ್ಟಿಯಿಂದ ಮತದಾನ ಒಳ್ಳೆಯದು ನಮ್ಮ ಅಭಿವೃದ್ಧಿಗಾಗಿ ನಾವು ಮತ ಚಲಾಯಿಸಬೇಕು ಎಂದು ವಿಡಿಯೋದಲ್ಲಿ ಮಾದಮ್ಮ ಕರೆ ನೀಡಿದ್ದಾರೆ.

ಪುಟ್ಟಮಾದಮ್ಮ ನಿಧನ



ಚಾಮರಾಜನಗರ, ಏ.4– ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರಾದ ಎ.ಎಂ. ನಾಗಮಲ್ಲಪ್ಪ ಅವರ ತಾಯಿ ಪುಟ್ಟಮಾದಮ್ಮ (90) ಮಂಗಳವಾರ ನಿಧನರಾದರು. ಮೃತರಿಗೆ ಮೂವರು ಪುತ್ರರು ಇದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಅರಕಲವಾಡಿಯಲ್ಲಿ ನೆರವೇರಲಿದೆ.

ಇಂದು ಡಾ.ಬಾಬು ಜಗಜೀವನ್ ರಾಮ್ ಜನ್ಮ ದಿನಾಚರಣೆ



ಚಾಮರಾಜನಗರ, ಏ.4– ಹಸಿರು ಕ್ರಾಂತಿಯ ಹರಿಕಾರ, ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಅವರ 116ನೇ ಜನ್ಮ ದಿನಾಚರಣೆಯನ್ನು ಏ.5 ರಂದು ಬೆಳಗ್ಗೆ 11 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಜೆ.ಹೆಚ್. ಪಟೇಲ್ ಸಭಾಂಗಣದಲ್ಲಿ ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸರಳವಾಗಿ ಆಚರಿಸಲಾಗುವುದು.

ಕಾರ್ಯಕ್ರಮಕ್ಕೆ ಜಿಲ್ಲೆಯ ವಿವಿಧ ಸಂಘಟನೆಗಳ ಮುಖಂಡರು, ಸಾರ್ವಜನಿಕರು, ಅಧಿಕಾರಿಗಳು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಮಲ್ಲಿಕಾರ್ಜುನ್ ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಬಿತ್ತನೆ ಬೀಜಕ್ಕಾಗಿ ಬೀದಿಗಿಳಿದು ರಸ್ತೆ ತಡೆ ನಡೆಸಿದ ರೈತರು

ಪೊಲೀಸರೊಂದಿಗೆ ವಾಗ್ವಾದ, ಧಿಕ್ಕಾರಗಳ ಸುರಿಮಳೆ



ಬೇಗೂರು, ಏ.4– ಗ್ರಾಮದ ಬಿತ್ತನೆ ಬೀಜ ಮಾರಾಟ ಮಳಿಗೆ ಬಾಗಿಲು ತೆಗೆಯದ ಕಾರಣ ದಿಢೀರ್ ರಸ್ತೆ ತಡೆ ನಡೆಸಿದ ರೈತರು, ಪೊಲೀಸರ ಜೊತೆ ಕೆಲ ಕಾಲ ಮಾತಿನ ಚಕಮಕಿ ನಡೆಸಿ ಧಿಕ್ಕಾರ ಕೂಗಿದ ಘಟನೆ ಇಂದು ಸಂಭವಿಸಿದೆ.

ಬಿತ್ತನೆ ಬೀಜ ಖರೀದಿಸಲು ಆಗಮಿಸಿದ ರೈತರು ಅಂಗಡಿ ಬಾಗಿಲು ತೆರೆಯದಿದ್ದನ್ನು ಕಂಡು ದೂರವಾಣಿ ಮೂಲಕ ಮಾಲೀಕನನ್ನು ಸಂಪರ್ಕಿಸಿದಾಗ ಹೆಚ್ಚು ದಾಸ್ತಾನು ಇಲ್ಲ ಮತ್ತು ಅಂಗಡಿಯ ಬಳಿ ಹೆಚ್ಚು ಜನರಿರುವ ಕಾರಣ ಹತ್ತಿ ಬಿತ್ತನೆ ಬೀಜ ಮಾರಾಟ ಮಾಡಲು ಮುಂದಾದರೆ ಎಲ್ಲರಿಗೂ ಪೂರೈಸಲು ಆಗುವು ದಿಲ್ಲ ಹಾಗೂ ಅಂಗಡಿಯ ಮುಂದೆ ಗಲಾಟೆಯಾಗುತ್ತದೆ ಎಂದು ಬಾಗಿಲು ತೆರೆಯುವುದಿಲ್ಲ ಎಂದಿದ್ದಾರೆ.

ಇದನ್ನು ಕೇಳಿ ಸರದಿ ಸಾಲಿನಲ್ಲಿ ಮಳೆಯನ್ನು ಲೆಕ್ಕಿಸದೆ ನಿಂತಿದ್ದ ಸುಮಾರು ಸಾವಿರಕ್ಕೂ ಹೆಚ್ಚು ರೈತರು ದಿಢೀರ್ ರಸ್ತೆ ತಡೆ ನಡೆಸಿದರು. ಸುಮಾರು 15 ನಿಮಿಷಗಳಿಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದ್ದು, ವಾಹನಗಳು ಸಾಲುಗಟ್ಟಿ ನಿಂತಿದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿ ಪಿಐಎಸ್ ಜಗದೀಶ ದೂಳಶೆಟ್ಟಿ ಪ್ರತಿಭಟನಾಕಾರರ ಮನವೊಲಿಸಲು ಮುಂದಾಗಿದ್ದಾರೆ. ಈ ಸಂದರ್ಭ ಪೊಲೀಸರ ನಡುವೆ ಕೆಲಕಾಲ ಮಾತಿನ ಚಕಮಕಿ ನಡೆದು ಧಿಕ್ಕಾರ ಕೂಗಿ ರಸ್ತೆಯಲ್ಲೆ ಪ್ರತಿಭಟನಾ ಧರಣಿ ನಡೆಸಲು ಮುಂದಾದರು.

ಇನ್ನೆರಡು ದಿನಗಳಲ್ಲಿ ಹತ್ತಿ ಬಿತ್ತನೆ ಬೀಜ ದಾಸ್ತಾನು ಬರಲಿದ್ದು, ನಂತರ ಹತ್ತಿ ಬೀಜ ವಿತರಿಸಲಾಗುತ್ತದೆ ಎಂದು ಪೊಲೀಸರು ಮನವಿ ಮಾಡಿದ ನಂತರ ರಸ್ತೆಯಲ್ಲಿದ್ದ ರೈತರು ಮಾರಾಟ ಮಳಿಗೆಯತ್ತ ಧಾವಿಸಿದರು. ಚಾಮರಾಜನಗರ ಜಿಲ್ಲೆಯಲ್ಲಿ ಮಳೆ ಪ್ರಾರಂಭವಾಗಿದ್ದು, ಕೃಷಿ ಚಟುವಟಿಕೆಗೆ ಚಾಲನೆ ದೊರೆಯಲಿದೆ. ಹೋಬಳಿ ಯಾದ್ಯಂತ ಮೂರ್‍ನಾಲ್ಕು ದಿನಗಳಿಂದ ಮಳೆ ಸುರಿಯುತ್ತಿದ್ದು, ಈಗಾಗಲೇ ಬಿತ್ತನೆಗಾಗಿ ಕೃಷಿ ಭೂಮಿಯನ್ನು ಹದ ಗೊಳಿಸಿಕೊಂಡಿದ್ದಾರೆ ಮತ್ತು ಹತ್ತಿ ಬಿತ್ತನೆ ಮಾಡಲು ಮುಂದಾಗಿದ್ದಾರೆ.

ಕೃಷಿ ಇಲಾಖೆಯಿಂದ ರೈತರಿಗೆ ಬೇಕಾದಷ್ಟು ಬಿತ್ತನೆ ಬೀಜ ದಾಸ್ತಾನು ಇಲ್ಲದ ಕಾರಣ ಅಧಿಕಾರಿಗಳ ನಿರ್ಲಕ್ಷದಿಂದ ಬಿತ್ತನೆ ಬೀಜ ಮಾರಾಟ ಮಳಿಗೆ ರೈತರು ಅಲೆಯುವಂತಾಗಿದೆ ಹಾಗೂ ಈಗಾಗಲೇ ಹತ್ತಿ ಬೀಜದ ದಾಸ್ತಾನು ಇಲ್ಲದ ಕಾರಣ ಪರ್ಯಾಯ ಬೆಳೆಯಾದ ಸೂರ್ಯಕಾಂತಿ, ಹಸಿ ಕಡಲೆ ಸೇರಿದಂತೆ ಮತ್ತಿತರ ಬೆಳೆಗಳ ಬಿತ್ತನೆ ಬೀಜವನ್ನು ವಿತರಣೆ ಮಾಡಲು ಮುಂದಾಗಬೇಕು ಎಂದು ರೈತರು ಆಗ್ರಹಿಸಿದರು.

ಒಂದನೇ ಪುಟದಿಂದ

ಹೆಸರು ಬಿಟ್ಟು ಹೋಗದಂತೆ ಎಚ್ಚರ ವಹಿಸಿ

ಡಾ.ರಾಜೇಂದ್ರ ಅವರು ಸಲಹೆ ನೀಡಿದರು. ಸೂಕ್ಷ್ಮ, ಅತಿ ಸೂಕ್ಷ್ಮ ಮತಗಟ್ಟೆಗಳಲ್ಲಿ ಅತೀ ಎಚ್ಚರಿಕೆ ಯಿಂದ ಕೆಲಸ ಮಾಡಿ, ಮತದಾರರು ನಿರ್ಭೀತಿಯಿಂದ ಮತ ಚಲಾಯಿಸಲು ಅನುಕೂಲ ಕಲ್ಪಿಸಬೇಕು. ಮತಗಟ್ಟೆ ಗಳಲ್ಲಿ ಮೂಲ ಸೌಲಭ್ಯ ಒದಗಿಸಲಾಗಿದೆಯೇ ಎಂಬು ದನ್ನು ದೃಢಪಡಿಸಿಕೊಂಡು ಸಮಸ್ಯೆ ಎದುರಾದರೆ ತಡ ಮಾಡದೇ ಬಗೆಹರಿಸಬೇಕೆಂದೂ ತಾಕೀತು ಮಾಡಿದರು. ಸೆಕ್ಟರಲ್ ಅಧಿಕಾರಿಗಳು ಚುನಾವಣಾ ಕರ್ತವ್ಯವನ್ನು ಜವಾಬ್ದಾರಿಯಿಂದ ನಿರ್ವಹಿಸಿ ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ನಂಜನಗೂಡು ಮತ್ತು ವರುಣಾ ಕ್ಷೇತ್ರಗಳ ಫ್ಲೈಯಿಂಗ್ ಸ್ಕ್ವಾಡ್ ಮತ್ತು ಸ್ಟಾಟಿಕ್ ಸರ್ವೆಲನ್ಸ್ ತಂಡದ ಅಧಿಕಾರಿ ಗಳು ಎಚ್ಚರದಿಂದ ಕಾರ್ಯನಿರ್ವಹಿಸಿ ಚುನಾವಣಾ ಅಕ್ರಮ ಗಳು ನಡೆಯದಂತೆ ತಡೆಯಬೇಕು ಎಂದು ತಿಳಿಸಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಧಿಕಾರಿ ಕೆ.ಎಂ.ಗಾಯಿತ್ರಿ, ಪ್ರಾಚ್ಯ ವಸ್ತು ಸಂಗ್ರಹಾಲಯ ಗಳ ಆಯುಕ್ತ ದೇವರಾಜ್, ಎರಡೂ ಕ್ಷೇತ್ರಗಳ ಚುನಾ ವಣಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ನಗದು ವಹಿವಾಟಿನ ಮೇಲೆ ನಿಗಾ ವಹಿಸಿ: ಸಿಇಓ

ಹಣ ಡ್ರಾ, ಜಮೆ ಮಾಡುವುದು, ಆರ್‌ಟಿಜಿಎಸ್, ಆನ್‌ಲೈನ್ ಪೇಮೆಂಟ್ ಗಳಾಗುತ್ತಿದ್ದಲ್ಲಿ ತಕ್ಷಣ ತಮಗೆ ಮಾಹಿತಿ ನೀಡಬೇಕು, ಅಧಿಕ ಹಣ ಡ್ರಾ ಮಾಡುವುದು, ಖಾತೆಗಳಿಗೆ ಜಮೆ ಮಾಡುವಾಗ ಅಗತ್ಯ ಮಾಹಿತಿ, ಪೂರಕ ದಾಖಲೆಗಳನ್ನು ಪಡೆಯಬೇಕು ಎಂದು ಅವರು ತಿಳಿಸಿದರು. ಸರ್ಕಾರಿ ಯೋಜನೆಗಳಲ್ಲಿ ಸಬ್ಸಿಡಿ ಸಾಲ ಮಂಜೂ ರಾತಿ ವಿಷಯದಲ್ಲಿ ನೀತಿ ಸಂಹಿತೆ ಜಾರಿಯಲ್ಲಿರುವು ದರಿಂದ ಎಚ್ಚರ ವಹಿಸಬೇಕು. ಚುನಾವಣಾ ಆಯೋಗದ ಪೂರ್ವಾನುಮತಿ ಪಡೆಯಬೇಕು ಎಂದು ಗಾಯತ್ರಿ ಸೂಚನೆ ನೀಡಿದರು. ಲೀಡ್ ಬ್ಯಾಂಕ್ ಮ್ಯಾನೇಜರ್, ಮುಖ್ಯ ಲೆಕ್ಕಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಮೈತ್ರಿಗೆ ಕುಮಾರಸ್ವಾಮಿ ಸಿದ್ಧರಿಲ್ಲ

ಜಾರಿಗೆ ತರುವ ಗುರಿಯೊಂದಿಗೆ ಕೆಲಸ ಮಾಡುತ್ತಿದ್ದಾರೆ ಎಂದರು. ಇದೇ ವೇಳೆ ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿ.ವೈ.ವಿಜಯೇಂದ್ರ ಸ್ಪರ್ಧಿಗಿಳಿಯದ ವಿಚಾರವಾಗಿ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ವಿರುದ್ಧ ವಿಜಯೇಂದ್ರ ಸ್ಪರ್ಧಿಸುವುದಿಲ್ಲ ಎಂದು ಯಡಿಯೂರಪ್ಪನವರು ಬಹಿರಂಗವಾಗಿ ಹೇಳಿದ್ದಾರೆ. ಹಾಗಾಗಿ ಇದನ್ನು ನೀವೇ ಅರ್ಥೈಸಿಕೊಳ್ಳಿ ಎಂದು ಮಾರ್ಮಿಕವಾಗಿ ನುಡಿದರು.

ವಾಗ್ದಾಳಿ ನಡೆಸಿಲ್ಲ: ನಾನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅಥವಾ ಸೋನಿಯಾ ಗಾಂಧಿ ವಿರುದ್ಧ ವಾಗ್ದಾಳಿ ಮಾಡಿಲ್ಲ. ಹಾಗೆಯೇ ಕಳೆದ 10 ವರ್ಷಗಳಿಂದ ಪ್ರಧಾನ ಮಂತ್ರಿ ವಿರುದ್ಧವೂ ದಾಳಿ ನಡೆಸಿಲ್ಲ. ಚುನಾವಣೆ ವಿಚಾರವಾಗಿ ಪ್ರಧಾನಿ ಅವರಿಗಾ ಗಲೀ ಅಥವಾ ನನಗಾಗಲೀ ಮುಜುಗರ ಉಂಟಾಗುವ ಪರಿಸ್ಥಿತಿ ಉಂಟಾಗಬಾರದು. ಎರಡು ರಾಷ್ಟ್ರೀಯ ಪಕ್ಷಗಳು ಮತ್ತು ಒಂದು ಪ್ರಾದೇಶಿಕ ಪಕ್ಷ ಚುನಾವಣಾ ಕಣದಲ್ಲಿ ಹೋರಾಡುತ್ತಿವೆ. ಫಲಿತಾಂಶವನ್ನು ಈಗಾಗಲೇ ನಿರ್ಧರಿಸುವುದು ಕಠಿಣ ಎಂದು ತಿಳಿಸಿದರು.

ಬಹಳ ಜನರು ನಾವೇ ಬಹುಮತ ಪಡೆಯುತ್ತೇವೆ ಎಂದು ಹೇಳಿಕೊಳ್ಳುತ್ತಿದ್ದಾರೆ. ಕೆಲವರು ಅತಂತ್ರ ವಿಧಾನಸಭಾ ನಿರ್ಮಾಣವಾಗಲಿದೆ ಎನ್ನುತ್ತಿದ್ದಾರೆ. ಇದೇ ವೇಳೆ ಮಾಜಿ ಮುಖ್ಯಮಂತ್ರಿಗಳ ಕುರಿತ ಸಮೀಕ್ಷೆಗಳಲ್ಲಿ ಹೆಚ್.ಡಿ.ಕುಮಾರಸ್ವಾಮಿ ಮೊದಲ ಸ್ಥಾನದಲ್ಲಿದ್ದಾರೆ. ಹಾಗೆ ಕುಮಾರಸ್ವಾಮಿ 123 ಸ್ಥಾನಗಳ ಪಡೆಯುವ ನಿಟ್ಟಿನಲ್ಲಿ ಹಗಲು ರಾತ್ರಿ ಶ್ರಮಿಸುತ್ತಿದ್ದಾರೆ. ಮುಖ್ಯಮಂತ್ರಿ ಆಗುವ ಸಲುವಾಗಿ ಕುಮಾರಸ್ವಾಮಿ ಈ ಹೋರಾಟ ಮಾಡುತ್ತಿಲ್ಲ. ತಾವು ಘೋಷಿಸುವ ಯೋಜನೆಗಳ ಅನುಷ್ಠಾನಕ್ಕಾಗಿ ಜೆಡಿಎಸ್ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡುವಂತೆ ರಾಜ್ಯದ ಜನರನ್ನು ಕೇಳುತ್ತಿದ್ದಾರೆ ಎಂದು ದೇವೇಗೌಡರು ಹೇಳಿದರು. ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶಗಳಲ್ಲಿ ಪ್ರಾದೇಶಿಕ ಪಕ್ಷಗಳಿಗೆ ಅಲ್ಲಿನ ಜನ ಬೆಂಬಲ ನೀಡಿದ್ದಾರೆ. ಆದರೆ ಕರ್ನಾಟಕದಲ್ಲಿ ಇರುವುದು ಜೆಡಿಎಸ್ ಒಂದೇ ಪ್ರಾದೇಶಿಕ ಪಕ್ಷ. ಇದಕ್ಕೆ ನಮ್ಮ ಜನವೇಕೆ ಬೆಂಬಲಿಸುತ್ತಿಲ್ಲವೋ ಗೊತ್ತಿಲ್ಲ ಎಂದರಲ್ಲದೆ ಕುಟುಂಬ ರಾಜಕಾರಣ ಪ್ರಸ್ತಾಪಿಸಿ, ತಮಿಳ್ನಾಡಿನಲ್ಲಿ ದಿವಂಗತ ಕರುಣಾನಿಧಿ ಕುಟುಂಬದ ಎಂಟು ಮಂದಿ ನಾನಾ ಅಧಿಕಾರ ಸ್ಥಾನದಲ್ಲಿದ್ದಾರೆ. ಇದರ ಬಗ್ಗೆ ಯಾರೂ ಚಕಾರ ಎತ್ತಲ್ಲ. ಅವರಿಗೆಲ್ಲಾ ಕಾಣುವುದು ದೇವೇಗೌಡರ ಕುಟುಂಬ ಮಾತ್ರ ಎಂದು ಬೇಸರಿಸಿದರು.

ವರುಣಾದಲ್ಲಿ ಸಿದ್ದು ವಿರುದ್ಧ ಸೋಮಣ್ಣ?

ಕಾರಣ 2020ರ ಏಪ್ರಿಲ್‌ನಲ್ಲಿ ಅವರನ್ನು ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿ ಸ್ಥಳಾಂತರಿಸಲಾಗಿತ್ತು. ಸೋಮಣ್ಣ ಅಲ್ಲಿ ಪಕ್ಷ ಸಂಘಟನೆ ಜೊತೆಗೆ ವೈಯಕ್ತಿಕ ಪ್ರಾಬಲ್ಯವನ್ನೂ ಹೆಚ್ಚಿಸಿಕೊಂಡರು. ನಾಲ್ಕು ದಶಕಗಳ ರಾಜಕೀಯ ಅನುಭವವಿರುವ ಸೋಮಣ್ಣ, ವರುಣಾ ಕ್ಷೇತ್ರದ ಬಗ್ಗೆಯೂ ಚೆನ್ನಾಗಿ ಅರಿತಿದ್ದಾರೆ. ಅಲ್ಲಿ ವೀರಶೈವ ಲಿಂಗಾಯತ ಸಮುದಾಯದವರು ಹೆಚ್ಚಿರುವ ಕಾರಣ ಜಾತಿ ಸಮೀಕರಣದಲ್ಲಿ ಪರಿಣಿತರಾಗಿರುವ ಸೋಮಣ್ಣನವರು ಸಿದ್ದರಾಮಯ್ಯನವರಿಗೆ ಪ್ರಬಲ ಪೈಪೋಟಿ ನೀಡಬಲ್ಲರು ಎನ್ನುವ ಲೆಕ್ಕಾಚಾರ ಬಿಜೆಪಿ ಕೇಂದ್ರ ನಾಯಕರಲ್ಲಿದೆ. ಸಮರ್ಪಕವಾಗಿ ಕೆಲಸ ಮಾಡುವ ಮೂಲಕ ಸಿದ್ದರಾಮಯ್ಯನವರನ್ನು ಮಣಿಸಲು ರಣತಂತ್ರ ರೂಪಿಸಿಕೊಂಡಿದ್ದಾರೆ ಎನ್ನಲಾಗಿದೆ. ವರುಣಾದಲ್ಲಿ 2008 ಮತ್ತು 2013ರಲ್ಲಿ ಎರಡು ಬಾರಿ ಸಿದ್ದರಾಮಯ್ಯ ಭರ್ಜರಿ ಜಯ ಗಳಿಸಿದ್ದರೆ, 2018ರಲ್ಲಿ ಅವರ ಪುತ್ರ ಡಾ.ಯತೀಂದ್ರ ಆಯ್ಕೆಯಾಗಿದ್ದಾರೆ. ಹಾಗಾಗಿ ವರುಣಾ, ಕಾಂಗ್ರೆಸ್ ಭದ್ರಕೋಟೆ ಎನಿಸಿದೆ. ಸೋಮಣ್ಣ ಪ್ರಸ್ತುತ ಬೆಂಗಳೂರಿನ ಗೋವಿಂದರಾಜನಗರ ಕ್ಷೇತ್ರ ಪ್ರತಿನಿಧಿಸುತ್ತಿದ್ದು, ಬಿಜೆಪಿ ಹೈಮಾಂಡ್ ಲೆಕ್ಕಾಚಾರದಂತೆ ವರುಣಾ ಅಖಾಡಕ್ಕೆ ಇಳಿಯುತ್ತಾರಾ ಅಥವಾ ಈಗಿರುವ ಕ್ಷೇತ್ರದಲ್ಲೇ ಸ್ಪರ್ಧಿಸಲಿದ್ದಾರಾ ಎಂದು ಕಾದು ನೋಡಬೇಕಿದೆ. ಈ ಬಗ್ಗೆ ಸೋಮಣ್ಣ ಸ್ಪಷ್ಟನೆಗೆ ಪ್ರಯತ್ನಿಸಲಾಯಿತಾದರೂ ಅವರ ಸಂಪರ್ಕ ಸಾಧ್ಯವಾಗಲಿಲ್ಲ.

2018ರ ಚುನಾವಣೆಯಲ್ಲಿ ಬಿ.ವೈ.ವಿಜಯೇಂದ್ರ ವರುಣಾ ಕ್ಷೇತ್ರದಲ್ಲಿ ಮನೆ ಮಾಡಿ, 20ಕ್ಕೂ ಹೆಚ್ಚು ದಿನಗಳ ಕಾಲ ಭಾರೀ ಪ್ರಚಾರ ನಡೆಸಿದ್ದರು. ಆದರೆ ಅಂತಿಮ ಕ್ಷಣದಲ್ಲಿ ವಿಜಯೇಂದ್ರ ಅವರಿಗೆ ಅವಕಾಶ ಸಿಗಲಿಲ್ಲ. ಆಗ ಡಾ.ಯತೀಂದ್ರ ವಿರುದ್ಧ ಬಿಜೆಪಿಯಿಂದ ಟಿ.ಬಸವರಾಜ್ ಅವರನ್ನು ಕಣಕ್ಕಿಳಿಸಲಾಗಿತ್ತು.

ಹಾಸನ ಅಭ್ಯರ್ಥಿ ಹೆಸರು ಇರಲಿದೆ

ವಿಳಂಬ ಆಗುತ್ತಿದೆಯಾ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಅದರ ಬಗ್ಗೆ ನಾನು ಚಿಂತೆ ಮಾಡಿಲ್ಲ. ನಾವು ನಮ್ಮದೇ ರೀತಿಯಲ್ಲಿ ಅಭ್ಯರ್ಥಿಗಳನ್ನು ತೀರ್ಮಾನ ಮಾಡುತ್ತೇವೆ ಎಂದರು. ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗುವುದಿಲ್ಲ ಎಂದು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಸಂದರ್ಶನ ಒಂದರಲ್ಲಿ ನೀಡಿರುವ ಹೇಳಿಕೆ ಕುರಿತು ಮಾತನಾಡಿದ ಹೆಚ್‌ಡಿಕೆ, ಅದು ಅವರ ಪಕ್ಷಕ್ಕೆ ಸೇರಿದ ವಿಚಾರ. ಅವರ ಆಂತರಿಕ ವಿಚಾರಗಳ ಬಗ್ಗೆ ನಾನೇಕೆ ಪ್ರತಿಕ್ರಿಯೆ ನೀಡಲಿ? ಚುನಾವಣೆಯಲ್ಲಿ ಜನ ಯಾವ ಪಕ್ಷಕ್ಕೆ ಎಷ್ಟು ಸ್ಥಾನ ಕೊಡ್ತಾರೋ ಅದು ಮುಖ್ಯ. ಎಷ್ಟು ಸ್ಥಾನ ಬಂತು ಎನ್ನುವುದರ ಮೇಲೆ ಎಲ್ಲಾ ನಿರ್ಧಾರ ಆಗುತ್ತದೆ. ಮಗು ಹುಟ್ಟೋಕು ಮುನ್ನ ಕುಲಾವಿ ಹೊಲಿಸಿದರೆ ಆಗುತ್ತಾ? ಮುಗು ಹುಟ್ಟಿದರೆ ಕುಲಾವಿ ಹೊಲಿಸಬಹುದು. ಅದಕ್ಕೂ ಮುನ್ನ ಕುಲಾವಿ ಹಾಕ್ಕೊತ್ತೀನಿ ಅಂದ್ರೆ ಯಾಕೆ ಬೇಡ ಎನ್ನಲಿ ಎಂದರು.

ಜೆಡಿಎಸ್ ಕುರಿತು ಅನಗತ್ಯ ಹೇಳಿಕೆ ನೀಡಿರುವ ಸಚಿವ ಡಾ.ಕೆ. ಸುಧಾಕರ್ ಹೇಳಿಕೆ ವಿಚಾರದ ಬಗ್ಗೆ ಕಿಡಿಕಾರಿದ ಮಾಜಿ ಮುಖ್ಯಮಂತ್ರಿ, ಹೆಚ್ಚು ಕಡಿಮೆ ಆಗಿ ಅವರು ರಾಜಿನಾಮೆ ಕೊಡಬೇಕಾದ ಸಂದರ್ಭ ಬಂದುಬಿಟ್ಟಾಯಿತು. ಆಮೇಲೆ ಶಾಸಕನಾಗೋಕೆ ಆಗಲ್ವಲ್ಲಾ ಅವರು ಮಾಡಿದ ಅನಾಚಾರ ಜನರಿಗೆ ಗೊತ್ತಿದೆ. ರೆಫ್ರಿಜರೇಟರ್, ಸ್ಟವ್ ಎಲ್ಲಾ ಹಂಚುತ್ತಿದ್ದಾರೆ. ಇಷ್ಟೆಲ್ಲಾ ಕೊಡ್ತಾ ಇದ್ದಾರೆ ಅಂದರೆ, ಇವರು ಇನ್ನೆಷ್ಟು ಶ್ರೀಮಂತರು ಅಂತ ಜನರು ಮನೇಲಿ ಕೂರಿಸಿಬಿಟ್ಟರೆ ಕಷ್ಟ, ಎಚ್ಚರಿಕೆಯಿಂದ ಇದ್ದರೆ ಉತ್ತಮ ಎಂದು ಟಾಂಗ್ ಕೊಟ್ಟರು.

ಜೆಡಿಎಸ್ 120 ಸ್ಥಾನ ಗೆದ್ದರೆ ರಾಜಕೀಯವಾಗಿ ನಿವೃತ್ತಿ

ಗೆಲುವು ಸಾಧಿಸಿದ್ದೇ ಆದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂಬ ಸಚಿವ ಡಾ.ಕೆ.ಸುಧಾಕರ್ ಹೇಳಿಕೆಗೆ ಬೆಂಗಳೂರಿನಲ್ಲಿ ತಿರುಗೇಟು ನೀಡಿದ ಅವರು, ಸುಧಾಕರ್ ಅವರ ಹಣದ ದಾಹ ಪ್ರತಿ ಹಳ್ಳಿಗೂ ಗೊತ್ತಿದೆ. ಜನರಿಗೆ ಟಿವಿ, ರೆಫ್ರಿಜರೇಟರ್, ಸ್ಟೌವ್ ಎಲ್ಲವನ್ನೂ ಕೊಟ್ಟಿದ್ದಾರೆ ಪಾಪ. ಆರೋಗ್ಯ ಸಚಿವರು ಸಂಪತ್ಭರಿತರಾಗಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ. ಇವರು (ಸುಧಾಕರ್) ಇಷ್ಟೆಲ್ಲ ಮಾಡಿದ್ದಾರಲ್ಲ ಎಂಬುದಾಗಿ ಜನರು ಈ ಬಾರಿ ಮನೆಯಲ್ಲೇ ಕುಳಿತುಕೊಳ್ಳುವಂತೆ ಮಾಡಿದರೆ ಆಗ ರಾಜೀನಾಮೆ ಕೊಡುವ ಪ್ರಶ್ನೆಯೇ ಬರುವುದಿಲ್ಲವಲ್ಲಾ ಆ ರೀತಿ ಆದರೆ ಅವರು ಏನು ಮಾಡುತ್ತಾರೆ, ಸ್ವಲ್ಪ ಎಚ್ಚರಿಕೆಯಿಂದ ಇದ್ದರೆ ಒಳ್ಳೆಯದು ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ.

651 ಅಗತ್ಯ ಔಷಧಿ ದರ ಕಡಿತ

ಸೂಚ್ಯಂಕ(ಡಬ್ಲ್ಯುಪಿಐ) ಆಧಾರದ ಮೇಲೆ ಔಷಧಿಗಳ ದರಗಳಲ್ಲಿ ವಾರ್ಷಿಕ ಶೇ.12.12ರಷ್ಟು ಹೆಚ್ಚಳವಾಗಬೇಕಿತ್ತು. ಆದರೆ ಈ ಕ್ರಮದಿಂದಾಗಿ ಗ್ರಾಹಕರಿಗೆ ಲಾಭವಾಗಲಿದೆ ಎಂದು ಎನ್‌ಪಿಪಿಎ ಹೇಳಿದೆ. ಎನ್‌ಸಿಪಿಎ, ಕಳೆದ ಮಾರ್ಚ್ 25ರಂದು ಪ್ರಕಟಣೆ ಬಿಡುಗಡೆ ಮಾಡಿ '2022ಕ್ಕೆ ಸಂಬಂಧಿಸಿ ಸಗಟು ದರ ಸೂಚ್ಯಂಕ (ಡಬ್ಲ್ಯುಪಿಐ) ಶೇ 12.12ರಷ್ಟಿತ್ತು' ಎಂದು ತಿಳಿಸಿತ್ತು. ಅಗತ್ಯ ಔಷಧಿಗಳ ದರದ ವಿಚಾರವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿದ್ದರು. ಜನರ ಕಿಸೆಗಳನ್ನು ಲೂಟಿ ಮಾಡಲು ಪ್ರಧಾನಿ ನರೇಂದ್ರ ಮೋದಿ ಅವರು ಸುಪಾರಿ(ಗುತ್ತಿಗೆ) ಪಡೆದಿದ್ದಾರೆ ಎಂದು ಟೀಕಿಸಿದ್ದರು. ಇದಕ್ಕೆ ಸರಣಿ ಟ್ವೀಟ್ ಮೂಲಕ ತಿರುಗೇಟು ನೀಡಿರುವ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯ, ಎನ್‌ಎಲ್‌ಇಎಂ ಪಟ್ಟಿಯಲ್ಲಿರುವ 651 ಅಗತ್ಯ ಔಷಧಿಗಳು ಅಗ್ಗವಾಗಿದ್ದು, ಈ ಸಂಬಂಧ ಅಧಿಸೂಚನೆಯನ್ನೂ ಸಹ ಹೊರಡಿಸಲಾಗಿದೆ. ಇದರಿಂದ ಗ್ರಾಹಕರ ಜೇಬಿಗೆ ಹೊರೆ ಕಡಿಮೆಯಾಗಿ, ವಾರ್ಷಿಕ ಅಂದಾಜು 3,500 ಕೋಟಿ ರೂ. ಉಳಿತಾಯವಾಗಲಿದೆ' ಎಂದೂ ತಿರುಗೇಟು ನೀಡಿದ್ದಾರೆ.

ಮೈಸೂರಲ್ಲಿ ಶ್ರದ್ಧಾಭಕ್ತಿಯ ಮಹಾವೀರ ಜಯಂತಿ

ಮಹಾಪುರುಷರ ಸಂದೇಶ ಸಾರುವ ಅಹಿಂಸಾ ಮೆರವಣಿಗೆಯಲ್ಲಿ ಜೈನ ಸಮುದಾಯದ ಸಾವಿರಾರು ಮಂದಿ ಭಾಗಿ





ಮೈಸೂರು,ಏ.4(ಎಂಟಿವೈ)– ಮೈಸೂರಲ್ಲಿ ಮಹಾವೀರರ ಜನ್ಮ ಜಯಂತಿಯನ್ನು ಮಂಗಳವಾರ ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು. ಜೈನ ಸಂಘದ ವತಿಯಿಂದ ಆಯೋಜಿಸಿದ್ದ ಅಹಿಂಸಾ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯ ವಿವಿಧ ಜೈನ ಮಂಡಲ್‌ಗಳ ಸದಸ್ಯರು ಪಾಲ್ಗೊಂಡು ಮಹಾವೀರರ ಸ್ಮರಣೆ ಮಾಡಿದರು.

ಮೈಸೂರಿನ ಅಶೋಕ ರಸ್ತೆಯಲ್ಲಿರುವ ಸೇಂಟ್ ಫಿಲೋಮಿನಾ ಚರ್ಚ್ ಬಳಿಯಿಂದ ಆರಂಭವಾದ ಅಹಿಂಸಾ ಮೆರವಣಿಗೆ ದೊಡ್ಡಗಡಿಯಾರ ವೃತ್ತ, ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದ ಮೂಲಕ ಹಾರ್ಡಿಂಗ್ ವೃತ್ತಕ್ಕೆ ಸಾಗಿ, ಬಿ.ಎನ್.ರಸ್ತೆ ಮೂಲಕ ದಸರಾ ವಸ್ತು ಪ್ರದರ್ಶನ ಆವರಣ ತಲುಪಿತು.

ಮೆರವಣಿಗೆಯಲ್ಲಿ ಜೈನ ತೀರ್ಥಂಕರರ ವೇಷ ಧರಿಸಿದ್ದ ಮಕ್ಕಳು ತೆರೆದ ವಾಹನದಲ್ಲಿ ಸಾಗಿದರೆ, ಮಹಾವೀರರ ಪುತ್ಥಳಿಯನ್ನು ರಥದಲ್ಲಿ ಕೊಂಡೊಯ್ಯಲಾಯಿತು. ಈ ವೇಳೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಯುವ ತಂಡ ಹಾಗೂ ಮಹಿಳಾ ಮಂಡಲಗಳ ಸದಸ್ಯರು ಭಜನೆಯೊಂದಿಗೆ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು. ಮೆರವಣಿಗೆಯಲ್ಲಿ ಜೈನ ಸನ್ಯಾಸಿಗಳು ಸಾಗಿ ಮಹಾವೀರರ ಜಯಂತಿ ಮಹೋತ್ಸವದ ಭಕ್ತಿ ಇಮ್ಮಡಿಗೊಳಿಸಿದರು.

ಮೆರವಣಿಗೆಯ ಮಾರ್ಗದುದ್ದಕ್ಕೂ ಜೈನ ಸಂಘದ ಪದಾಧಿಕಾರಿಗಳು ಹಾಲು, ನೀರು, ಪಾನೀಯ ಹಂಚುವ ಮೂಲಕ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರ ದಣಿವು ತಣಿಸಿದರು. ಮೆರವಣಿಗೆಯಲ್ಲಿ ಕೆಲವು ಅಲಂಕೃತ ವಾಹನಗಳು ಸಾಗಿದವು. ಅವುಗಳ ಮೇಲೆ ಹೆಣ್ಣು ಮಕ್ಕಳ ರಕ್ಷಣೆ, ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವುದರ ಮಹತ್ವ ಸೇರಿದಂತೆ ನಾನಾ ಸಂದೇಶ ಸಾರಿದ್ದು ವಿಶೇಷ ಎನಿಸಿತು.

ಧಾರ್ಮಿಕ ಸಭೆ: ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಮೈಸೂರು ಜೈನ ಸಂಘದ ವತಿಯಿಂದ ಭಗವಾನ್ ಮಹಾವೀರರ 2622ನೇ ಜಯಂತ್ಯುತ್ಸವದ ಅಂಗವಾಗಿ ಧಾರ್ಮಿಕ ಸಭೆ ಆಯೋಜಿಸಲಾಗಿತ್ತು. ಆಚಾರ್ಯ ಚಂದ್ರಯಾಶ್ ಸೂರಿಶ್ವರ್ಜಿ ಮರಸ ಆದಿ ತಾನಾ(4), ಸಾಧ್ವಿ ಶ್ರೀ ಆಗಮ್‌ಶಿಜಿ ಮರಸಾ ಧೈರ್ಯ ಶ್ರೀಜಿ ಮರಾಸ, ಗುರುವರ್ಯ ಶ್ರೀ ಹರ್ಷಗುನಶ್ರೀ ಜಿ ಮರಾಸಾ ಆಕ್ಷಿ ಥಾನಾ ಹಾಗೂ ಇನ್ನಿತರ ಧಾರ್ಮಿಕ ಗುರುಗಳು ಪಾಲ್ಗೊಂಡು ಅಹಿಂಸಾ ತತ್ವ ಬೋಧಿಸಿದರು. ಬದುಕಿ ಮತ್ತು ಬದುಕಲು ಬಿಡಿ ಎಂಬ ಸಂದೇಶ ಕುರಿತು ಉಪನ್ಯಾಸ ನೀಡಿದರು. ಇದೇ ವೇಳೆ ರಾಜಸ್ತಾನದ ಹಿನ್ನೆಲೆ ಗಾಯಕ ವೈಭವ್ ಬಾಗ್ಮಾರ್ ತಂಡದ ಸದಸ್ಯರು ಭಗವಾನ್ ಮಹಾವೀರರ ಘೋಷ ವಾಕ್ಯ, ಪ್ರಾರ್ಥನಾ ಗೀತೆ ಹಾಗೂ ಭಕ್ತಿಗೀತೆ ಗಾಯನ ನಡೆಸಿದರು.

ಈ ಸಂದರ್ಭದಲ್ಲಿ ಮೈಸೂರಿನ ಎಲ್ಲಾ ಜೈನ ಸಂಘದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಕಾಯಕ ಸಮಾಜಗಳ ಒಕ್ಕೂಟ ವಿಸರ್ಜನೆಯಾಗಿಲ್ಲ

ಕೆ.ಸಿ.ಪುಟ್ಟಸಿದ್ದಶೆಟ್ಟಿ ಹೇಳಿಕೆಗೆ ಒಕ್ಕೂಟದ ನೂತನ ಅಧ್ಯಕ್ಷ ಬೋರಪ್ಪಶೆಟ್ಟಿ ಆಕ್ಷೇಪ



ಮೈಸೂರು,ಏ.4(ಪಿಎಂ)– ಮೈಸೂರು ಜಿಲ್ಲಾ ಕಾಯಕ ಸಮಾಜಗಳ ಒಕ್ಕೂಟವನ್ನು ವಿಸರ್ಜನೆ ಮಾಡಿದ್ದೇವೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಸಿ.ಪುಟ್ಟಸಿದ್ದಶೆಟ್ಟಿ ಮಾಧ್ಯಮಗಳಿಗೆ ಸುಳ್ಳು ಹೇಳಿಕೆ ನೀಡಿದ್ದಾರೆ. ಅವರು ಈಗಾಗಲೇ ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಒಕ್ಕೂಟದ ಕಾರ್ಯಕಾರಿ ಸಭೆ ನಡೆಸಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಒಕ್ಕೂಟದ ನೂತನ ಅಧ್ಯಕ್ಷ ಬೋರಪ್ಪಶೆಟ್ಟಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.28ರಂದು ಕೆಆರ್ ನಗರದ ಪತ್ರಿಕಾಭವನದಲ್ಲಿ ಕೆ.ಸಿ.ಪುಟ್ಟಸಿದ್ದಶೆಟ್ಟಿಯವರು ಪತ್ರಿಕಾಗೋಷ್ಠಿ ನಡೆಸಿ ಮೈಸೂರು ಜಿಲ್ಲಾ ಕಾಯಕ ಸಮಾಜಗಳ ಒಕ್ಕೂಟವನ್ನು ವಿಸರ್ಜನೆ ಮಾಡಿರುವುದಾಗಿ ಸುಳ್ಳು ಹೇಳಿದ್ದಾರೆ. ಅಲ್ಲದೆ, ಒಕ್ಕೂಟದ ಪ್ರಧಾನ ಕಾರ್ಯದರ್ಶಿಗಳು ಸದಸ್ಯರ ವಾರ್ಷಿಕ ಶುಲ್ಕ ಮತ್ತು ದಾನಿಗಳಿಂದ ಬಂದ ಹಣವನ್ನು ಒಕ್ಕೂಟದ ಬ್ಯಾಂಕ್ ಖಾತೆಗೆ ಜಮಾ ಮಾಡದೇ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ನನ್ನ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ ಎಂದು ದೂರಿದರು.

ಜೊತೆಗೆ ಒಕ್ಕೂಟದ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಮೈಸೂರಿನ ಸೈಬರ್ ಪೊಲೀಸ್ ಠಾಣೆ ಹಾಗೂ ಕೆಆರ್ ನಗರ ಪೊಲೀಸ್ ಠಾಣೆಗೆ ವಿನಾಕಾರಣ ದೂರು ನೀಡಿದ್ದರು. ಈ ಸಂಬಂಧ ನಾನು ಸಮಂಜಸ ಲಿಖಿತ ಉತ್ತರ ಕೊಟ್ಟಿದ್ದೇನೆ. ಇದೇ ರೀತಿ ಅವರು ನನ್ನ ಬಗ್ಗೆ ತೇಜೋವಧೆ ಮುಂದುವರೆಸಿದರೆ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ ಎಂದು ತಿಳಿಸಿದರು.

ರಾಜ್ಯ ಮಟ್ಟದ ಒಕ್ಕೂಟ ಅಲ್ಲ: ಒಕ್ಕೂಟದ ಜಿಲ್ಲಾಧ್ಯಕ್ಷರಾಗಿದ್ದ ಕೆ.ಸಿ.ಪುಟ್ಟಸಿದ್ದಶೆಟ್ಟಿಯವರು ಇದ್ದಕ್ಕಿದ್ದಂತೆ ರಾಜ್ಯ ಮಟ್ಟದ ಒಕ್ಕೂಟ ಎಂದು ಸ್ವಯಂ ಘೋಷಣೆ ಮಾಡಿದ್ದರು. ಜಿಲ್ಲಾ ಕಾಯಕ ಸಮಾಜಗಳ ಒಕ್ಕೂಟ ಎಂದು ಮಾತ್ರವೇ ನೋಂದಣಿಯಾಗಿರುವ ಹಿನ್ನೆಲೆಯಲ್ಲಿ ಈ ರೀತಿ ಸುಳ್ಳು ಪ್ರಚಾರ ಮಾಡುವುದು ಕಾನೂನುಬಾಹಿರ ಎಂದು ಪ್ರಧಾನ ಕಾರ್ಯದರ್ಶಿಯಾಗಿ ನಾನು ಆಕ್ಷೇಪ ವ್ಯಕ್ತಪಡಿಸಿದ್ದೆ ಎಂದು ಹೇಳಿದರು.

2022ರ ಮೇ 25ರಂದು ಜಿಲ್ಲಾ ಕಾಯಕ ಸಮಾಜಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಕೆ.ಸಿ.ಪುಟ್ಟಸಿದ್ದಶೆಟ್ಟಿ ರಾಜೀನಾಮೆ ಸಲ್ಲಿಸಿದ್ದಾರೆ. ಬಳಿಕ 2023ರ ಮಾ.25 ರಂದು ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಒಕ್ಕೂಟದ ಉಪಾಧ್ಯಕ್ಷ ತಿಮ್ಮಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಣಿ ಸಭೆಯಲ್ಲಿ ನಾನು ಒಕ್ಕೂಟದ ಅಧ್ಯಕ್ಷನಾಗಿ ಆಯ್ಕೆಯಾಗಿದ್ದೇನೆ ಎಂದು ತಿಳಿಸಿದರು. ಒಕ್ಕೂಟದ ನೂತನ ಪದಾಧಿಕಾರಿಗಳಾದ ಡಾ.ಕೆ.ವಿಜಯಕುಮಾರ್ (ಗೌರವಾಧ್ಯಕ್ಷ), ಮಹದೇವ್ ಗಾಣಿಗ್ (ಪ್ರಧಾನ ಕಾರ್ಯದರ್ಶಿ), ಮೈಸೂರು ತಾಲೂಕು ಅಧ್ಯಕ್ಷ ರಮೇಶ್, ನಗರ ಕಾರ್ಯದರ್ಶಿ ಕುಮಾರ್, ಮುಖಂಡ ಸ್ವಾಮಿ ಮತ್ತಿತರರು ಗೋಷ್ಠಿಯಲ್ಲಿದ್ದರು.

ಗ್ರಾಮೀಣ ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ಸಂವಿಧಾನಬಾಹಿರ

ಪಾಳೇಗಾರಿ ನ್ಯಾಯ ಪಂಚಾಯಿತಿ ರದ್ದುಪಡಿಸಿ; ಸಿಪಿಐ (ಎಂ) ಒತ್ತಾಯ



ಮೈಸೂರು,ಏ.4(ಪಿಎಂ)– ಗ್ರಾಮೀಣ ಪ್ರದೇಶದಲ್ಲಿ ಸಂವಿಧಾನಬಾಹಿರವಾಗಿ ಚಾಲ್ತಿಯಲ್ಲಿರುವ ಪಾಳೇಗಾರಿ ನ್ಯಾಯ ಪಂಚಾಯಿತಿಗಳನ್ನು ರದ್ದುಪಡಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿಪಿಐ (ಎಂ) ಮಂಡ್ಯ ಜಿಲ್ಲಾ ಕಾರ್ಯದರ್ಶಿ ಟಿ.ಎಲ್.ಕೃಷ್ಣೇಗೌಡ, ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕು ಕುಣಗಳ್ಳಿ ಗ್ರಾಮದ ಉಪ್ಪಾರ ಸಮುದಾಯದ ಗೋವಿಂದರಾಜು, ದಲಿತ ಯುವತಿ ಮದುವೆಯಾದ ಕಾರಣಕ್ಕೆ ಈ ಗ್ರಾಮದ ಯಜಮಾನರು ಗೋವಿಂದರಾಜು ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿದ್ದರು ಎಂದರು.

ಅಲ್ಲದೆ, ಮೂರು ಲಕ್ಷ ರೂ. ದಂಡ ವಿಧಿಸಿದ್ದರು. ಈ ಪ್ರಕರಣ ಸಂಬಂಧ ಕಾನೂನು ಕ್ರಮವಾಗಿದ್ದು, 12 ಮಂದಿ ಬಂಧನವಾಗಿ ಅವರು ಜಾಮೀನು ಮೇಲೆ ಬಿಡುಗಡೆಯಾಗಿದ್ದಾರೆ. ಇಂತಹ ದೌರ್ಜನ್ಯಕ್ಕೆ ಕಾರಣ ಪಾಳೇಗಾರಿ ನ್ಯಾಯ ಪಂಚಾಯಿತಿ ನಡೆಸುವ ಯಜಮಾನರು. ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳ ಗ್ರಾಮೀಣ ಪ್ರದೇಶದಲ್ಲಿ ಈ ರೀತಿ ಸಂವಿಧಾನ ಮತ್ತು ಕಾನೂನುಬಾಹಿರವಾಗಿ ನ್ಯಾಯ ಪಂಚಾಯಿತಿ ನಡೆಸುವುದು ರೂಢಿಯಲ್ಲಿದ್ದು, ಆ ಮೂಲಕ ಬಲಹೀನರು, ಬಡವರು, ದಲಿತರು ಹಾಗೂ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ ಎಂದು ದೂರಿದರು.

ಇಂತಹ ಕಾನೂನುಬಾಹಿರ ಪಂಚಾಯಿತಿಗೆ ಹೆದರಿ ಯಾವುದೇ ಪ್ರಗತಿಪರ, ಜಾತ್ಯಾತೀತ ಕೆಲಸಗಳಿಗೆ ಯುವ ಜನತೆ ಮುಂದಾಗದಂತೆ ಆಗಿದೆ. ಅಲ್ಲದೆ, ನ್ಯಾಯಸಮ್ಮತ ಮತದಾನ ಪ್ರಕ್ರಿಯೆ ಮೇಲೂ ಈ ಅಕ್ರಮ ನ್ಯಾಯ ಪಂಚಾಯಿತಿ ದುಷ್ಪರಿಣಾಮ ಉಂಟು ಮಾಡಲಿದೆ. ಹಾಗಾಗಿ ಆಯಾಯ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಅಕ್ರಮ ಕೂಟಗಳಾದ ಪಾಳೇಗಾರಿ ನ್ಯಾಯ ಪಂಚಾಯಿತಿ ನಿಷೇಧಿಸಲು ಗಂಭೀರ ಕ್ರಮ ವಹಿಸಬೇಕು. ಇಂತಹ ಅಕ್ರಮ ಪಂಚಾಯಿತಿಗಳ ವಿರುದ್ಧ ಸಿಪಿಐ (ಎಂ) ಹೈಕೋರ್ಟ್ ಮೊರೆ ಹೋಗಲೂ ಉದ್ದೇಶಿಸಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸಿಪಿಐ (ಎಂ) ಮೈಸೂರು ಜಿಲ್ಲಾ ಕಾರ್ಯದರ್ಶಿ ಎಲ್.ಜಗದೀಶ್ ಸೂರ್ಯ, ಸದಸ್ಯ ಕೆ.ಬಸವರಾಜು, ಪದಾಧಿಕಾರಿಗಳಾದ ಕೃಷ್ಣ, ರಾಜೇಂದ್ರ, ಕುಣಗಳ್ಳಿ ಗ್ರಾಮದ ಉಪ್ಪಾರ ಸಮುದಾಯದ ಗೋವಿಂದರಾಜು ಗೋಷ್ಠಿಯಲ್ಲಿದ್ದರು.

ಏ. 10, 11 ರಂದು ಜಯನಗರ ಶ್ರೀರಾಮ ಮಂದಿರದಲ್ಲಿ ಶ್ರೀರಾಮನವಮಿ ಕಾರ್ಯಕ್ರಮಗಳು

ಮೈಸೂರು, ಏ. 4– ಮೈಸೂರಿನ ಶ್ರೀ ಶಾರದಾ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಶ್ರೀರಾಮ ನವಮಿ ಪ್ರಯುಕ್ತ ಏ. 10 ಮತ್ತು 11 ರಂದು ಶ್ರೀರಾಮನವಮಿ ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ಜಯನಗರ 16ನೇ ಕ್ರಾಸ್‌ನಲ್ಲಿರುವ ಶ್ರೀರಾಮ ಮಂದಿರದಲ್ಲಿ ಏರ್ಪಡಿಸಲಾಗಿದೆ.

ಏ. 10 : ಸಂಜೆ 5 ರಿಂದ 6ಗಂಟೆವರೆಗೆ ವಿದುಷಿ ಕೋಮಲ ಅವರಿಂದ ದೇವರನಾಮ, ಸಂಜೆ 6 ಗಂಟೆಯಿಂದ 7 ರವರೆಗೆ ಕು. ಪ್ರೇರಣಾ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ, ಸಂಜೆ 7 ರಿಂದ 9 ರವರೆಗೆ ವಿದುಷಿ ಮಹತಿ ರಘುರಾಮ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಏರ್ಪಡಿಸಲಾಗಿದೆ. ಪಕ್ಕವಾದ್ಯದಲ್ಲಿ ವಿದುಷಿ ಶ್ರುತಿ–ಪಿಟೀಲು, ವಿದ್ವಾನ್ ಎಸ್. ಕುಮಾರಸ್ವಾಮಿ ಮೃದಂಗದಲ್ಲಿ ಸಾಥ್ ನೀಡಲಿದ್ದಾರೆ.

ಏ. 11: ಸಂಜೆ 6 ರಿಂದ 7 ರವರೆಗೆ ವಿದುಷಿ ಶ್ರೀಮತಿ ಲತಾಶೇಖರ್ ಅವರಿಂದ ದೇವರ ನಾಮ, ವಿದ್ವಾನ್ ಎಸ್ ವಿದ್ಯಾಧರ ಅವರಿಂದ ಪಿಟೀಲು, ವಿದುಷಿ ಶ್ರೀಮತಿ ಈಶ್ವರಿ ಅವರಿಂದ ಮೃದಂಗ. ಸಂಜೆ 7 ರಿಂದ 8.30 ರವರೆಗೆ ವಿದುಷಿ ಶ್ರೀಮತಿ ಕಾಂಚನ ಶ್ರೀ ಅವರಿಂದ ಭರತನಾಟ್ಯ. ಹೆಚ್ಚಿನ ಮಾಹಿತಿಗೆ ವಿದ್ವಾನ್ ಮೈಸೂರು ಸುಬ್ರಮಣ್ಯ ಕುಮಾರ್ ಅವರನ್ನು 9845887237 ಮೂಲಕ ಸಂಪರ್ಕಿಸಬಹುದು.

ವ್ಯಕ್ತಿ ನಾಪತ್ತೆ



ಮೈಸೂರು, ಏ.4– ಮೈಸೂರಿನ ಗಾಂಧಿನಗರ ನಿವಾಸಿ ನಿಂಗರಾಜು ಕಾಣೆಯಾಗಿರುವ ಬಗ್ಗೆ ಎನ್.ಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಿಂಗರಾಜು ಮಾ.30 ರಂದು ರಾತ್ರಿ 8 ಗಂಟೆ ಸಮಯದಲ್ಲಿ ಕ್ಯಾತಮಾರನಹಳ್ಳಿಗೆ ಹೋಗುವುದಾಗಿ ಸೈಕಲ್‌ನಲ್ಲಿ ತೆರಳಿದ್ದರು. ಅವರು ಮನೆಗೆ ವಾಪಸ್ಸಾಗಿಲ್ಲ ಎಂದು ಅವರ ಪುತ್ರ ಮಾದೇಶ್ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕವರು ಪೊಲೀಸ್ ಕಂಟ್ರೋಲ್ ರೂಂ ನಂ 0821–2418339 ಗೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ನಮ್ಮ ಸರ್ಕಾರದ ಯೋಜನೆಗಳನ್ನು ತೋರಿಸಿ ಕ್ರೆಡಿಟ್ ಪಡೆಯುತ್ತಿದ್ದಾರೆ

● ಮಾಜಿ ಶಾಸಕ ವಾಸು ವಿಷಾದ ● ನಾವು ಮಾಡಿದ್ದನ್ನು ನಮ್ಮವರು ಜನರಿಗೆ ತಿಳಿಸುತ್ತಲೇ ಇಲ್ಲ

ಮೈಸೂರು,ಏ.4(ಎಂಟಿವೈ)– ಕಾಂಗ್ರೆಸ್ ಎಲ್ಲಾ ಜಾತಿ ಮತ್ತು ಧರ್ಮಗಳಿಗೆ ಗೌರವ ಕೊಡುವ ಪಕ್ಷವಾಗಿದ್ದು, ಸರ್ವಧರ್ಮದ ಶಾಂತಿಯ ತೋಟವಾಗಿ ಸರ್ವರ ಏಳ್ಗೆ ಬಯಸುತ್ತದೆ ಎಂದು ಮಾಜಿ ಶಾಸಕ ವಾಸು ತಿಳಿಸಿದ್ದಾರೆ.



> “ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಮೈಸೂರಿಗೆ ಪಂಚಕರ್ಮ ಆಸ್ಪತ್ರೆ, ಜಯದೇವ ಆಸ್ಪತ್ರೆ, ಮಹಾರಾಣಿ ಕಾಲೇಜು ಕಟ್ಟಡಗಳನ್ನು ನಿರ್ಮಿಸಿದೆವು. ನಾವೇ ಮಾಡಿದ ಕೆಲಸವನ್ನು ನಮ್ಮವರು ಜನರಿಗೆ ತಿಳಿಸುತ್ತಿಲ್ಲ. ಆದರೆ, ನಮ್ಮ ಸರ್ಕಾರ ಮಾಡಿದ ಹಲವು ಮಹತ್ತರ ಯೋಜನೆಗಳನ್ನು ಬಿಜೆಪಿ ನಾಯಕರು ನಾವೇ ಮಾಡಿದ್ದು ಎಂದು ಸುಳ್ಳು ಹೇಳುತ್ತಿದ್ದಾರೆ ಎಂದು ವಿಷಾದಿಸಿದರು.
> - ವಾಸು, ಮಾಜಿ ಶಾಸಕ

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಪ್ರಚಾರ ಸಮಿತಿ ಹಾಗೂ ಶಿಕ್ಷಕರು ಮತ್ತು ಪದವೀಧರರ ಘಟಕದ ನೂತನ ಅಧ್ಯಕ್ಷರು, ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಿಜೆಪಿ ನಾಯಕರು ಸುಳ್ಳು ಹೇಳುವ ಮೂಲಕ ಸಮಾಜದಲ್ಲಿ ಅಶಾಂತಿ ಉಂಟು ಮಾಡುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ಧರ್ಮ ಧರ್ಮಗಳು ಜಾತಿ ಜಾತಿಗಳ ಎತ್ತಿಕಟ್ಟುವ ಮೂಲಕ ಸಮಾಜದಲ್ಲಿ ಕೋಮು ಸೌಹಾರ್ದತೆ ಕದಡಿ ರಾಜಕೀಯ ಲಾಭ ಮಾಡಿಕೊಳ್ಳಲು ಸಂಚು ನಡೆಸುತ್ತಿದ್ದಾರೆ. ಇದರ ಬಗ್ಗೆ ಜನ ಎಚ್ಚೆತ್ತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಈ ಹಿಂದೆ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಹಲವು ಜನಪರ ಯೋಜನೆಗಳ ಬಗ್ಗೆ ಜನರಿಗೆ ತಿಳಿಸುವಲ್ಲಿ ನಾವು ವಿಫಲವಾಗಿದ್ದೇವೆ. ಪ್ರಚಾರದಲ್ಲಿ ಕಾಂಗ್ರೆಸ್ ಪಕ್ಷ ಹಿಂದುಳಿದಿದೆ. ದೇಶದ ಪ್ರಧಾನಿಯಾಗಿದ್ದ ಡಾ.ಮನಮೋಹನ್ ಸಿಂಗ್ ದೇಶದ ಆರ್ಥ ವ್ಯವಸ್ಥೆಯನ್ನು ಸದೃಢಗೊಳಿಸಿದ್ದರು. ಜನಪರವಾದ ಅನೇಕ ಕಾರ್ಯಕ್ರಮಗಳನ್ನು ಕೊಡುಗೆ ನೀಡಿದರು. ಆದರೂ ಬಿಜೆಪಿ ನಾಯಕರ ಸುಳ್ಳಿನ ಕೂಪಕ್ಕೆ ಕಾಂಗ್ರೆಸ್ ಸರ್ಕಾರಗಳು ಬಲಿಯಾದವು. ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಿ ಎಂದರೆ 70 ವರ್ಷಗಳಿಂದ ನೀವು ತಪ್ಪು ಮಾಡಿಲ್ಲವೇ ಎಂದು ನಮ್ಮನ್ನೇ ಮರು ಪ್ರಶ್ನಿಸುವ ಬಿಜೆಪಿ ನಾಯಕರಿಗೆ ತಕ್ಕ ಉತ್ತರ ಕೊಡಬೇಕು ಎಂದು ಹೇಳಿದರು.

ಇದೇ ವೇಳೆ ಕಾಂಗ್ರೆಸ್ ಪಕ್ಷದ ಶಿಕ್ಷಕರ ಘಟಕದ ರಾಜ್ಯಾಧ್ಯಕ್ಷ ಕುಬೇರಪ್ಪ ಮಾತನಾಡಿ, ಕಾಂಗ್ರೆಸ್ ಪಕ್ಷ ದೇಶಕ್ಕೆ ಏನು ಮಾಡಿದೆ ಎಂಬುದನ್ನು ಅಮಿತ್ ಷಾ, ಮೋದಿ, ನಡ್ಡಾ ಅವರಿಗೆ ಹೇಳಬೇಕು. ನೀವು ಓದಿದ ಶಾಲೆ, ಪ್ರಯಾಣಿಸುವ ರೈಲು, ಬಸ್, ವಾಸವಿರುವ ಬಂಗಲೆ ಎಲ್ಲವೂ ಕಾಂಗ್ರೆಸ್ ಕೊಡುಗೆ ಎಂದು ತಿಳಿಸಬೇಕು. ಪ್ರತಿಯೊಂದು ತಾಲೂಕಿಗೆ ಶಿಕ್ಷಕರ ಘಟಕಕ್ಕೆ 50 ಪದಾಧಿಕಾರಿಗಳನ್ನು ನೇಮಿಸಬೇಕು. ಪ್ರಚಾರ ಸಮಿತಿಯ ಮೇಲೂ ದೊಡ್ಡ ಜವಾಬ್ದಾರಿ ಇದೆ. ಬಿಜೆಪಿ ಹೇಳುವ ಸುಳ್ಳಿನ ಮೇಲೆ ನಾವು ಸತ್ಯದ ಮನೆಯನ್ನು ಕಟ್ಟಿ, ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಮಹಿಳಾ ಕಾಂಗ್ರೆಸ್ ನಗರಾಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಮಾಜಿ ಮೇಯರ್ ಅಯೂಬ್ ಖಾನ್, ಯುವ ಕಾಂಗ್ರೆಸ್ ಅಧ್ಯಕ್ಷ ಅಬ್ರಾರ್, ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ನಾಗೇಶ್, ಕಾಂಗ್ರೆಸ್ ಮುಖಂಡರಾದ ಮಹೇಶ್, ಕೆ.ಸಿ.ನಾಗರಾಜ್, ಬ್ಲಾಕ್ ಅಧ್ಯಕ್ಷ ಸೈಯದ್ ಇಕ್ಬಾಲ್, ಶಿವಮಲ್ಲು, ಪ್ರದೀಪ್, ಯೋಗೇಶ್ ಉಪ್ಪಾರ್ ಪ್ರಕಾಶ್, ಮಾಜಿ ನಗರ ಪಾಲಿಕೆ ಸದಸ್ಯ ಸುಧೀಂದ್ರ, ಪ್ರಶಾಂತ್ ಗೌಡ, ಎನ್‌ಎಸ್‌ಯುಐ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಾಗೇಶ್ ಕರಿಯಪ್ಪ, ಅಶ್ವಥ್ ಗೌಡ, ಶ್ರೀನಾಥ್ ಬಾಬು, ಪಾಲಿಕೆ ಸದಸ್ಯ ಅಸ್ರತ್‌ವುಲ್ಲಾ ಖಾನ್, ಮಾಜಿ ಪಾಲಿಕೆ ಸದಸ್ಯ ಶೌಕತ್ ಪಾಷ, ಮುಖಂಡ ಅಣ್ಣಯ್ಯ, ಹರೀಶ್ ಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್, ವಕ್ಫ್ ಬೋರ್ಡ್ ಅಧ್ಯಕ್ಷ ಸೈಯ್ಯದ್ ಅಕ್ರಂ, ಶಿಕ್ಷಕರ ಮತ್ತು ಪದವೀಧರರ ಅಧ್ಯಕ್ಷ ರಾಘವೇಂದ್ರ, ಆಲನಹಳ್ಳಿ ಪುಟ್ಟಸ್ವಾಮಿ, ಕೆ.ಆರ್.ಕ್ಷೇತ್ರದ ಆಕಾಂಕ್ಷಿ ಪ್ರದೀಪ್ ಕುಮಾರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ













ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	2	2	0	0	4
ರಾಜಸ್ಥಾನ್	1	1	0	0	2
ಆರ್‌ಸಿಬಿ	1	1	0	0	2
ಲಕ್ನೋ	2	1	1	0	2
ಪಂಜಾಬ್	1	1	0	0	2
ಸಿಎಸ್‌ಕೆ	2	1	1	0	2
ಕೋಲ್ಕತ್ತಾ	1	0	1	0	0
ಡೆಲ್ಲಿ	2	0	2	0	0
ಮುಂಬೈ	1	0	1	0	0
ಎಸ್‌ಆರ್‌ಹೆಚ್	1	0	1	0	0

ಪ್ರಸಕ್ತ ಸಾಲಿನಲ್ಲಿ ಹಾಲಿ ಚಾಂಪಿಯನ್ನರ ಗೆಲುವಿನ ನಾಗಾಲೋಟ

ಡೆಲ್ಲಿ ವಿರುದ್ಧ ಗೆದ್ದ ಗುಜರಾತ್ ಟೈಟಾನ್ಸ್



ದೆಹಲಿ, ಏ.4– ಪ್ರಸಕ್ತ ಸಾಲಿನಲ್ಲಿ ಹಾಲಿ ಚಾಂಪಿಯನ್ನರ ಗೆಲುವಿನ ನಾಗಾಲೋಟ ಮುಂದುವರೆದಿದ್ದು, ಸಾಯಿ ಸುದರ್ಶನ್ ಅವರ ಜವಾಬ್ದಾರಿಯುತ ಆಟದ ನೆರವಿನಿಂದ ಗುಜರಾತ್ ಟೈಟಾನ್ಸ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 6 ವಿಕೆಟ್‌ಗಳ ಗೆಲುವು ಸಾಧಿಸಿದೆ.

ಇದರೊಂದಿಗೆ ಗುಜರಾತ್ ಟೂರ್ನಿಯಲ್ಲಿ ಸತತ 2ನೇ ಗೆಲುವು ದಾಖಲಿಸಿ, 4 ಪಾಯಿಂಟ್‌ನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದರೇ, ಇತ್ತ ಡೆಲ್ಲಿ ಕ್ಯಾಪಿಟಲ್ಸ್ ಸತತ 2ನೇ ಸೋಲು ಅನುಭವಿಸಿ 8ನೇ ಸ್ಥಾನದಲ್ಲಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ 163 ರನ್‌ಗಳ ಸವಾಲಿನ ಗುರಿ ಬೆನ್ನತ್ತಿದ್ದ ಗುಜರಾತ್ ಟೈಟನ್ಸ್‌ಗೆ ನಿರೀಕ್ಷಿತ ಆರಂಭ ದೊರೆಯಲಿಲ್ಲ. 7 ಎಸೆತದಲ್ಲಿ 2 ಬೌಂಡರಿ ಹಾಗೂ 1 ಸಿಕ್ಸರ್ ಒಳಗೊಂಡ 14 ರನ್ ಗಳಿಸಿದ್ದ ವೃದ್ಧಿಮಾನ್ ಸಾಹ ವಿಕೆಟ್ ಒಪ್ಪಿಸಿದರೇ, ಇದರ ಬೆನ್ನಲ್ಲೇ ಶುಭಮನ್ ಗಿಲ್ 14 ರನ್ ಸಿಡಿಸಿ ನಿರ್ಗಮಿಸಿದರು. ಬಳಿಕ ಬಂದ ನಾಯಕ ಹಾರ್ದಿಕ್ ಪಾಂಡ್ಯ ಕೇವಲ 5 ರನ್ ಗಳಿಸಿ ಔಟಾದರು. ಈ ವೇಳೆ ಒಂದಾದ ಸಾಯಿ ಸುದರ್ಶನ್ ಹಾಗೂ ವಿಜಯ್ ಶಂಕರ್ 53ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಆದರೆ 23 ಎಸೆತಗಳಲ್ಲಿ 3 ಬೌಂಡರಿ ಒಳಗೊಂಡ 29ರನ್ ಗಳಿಸಿದ್ದ ವಿಜಯ ಶಂಕರ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ತಾಳ್ಮೆ ಹಾಗೂ ಎಚ್ಚರಿಕೆಯ ಆಟವಾಡಿದ ಸಾಯಿ ಸುದರ್ಶನ್ ಅರ್ಧಶತಕ ಸಿಡಿಸಿ ಮಿಂಚಿದರು. ಅಲ್ಲದೇ ಡೇವಿಡ್ ಮಿಲ್ಲರ್ ಅವರೊಂದಿಗೆ 56ರನ್‌ಗಳ ಜೊತೆಯಾಟವಾಡಿ ತಂಡಕ್ಕೆ ಇನ್ನೂ 11 ಎಸೆತ ಬಾಕಿ ಇರುವಂತೆ ಜಯ ತಂದಿತ್ತರು. ಅಂತಿಮವಾಗಿ ಗುಜರಾತ್ 18.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 163ರನ್ ಗಳಿಸುವ ಮೂಲಕ ಜಯದ ನಗೆ ಬೀರಿತು. ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಸಾಯಿ ಸುದರ್ಶನ್ 62 ರನ್ ಗಳಿಸಿದರೇ, ಡೇವಿಡ್ ಮಿಲ್ಲರ್ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 31ರನ್ ಗಳಿಸಿ ಅಜೇಯರಾಗಿ ಉಳಿದರು. ಡೆಲ್ಲಿ ಪರ ಎನ್ರಿಕ್ ನೋರ್ಕಿಯ 2, ಮಿಚೆಲ್ ಮಾರ್ಷ್ ಹಾಗೂ ಖಲೀಲ್ ಅಹಮದ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 162ರನ್ ಗಳಿಸಿತು. ತಂಡದ ಪರ ಡೇವಿಡ್ ವಾರ್ನರ್ 27, ಸರ್ಫರಾಝ್ ಖಾನ್ 30, ಅಭಿಷೇಕ್ ಪೊರೆಲ್ 20, ಅಕ್ಷರ್ ಪಟೇಲ್ 36 ರನ್ ಗಳಿಸಿ ತಂಡದ ಮೊತ್ತವನ್ನು 160ರ ಗಡಿ ದಾಟಿಸಿದರು. ಇವರನ್ನು ಹೊರತುಪಡಿಸಿ ಉಳಿದವರಿಂದ ನಿರೀಕ್ಷಿತ ಆಟ ಮೂಡಿ ಬರಲಿಲ್ಲ. ಗುಜರಾತ್ ಟೈಟಾನ್ಸ್ ಪರ ಮೊಹಮ್ಮದ್ ಶಮಿ ಹಾಘೂ ರಶೀದ್ ಖಾನ್ ತಲಾ 3, ಅಲ್ಝಾರಿ ಜೋಸೆಫ್ 2 ವಿಕೆಟ್ ಪಡೆದರು. ಸಾಯಿ ಸುದರ್ಶನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕ್ರೀಡಾಂಗಣಕ್ಕೆ ಪಂತ್ ಆಗಮನ

ಇಂದಿನ ಪಂದ್ಯಕ್ಕೆ ಅಪಘಾತದಲ್ಲಿ ತೀವ್ರಗಾಯಗೊಂಡು ಚೇತರಿಸಿಕೊಳ್ಳುತ್ತಿರುವ ಡೆಲ್ಲಿ ಕ್ಯಾಪಿಟಲ್ಸ್ ಮಾಜಿ ನಾಯಕ ರಿಷಬ್ ಪಂತ್ ಖುದ್ದು ಮೈದಾನಕ್ಕೆ ಆಗಮಿಸಿದ್ದರು. ವಾಕಿಂಗ್ ಸ್ಟಿಕ್ ಹಿಡಿದು ನಿಧಾನವಾಗಿ ನಡೆದುಕೊಂಡು ಕ್ರೀಡಾಂಗಣಕ್ಕೆ ಆಗಮಿಸಿದ ಪಂತ್, ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತು ಡೆಲ್ಲಿ ತಂಡವನ್ನು ಹುರಿದುಂಬಿಸಿದರು.



[ಏಪ್ರಿಲ್ 05]

ರಾಜಸ್ಥಾನ್ V/S ಪಂಜಾಬ್

ಸ್ಥಳ: ಬರ್ಸಾಪರ ಕ್ರಿಕೆಟ್ ಮೈದಾನ, ಗುವಾಹಟಿ

ಸಮಯ: ಸಂಜೆ 7.30

ಬೆಂಗಳೂರಿನಲ್ಲಿ ಬಿರುಗಾಳಿ ಸಹಿತ ಭಾರೀ ಮಳೆ

ನದಿಯಂತಾದ ರಸ್ತೆಗಳು, ವಿಮಾನಗಳ ಹಾರಾಟದಲ್ಲೂ ವ್ಯತ್ಯಯ



ಬೆಂಗಳೂರು: ರಾಜಧಾನಿ ಬೆಂಗಳೂರು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಸುತ್ತಮುತ್ತ ಬಿರುಗಾಳಿ ಸಹಿತ ಭಾರೀ ಮಳೆ ಆಗಿದೆ. ಇದರಿಂದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಹಾರಾಟದಲ್ಲೂ ವ್ಯತ್ಯಯವಾಗಿದೆ.

ನಗರದ ಯಲಹಂಕ ಸುತ್ತಮುತ್ತ ಬೆಂಗಳೂರಿನ ಹಲವೆಡೆ ಮಂಗಳವಾರ ಮಧ್ಯಾಹ್ನದಿಂದ ಮೋಡ ಮುಚ್ಚಿದ ವಾತಾವರಣ ಇತ್ತು. ಸಂಜೆ 5 ಗಂಟೆಯ ಬಳಿಕ ಭಾರೀ ಧಾರಾಕಾರ ಮಳೆ ಆಗಿದೆ. ಅದರಲ್ಲೂ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಪಟ್ಟಣದ ಸುತ್ತಮುತ್ತ ಗುಡುಗು ಬಿರುಗಾಳಿಸಹಿತ ಭಾರೀ ಮಳೆ ಆಗಿದೆ. ರಸ್ತೆಗಳಲ್ಲಿ ನೀರು ನಿಂತಿದೆ. ಈ ಹವಾಮಾನ ವೈಪರೀತ್ಯದಿಂದ ಬೆಂಗಳೂರಿನತ್ತ ಆಗಮಿಸಿದ ವಿಮಾನಗಳ ಲ್ಯಾಂಡಿಂಗ್ ಮತ್ತು ಬೆಂಗಳೂರಿನಿಂದ ಹೊರಟ ವಿಮಾನ ಟೇಕಾಫ್‌ಗೆ ಸಮಸ್ಯೆ ಎದುರಾಗಿತ್ತು ಈ ಹಿನ್ನೆಲೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ವೇಳಾಪಟ್ಟಿಯಲ್ಲಿ ವ್ಯತ್ಯಯ ಉಂಟಾಗಿದೆ

ಚೆನ್ನೈನತ್ತ ಸಾಗಿದ ಆರು ವಿಮಾನಗಳು: ವಿಮಾನ ಸಂಚಾರ ವ್ಯತ್ಯಯ ಕುರಿತು ಮಾಹಿತಿ ನೀಡಿದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎಎಲ್) ಅಧಿಕಾರಿಗಳು, ಬಲವಾದ ಅಡ್ಡ ಗಾಳಿ, ಗುಡುಗು ಮತ್ತು ಮಿಂಚು ಸಹಿತ ಭಾರೀ ಮಳೆಯಿಂದಾಗಿ ಆರು ವಿಮಾನಗಳು ವಿಳಂಬವಾಗಿವೆ. ಬೆಂಗಳೂರಿಗೆ ಆಗಮಿಸಬೇಕಿದ್ದ ಆರು ದೇಶೀಯ ವಿಮಾನಗಳನ್ನು ಚೆನ್ನೈಗೆ ತಿರುಗಿಸಲಾಯಿತು. ಸದ್ಯ ವಿಮಾನಗಳ ಕಾರ್ಯಾಚರಣೆಗಳು ಪುನರಾರಂಭಗೊಂಡಿವೆ

ಏರ್‌ಪೋರ್ಟ್ ಮಾರ್ಗದಲ್ಲಿ ಪರದಾಟ: ಮಳೆಯಿಂದ ಏರ್‌ಪೋರ್ಟ್‌ಮಾರ್ಗದಲ್ಲಿ ರಸ್ತೆಗಳಲ್ಲಿ ನೀರು ನಿಂತಿದೆ. ದ್ವಿಚಕ್ರ ವಾಹನ, ಕಾರುಗಳ ಚಾಲಕರು ಮಳೆಯಿಂದ ಸಂಚಾರಕ್ಕೆ ಪರದಾಟ ನಡೆಸಿದರು. ಬಿರುಗಾಳಿ ಸಹಿತ ಮಳೆಗೆ ಹೆದ್ದಾರಿಯಲ್ಲಿ ಬ್ಯಾರಿಕೇಡ್‌ಗಳು ನೆಲಕ್ಕುರುಳಿದ್ದು, ದೇವನಹಳ್ಳಿಯಲ್ಲಿ ಒಂದು ಗಂಟೆ ಸುರಿದ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ.

ನಗರದ ಕೆಲ ಭಾಗದಲ್ಲಿ ಮಳೆ: ನಗರದ ಕೆಆರ್ ಮಾರ್ಕೆಟ್, ಕಾರ್ಪೊರೇಷನ್, ರಿಚ್ಮಂಡ್ ಸರ್ಕಲ್ ಸೇರಿದಂತೆ ಹಲವು ಕಡೆಗಳಲ್ಲಿ ತುಂತುರು ಮಳೆ ಸುರಿದಿದೆ. ಮಳೆಯಿಂದಾಗಿ ಕಚೇರಿ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ವಾಹನ ಸವಾರರು ಪರದಾಡುವಂತಾಗಿತ್ತು. ವಿದ್ಯಾರಣ್ಯಪುರ, ನಾಗಸಂದ್ರ, ಯಶವಂತಪುರ, ಜಾಲಹಳ್ಳಿ, ಪೀಣ್ಯ, ದಾಸರಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ತುಂತುರು ಮಳೆ ಆಗಿದೆ.

ಎಚ್ಚರಿಕೆಯಿಂದ ವಾಹನ ಚಾಲನೆ ಮಾಡುವಂತೆ ಪೊಲೀಸ್ ಮನವಿ: ಮಳೆಯಿಂದ ಬೆಂಗಳೂರಿನ ಹಲವು ರಸ್ತೆಗಳಲ್ಲಿ ನೀರು ನಿಂತಿದೆ. ಸಂಚಾರ ದಟ್ಟಣೆ ಉಂಟಾಗದಂತೆ ನಿಗಾ ವಹಿಸಲು ಪೊಲೀಸ್ ಸಿಬ್ಬಂದಿಗಳು ಕಾರ್ಯನಿರತರಾಗಿದ್ದಾರೆ. ವಾಹನ ಸವಾರರು ಎಚ್ಚರಿಕೆಯಿಂದ ವಾಹನ ಚಲಾಯಿಸುವಂತೆ ಬೆಂಗಳೂರು ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ.

ಸಾಲ ವಸೂಲಾತಿ ವೇಳೆ ರೈತರಿಗೆ ಕಿರುಕುಳ ಖಂಡಿಸಿ ಏ.11ಕ್ಕೆ ಧರಣಿ

● ಕಬ್ಬು ಬೆಳೆಗಾರರ ನಿರ್ಧಾರ ● ರೈತರ ಪ್ರಣಾಳಿಕೆ ಬಗ್ಗೆ ಆಳುವವರಿಗೆ ನಿರಾಸಕ್ತಿಗೆ ಖಂಡನೆ



ಮೈಸೂರು, ಏ.4(ಎಸ್‌ಪಿಎನ್)– ಕರ್ನಾಟಕ ಗ್ರಾಮೀಣ ಬ್ಯಾಂಕ್(ಕೆಜಿಬಿ) ಹಂಪಾಪುರ ಶಾಖೆಯಿಂದ ಹಲವು ರೈತರಿಗೆ ಸಾಲ ವಸೂಲಾತಿ ಕಿರುಕುಳ ಹೆಚ್ಚಾಗುತ್ತಿದ್ದು, ಈ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ಏ.11ರಂದು ಬ್ಯಾಂಕ್ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ತಿಳಿಸಿದ್ದಾರೆ.

ಮೈಸೂರು ಜೆಎಸ್‌ಎಸ್ ವಿದ್ಯಾಪೀಠ ಎದುರಿನ ಪಾರ್ಕ್‌ನಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳೊಂದಿಗೆ ಮಂಗಳವಾರ ಸಭೆ ನಡೆಸಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೆಜಿಬಿ ಹಂಪಾಪುರ ಶಾಖೆ ಸಿಬ್ಬಂದಿ ಸಾಲ ವಸೂಲಾತಿ ವೇಳೆ ಕಿರುಕುಳ ನೀಡುತ್ತಿದ್ದಾರೆ. ಅಧಿಕಾರಿಗಳ ಕಿರುಕುಳಕ್ಕೆ ಕಳೆದ ಆರು ತಿಂಗಳ ಹಿಂದೆ ರೈತನೋರ್ವ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ರೈತನಿಗೆ ನ್ಯಾಯ ಒದಗಿಸುವಂತೆ ಪ್ರತಿಭಟನೆ ನಡೆಸಲಾಗಿತ್ತು. ಆದರೂ ಬ್ಯಾಂಕ್ ಅಧಿಕಾರಿಗಳಿಂದ ರೈತರಿಗೆ ಕಿರುಕುಳ ಮುಂದುವರಿದಿದೆ. ಇದನ್ನು ಖಂಡಿಸಿ ಏ.11ರಂದು ಬ್ಯಾಂಕ್ ಮುಂಭಾಗ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

2023ರ ಕರ್ನಾಟಕ ವಿಧಾನಸಭೆ ಚುನಾವಣೆಗೆ ಎಲ್ಲಾ ಪಕ್ಷಗಳು ತಯಾರಿ ನಡೆಸುತ್ತಿದ್ದು, ಯಾವ ಪಕ್ಷಗಳೂ ರೈತ ಪ್ರಣಾಳಿಕೆಯತ್ತ ಆಸಕ್ತಿ ತೋರುತ್ತಿಲ್ಲ. ಹಾಗಾಗಿ ಮಾ.29ರಂದು ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ರೈತ ಪ್ರಣಾಳಿಕೆ ತಯಾರಿಸುವ ಸಂಬಂಧ ವಿವಿಧ ಪಕ್ಷಗಳೊಂದಿಗೆ ಸಂವಾದ ಏರ್ಪಡಿಸಲಾಗಿತ್ತು. ಆ ಸಂವಾದದಲ್ಲಿ ಕಾಂಗ್ರೆಸ್, ಜೆಡಿಎಸ್, ಆಮ್ ಆದ್ಮಿ ಪಾರ್ಟಿಯ ಪ್ರತಿನಿಧಿಗಳು ಬೇಡಿಕೆಗಳಿಗೆ ಪೂರಕವಾಗಿ ಚರ್ಚಿಸಿದ್ದರು. ಆದರೆ, ಬಿಜೆಪಿ ವತಿಯಿಂದ ಯಾರೂ ಆಗಮಿಸಿರಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ಹಿಂದೆ ಕಬ್ಬು ಬೆಳೆಗಾರರ ಹೆಚ್ಚುವರಿ ದರ 150 ರೂ. ನಿಗದಿ ಮಾಡಿ ಸರ್ಕಾರದಿಂದ ಆದೇಶವಾಗಿತ್ತು. ಈ ಆದೇಶಕ್ಕೆ ಸಕ್ಕರೆ ಕಾರ್ಖಾನೆಗಳು ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದಿವೆ. ಈ ಆದೇಶಕ್ಕೆ ತಡೆ ನೀಡದಂತೆ ಸರ್ಕಾರಿ ವಕೀಲರು ಆ ಸಂದರ್ಭದಲ್ಲಿ ನ್ಯಾಯಾಲಯದ ಗಮನಕ್ಕೆ ತರಬಹುದಿತ್ತು. ಆದರೂ ಆ ಕೆಲಸ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ, ಈ ಹೆಚ್ಚುವರಿ ದರ 150 ರೂ. ನಿಗದಿ ಮಾಡುವಂತೆ ಒತ್ತಾಯಿಸಿ 39 ದಿನ ನಮ್ಮ ಸಂಘದಿಂದ ಪ್ರತಿಭಟನೆ ನಡೆಸಲಾಗಿತ್ತು ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ರೈತರ ಪ್ರಣಾಳಿಕೆ ಕುರಿತು ರಾಜ್ಯಾದ್ಯಂತ ಪ್ರಚಾರ ಮಾಡಲು ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ಕರ್ನಾಟಕ ರಾಜ್ಯ ರೈತ ಸಂಘ, ರಾಜ್ಯ ಕಬ್ಬು ಬೆಳೆಗಾರ ಸಂಘ, ಕರ್ನಾಟಕ ನವ ನಿರ್ಮಾಣ ಸೇನೆ, ಕಬಿನಿ ರೈತ ಹಿತರಕ್ಷಣಾ ಸಮಿತಿ, ರಾಜ್ಯ ಕೃಷಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಸಂಘ, ನೀರು ಬಳಕೆದಾರರ ಸಂಘಗಳ ಮಹಾಮಂಡಲ, ಕೃಷಿ ಕೂಲಿ ಕಾರ್ಮಿಕರ ಸಂಘದ ಪದಾಧಿಕಾರಿಗಳು ಬೆಂಬಲ ಸೂಚಿಸಿವೆ. ಈ ಕುರಿತು ತಜ್ಞರೊಂದಿಗೆ ಚರ್ಚಿಸಿ ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಈ ಸಭೆಯಲ್ಲಿ ರೈತ ಮುಖಂಡರಾದ ಪಿ.ಸೋಮಶೇಖರ್, ಅತ್ತಳ್ಳಿ ದೇವರಾಜ್, ಬರಡನಪುರ ನಾಗರಾಜ್, ಹಳ್ಳಿಕೆರೆ ಹುಂಡಿ ಭಾಗ್ಯರಾಜ್, ಕಿರಗಸೂರು ಶಂಕರ್, ಕಮಲಮ್ಮ, ದೇವಮಣಿ, ಸಿದ್ದೇಶ್, ವೆಂಕಟೇಶ್, ರವಿ, ಮಹದೇವಸ್ವಾಮಿ, ರಾಜೇಶ್, ಮಂಜುನಾಥ್, ಪರಶಿವಮೂರ್ತಿ, ಕೆಂಡಗಣಸ್ವಾಮಿ, ರಂಗರಾಜು ಇತರರಿದ್ದರು.

‘ಟಿಪ್ಪು ನಿಜಕನಸುಗಳು’ ಯಶಸ್ಸಿನ ರೂವಾರಿಗಳಿಗೆ ಅಭಿನಂದನೆ

ನಾಟಕ ಎಲ್ಲರಿಗೂ ಸ್ವೀಕಾರವಾಗಿದೆ: ಚಕ್ರವರ್ತಿ ಸೂಲಿಬೆಲೆ



ಸಮಾರಂಭದಲ್ಲಿ ಟಿಪ್ಪು ಪಾತ್ರಧಾರಿ ಸಚಿನ್ ಮಿತ್ರ ನಾಟಕ ಆರಂಭದಂದಿನಿಂದ ತಮಗಾದ ಅನುಭವವನ್ನು ವಿವರಿಸಿದರು



ಕಾರ್ಯಕ್ರಮದಲ್ಲಿ ನೂರಾರು ಮಂದಿ ಪಾಲ್ಗೊಂಡಿದ್ದರು.

ಮೈಸೂರು, ಏ.4(ಎಂಕೆ)– ಮೈಸೂರು ಸೇರಿದಂತೆ ರಾಜ್ಯದಲ್ಲಿ ಭಾರೀ ಸಂಚಲನ ಸೃಷ್ಟಿಸಿದ್ದ ‘ಟಿಪ್ಪು ನಿಜಕನಸುಗಳು’ ನಾಟಕ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ, ನಾಟಕದ ಪಾತ್ರಧಾರಿಗಳು, ಸಂಗೀತ ನಿರ್ದೇಶಕರು, ವಸ್ತ್ರವಿನ್ಯಾಸ, ಬೆಳಕು ವಿನ್ಯಾಸ ಸೇರಿದಂತೆ ನಾಟಕ ನಿರ್ಮಾಣದಲ್ಲಿ ಭಾಗಿಯಾದ ಎಲ್ಲರಿಗೂ ಮೈಸೂರು ಕಲಾ ಪ್ರತಿಷ್ಠಾನ ಹಾಗೂ ಯುವ ಬ್ರಿಗೇಡ್ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಆಯೋಜಿಸಿದ್ದ ಅಭಿನಂದನೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಯುವ ಬ್ರಿಗೇಡ್ ಸಂಸ್ಥಾಪಕ ಹಾಗೂ ವಾಗ್ಮಿ ಚಕ್ರವರ್ತಿ ಸೂಲಿಬೆಲೆ, ಸಾಮಾಜಿಕ ಕಾರ್ಯಕರ್ತ ವಾದಿರಾಜ್ ‘ಟಿಪ್ಪು ನಿಜಕನಸುಗಳು’ ನಾಟಕದ ಯಶಸ್ಸಿಗೆ ಶ್ರಮಿಸಿದವರನ್ನು ಸನ್ಮಾನಿಸಿದರು.

ಬಳಿಕ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಮಾತನಾಡಿ, ನಾಟಕ ಎಲ್ಲರಿಗೂ ಸ್ವೀಕಾರವಾಗಿದೆ. ಕಲಾವಿದರ ಅಚ್ಚುಕಟ್ಟು ಅಭಿನಯ ಎಲ್ಲರ ಮನಗೆದ್ದಿದೆ ಎಂದು ಪ್ರಶಂಸಿಸಿದರಲ್ಲದೆ ಒಬ್ಬ ಕಲಾವಿದ ತನ್ನನ್ನು ತಾನು ಪಾತ್ರದಲ್ಲಿ ಕಳೆದುಕೊಳ್ಳುವುದಾಗಿದೆ. ಈ ಪ್ರಪಂಚವನ್ನೇ ರಂಗಭೂಮಿ ಎಂದು ಭಾವಿಸುವುದಾದರೆ ನಾವೆಲ್ಲರೂ ಪಾತ್ರಧಾರಿಗಳೇ. ನಾಟಕದಂತಹ ಜೀವನದಲ್ಲಿ ನಾಟಕಗಳನ್ನು ಮಾಡುವುದು ವಿಶೇಷವಾದರೂ ಮೂರನೇ ವ್ಯಕ್ತಿಯಾಗಿ ನಾಟಕ ವೀಕ್ಷಣೆ ಮಾಡಿದಾಗ ಪಾತ್ರದಲ್ಲಿರುವ ಜೀವಾಳ ಅರ್ಥವಾಗುತ್ತದೆ. ಬದುಕಿನ ಸ್ವಾರಸ್ಯ ತಿಳಿಯುತ್ತದೆ ಎಂದರು.

ಐತಿಹಾಸಿಕ ಸಂಗತಿಗಳ ವಿಚಾರವಾಗಿ ‘ಟಿಪ್ಪು ನಿಜಕನಸುಗಳ್’ ನಾಟಕದ ಮೂಲಕ ಟಿಪ್ಪುವಿನ ಕುರಿತಾದ ಒಂದು ಕತೆಯನ್ನು ನೋಡಿದಾಗ ಅಯ್ಯಯ್ಯೋ ಟಿಪ್ಪು ಇಂಗಿದ್ದನಾ... ನಮಗೆ ಗೊತ್ತೆ ಇಲ್ಲವಲ್ಲಾ... ನಮಗೆ ಚಿಕ್ಕಂದಿನಿಂದಲೂ ಬೇರೆ ರೀತಿ ಹೇಳಿಕೊಟ್ಟಿದ್ದಾರಲ್ಲಾ... ಹೀರೋ ಮಾಡಿ, ಅವರ ಹೆಸರಿನಲ್ಲಿ ಜಯಂತಿ ಆಚರಣೆ ಮಾಡಿದ್ದಾರಲ್ಲಾ... ಟಿಪ್ಪುವಿನಿಂದ ಆಕ್ರಮಣಕ್ಕೆ ಒಳಗಾಗಿ ತನ್ನ ಪರಂಪರೆಯ ಹಿರಿಯರೊಬ್ಬರನ್ನು ಕಳೆದುಕೊಂಡಿದ್ದವರೂ ಜಯಂತಿಯಲ್ಲಿ ಜೈಕಾರ ಕೂಗುವಂತೆ ಮಾಡಿದ್ದರಲ್ಲಾ ಇದು ಹೇಗೆ ಸಾಧ್ಯ. ಈ ರೀತಿಯ ಮೋಸಗೊಳಿಸುವ ಪರಂಪರೆ ಭಾರತದಲ್ಲಿ ಹೇಗೆ ಬೆಳೆದುಬಂದಿತು ಎಂಬುದನ್ನು ಯೋಚಿಸಬೇಕಾಗುತ್ತದೆ ಎಂದರು.

ಆದರೆ ಸತ್ಯದ ಅನಾವರಣವಾಗುತ್ತಿದ್ದಂತೆ ಎಷ್ಟು ಸುಳ್ಳುಗಳನ್ನು ಹೇಳಿದ್ದರು ಎಂಬುದು ಗೊತ್ತಾಗುತ್ತದೆ. ಎಲ್ಲಿಯವರೆಗೆ ಈ ಅಯೋಗ್ಯರು ಸುಳ್ಳು ಹೇಳಿದ್ದಾರೆ ಎಂದರೆ ನಮಗ್ಯಾರಿಗೂ ಈ ದೇಶ ಸ್ವಂತದಲ್ಲಾ... ಆರ್ಯರು ಈ ದೇಶಕ್ಕೆ ಹೊರಗಿನಿಂದ ಬಂದು ಮೂಲರಾಗಿದ್ದ ದ್ರಾವಿಡರನ್ನು ಕೆಳಗೆ ತಳ್ಳಿ ವ್ಯಾಪಿಸಿಕೊಂಡಿದ್ದಾರೆ ಎಂದಿದ್ದರು. ಅದಕ್ಕೆ ಬೇಕಾದಂತಹ ಪುರಾವೆಗಳನ್ನು ಸೃಷ್ಟಿ ಮಾಡಿದ್ದರು. ಆದರೆ ಕಾಲಕ್ರಮೇಣ ಸೃಷ್ಟಿ ಮಾಡಿದ್ದ ಪುರಾವೆಗಳು ಒಂದೊಂದೇ ಸುಳ್ಳಾಗುತ್ತಾ ಬಂದಾಗ ಹೊಸ ಚಿಂತನೆ ಕೊಟ್ಟರು. ಎಲ್ಲವೂ ಸುಳ್ಳೆಂದು ತಿಳಿದಾಗ ಬಹುಶಃ ಸುಳ್ಳಿರಬಹುದು. ಆದರೆ ಆರ್ಯರು ಬೇರೆ ಕಡೆಯಿಂದ ಬಂದಿದ್ದು ನಿಜ ಎನ್ನುತ್ತಾರೆ ಎಂದು ಕಿಡಿಕಾರಿದರು.

ರಾಮನ ಅಸ್ತಿತ್ವ ಕುರಿತು ದೊಡ್ಡ ಮಟ್ಟದಲ್ಲಿ ಚರ್ಚೆಯಾಗುವವರೆಗೂ ರಾಮ ಕಾಲ್ಪನಿಕ ವ್ಯಕ್ತಿ. ಆದರೆ ರಾಮ ಸೀತೆಯನ್ನು ಪರಿತ್ಯಾಗ ಮಾಡಿ ಕಾಡಿಗೆ ಕಳುಹಿಸಿದಾಗ ಅಯ್ಯೋ ಆತ ಎಷ್ಟು ಕೆಟ್ಟವನು ಎಂದು ರಾಮನನ್ನು ಜೀವಂತ ವ್ಯಕ್ತಿಯನ್ನಾಗಿಸುತ್ತಾರೆ. ತಮಗೆ ಬೇಕಾದಾಗ ಜೀವಂತ, ಬೇಡವಾದಾಗ ಕಾಲ್ಪನಿಕ ಎನ್ನುತ್ತಾರೆ. ಇದೆಲ್ಲದರ ನಡುವೆಯೂ ಕಾಲ್ಪನಿಕ ವ್ಯಕ್ತಿಯನ್ನು ಜೀವಂತವಾಗಿ ಉಳಿಸಿಕೊಂಡಿದ್ದು ಭಾರತೀಯ ಪರಂಪರೆ. ಮನೆ–ಮನೆಯಲ್ಲಿ ಮಕ್ಕಳಿಗೆ ಸೀತಾ–ರಾಮ ಎಂದು ಹೆಸರಿಡುವ ಮೂಲಕ ಉಳಿಸಿಕೊಂಡರು. ಮೇಲುಕೋಟೆ ಬ್ರಾಹ್ಮಣರು ಟಿಪ್ಪುವಿನ ದಾಳಿಗೊಳಗಾಗಿದ್ದರೂ ಕೆಲವೇ ವರ್ಷದಲ್ಲಿ ಟಿಪ್ಪುವನ್ನೇ ವೈಭವೀಕರಿಸಿ, ನಿಜವಾದ ಇತಿಹಾಸವನ್ನು ಮರೆಮಾಚುವ ಕೆಲಸ ನಡೆಯಿತು. ಆದರೆ ದಾಳಿಗೊಳಗಾಗಿ ಕುಟುಂಬದವರನ್ನು ಕಳೆದುಕೊಂಡವರು ದೀಪಾವಳಿ ಹಬ್ಬದ ದಿನದಂದು ದೀಪ ಹಚ್ಚದೆ ಸತ್ಯವನ್ನು ಇನ್ನೂ ಜೀವಂತವಾಗಿಟ್ಟಿದ್ದಾರೆ ಎಂದು ಸ್ಮರಿಸಿದರು.

‘ಟಿಪ್ಪು ನಿಜಕನಸುಗಳು’ ನಾಟಕ ಮಾಡಿರುವುದೇ ಒಂದು ಸಾಹಸ. ನಾಟಕವನ್ನು ಜನ ಸ್ವೀಕರಿಸಿದ್ದು, ಮೈಸೂರಿನಿಂದ ಬೀದರ್‌ವರೆಗೂ ಕಿಕ್ಕಿರಿದು ವೀಕ್ಷಣೆ ಮಾಡಿದ್ದಾರೆ. ನಾಟಕ ವೀಕ್ಷಣೆ ಮಾಡಿ, ಚರ್ಚೆ ಮಾಡಿದ್ದಾರೆ. ಎಂತಹ ದುಷ್ಟನು ಕಡೆಯಲ್ಲಿ ಕಷ್ಟಕ್ಕೆ ಸಿಲುಕಿದಾಗ ಅಯ್ಯಯ್ಯೋ ಈಗಾಯಿತಲ್ಲಾ ಎಂಬುದು ಹಿಂದೂ ಮೈಂಡ್ ಸೆಟ್ ಆಗಿದೆ. ಎಲ್ಲರೂ ಚೆನ್ನಾಗಿರಲಿ ಎಂಬುದೇ ಹಿಂದೂ ಮೈಂಡ್ ಸೆಟ್ ಎಂದರಲ್ಲದೆ 56 ಪ್ರದರ್ಶನಗಳು ಕಂಡಿರುವ ‘ಟಿಪ್ಪು ನಿಜಕನಸುಗಳು’ ನಾಟಕ ಇನ್ನೂ ನೂರಾರು ಪ್ರದರ್ಶನಗಳನ್ನು ಕಾಣಬೇಕು ಎಂದು ಆಶಿಸಿದರು.

ಮೈಸೂರು ಕಲಾ ಪ್ರತಿಷ್ಠಾನದ ಅಧ್ಯಕ್ಷ ಹನುಮಂತಾಚಾರ್ ಜೋಷಿ, ಕಾರ್ಯದರ್ಶಿ ಮಾಧುರ್ಯ ರಾಮಸ್ವಾಮಿ, ಚೇತನ್ ಮತ್ತಿತರರಿದ್ದರು.

ಟಿಪ್ಪು ಕೊಂದಿದ್ದು, ಉರಿಗೌಡ ಮತ್ತು ನಂಜೇಗೌಡರೇ...

ಟಿಪ್ಪು ಕೊಂದಿದ್ದು, ಉರಿಗೌಡ ಮತ್ತು ನಂಜೇಗೌಡರೇ. ಈ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ಮಾಡುವ ಪ್ರಯತ್ನವೂ ನಡೆಯುತ್ತಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಹೇಳಿದರು.

ಐ ಮಾ ಮುತ್ತಣ್ಣ(ಐಚೆಟ್ಟಿರ ಮಾ.ಮುತ್ತಣ್ಣ) ಅವರ ‘ಟಿಪ್ಪು ಆಕ್ರಾಂಯ್’ ಕೃತಿಯಲ್ಲಿ ಶ್ರೀರಂಗಪಟ್ಟಣದಲ್ಲಿ ಟಿಪ್ಪು ಸಾವಿಗೂ ಮುನ್ನ ಜನರ ಗುಂಪು ಹೆಚ್ಚಾಗಿತ್ತು. ಬ್ರಿಟಿಷರ ಆಕ್ರಮಣದಿಂದಾಗಿ ಜನರೆಲ್ಲರೂ ದಿಕ್ಕಾಪಾಲಾಗಿ ಓಡುತ್ತಿದ್ದರು. ಈ ವೇಳೆ ಗುಂಪಿನಲ್ಲಿದ್ದವರು ಟಿಪ್ಪುವನ್ನು ಕೊಂದಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಅದರಂತೆ ಟಿಪ್ಪು ಕೊಂದಿದ್ದು ಉರಿಗೌಡ ಮತ್ತು ನಂಜೇಗೌಡರೇ... ಒಕ್ಕಲಿಗರೇ ಟಿಪ್ಪು ಕೊಂದಿದ್ದು ಎಂದರು.

ಟಿಪ್ಪುಗೆ ಕಪಾಳಮೋಕ್ಷ...!

‘ಟಿಪ್ಪು ನಿಜಕನಸುಗಳು’ ನಾಟಕದಲ್ಲಿನ ತಮ್ಮ ಅನುಭವ ಹಂಚಿಕೊಂಡ ಟಿಪ್ಪು ಪಾತ್ರಧಾರಿ ಸಚಿನ್ ಮಿತ್ರ, ಹಾಸನದಲ್ಲಿ ನಾಟಕ ಮುಗಿದ ನಂತರ ಫೋಟೊ ತೆಗೆಸಿಕೊಳ್ಳುವ ನೆಪದಲ್ಲಿ ಹತ್ತಿರ ಬಂದಿದ್ದ ಮಹಿಳೆಯೊಬ್ಬರು ನನಗೆ ಬೇಜಾರು ಮಾಡಿಕೊಳ್ಳಬೇಡಿ ಎಂದು ನನ್ನ ಕಪಾಳಕ್ಕೆ ಹೊಡೆದಿದ್ದರು. ಯಾಕೆ ಎಂದು ಕೇಳಿದ್ದಕ್ಕೆ ಕ್ಷಮಿಸಿ ನಾನು ನಿಮಗೆ ಹೊಡೆದಿಲ್ಲ. ಟಿಪ್ಪುಗೆ ಹೊಡೆದದ್ದು ಎಂದಿದ್ದನ್ನು ಸ್ಮರಿಸಿದರು.

‘ಟಿಪ್ಪು ನಿಜಕನಸುಗಳು’ ನಾಟಕದ ಮೂಲಕ ನಾಟಕಕ್ಕೆ ಇಷ್ಟೊಂದು ಆಸಕ್ತಿ ಇದೆಯೇ ಎಂಬುದರ ಅರಿವಾಗಿದೆ. ಎಡ–ಬಲ ಎನ್ನದೆ ಸಾಕಷ್ಟು ಜನರು ನಾಟಕ ವೀಕ್ಷಣೆ ಮಾಡಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಅಲ್ಲದೆ ನಾಟಕದಲ್ಲಿ ಅಭಿನಯಿಸಿದ ಕೆಲ ಕಲಾವಿದರು ತಮ್ಮ ಅನುಭವ ಹಂಚಿಕೊಂಡರು.

ದಕ್ಷಿಣ ಕಾಶಿಯಲ್ಲಿ ವಿಜೃಂಭಣೆಯ ಶ್ರೀಕಂಠೇಶ್ವರಸ್ವಾಮಿ ತೆಪ್ಪೋತ್ಸವ





ನಂಜನಗೂಡು, ಏ.4– ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿಯಾಗಿರುವ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯವರ ದೊಡ್ಡ ಜಾತ್ರಾ ಮಹೋತ್ಸವದ ಪ್ರಯುಕ್ತ ಮಂಗಳವಾರ ರಾತ್ರಿ ಕಪಿಲಾ ನದಿಯಲ್ಲಿ ಶ್ರೀಯವರ ತೆಪ್ಪೋತ್ಸವ ಸಾವಿರಾರು ಭಕ್ತರ ಹರ್ಷೋದ್ಘಾರದ ನಡುವೆ ವಿಜೃಂಭಣೆಯಿಂದ ನಡೆಯಿತು.

ತೆಪ್ಪೋತ್ಸವ ಅಂಗವಾಗಿ ದೇವಾಲಯದಲ್ಲಿ ಶ್ರೀಕಂಠೇಶ್ವರಸ್ವಾಮಿಗೆ ಮುಂಜಾನೆಯೇ ವಿವಿಧ ಪೂಜಾ ಕೈಂಕರ್ಯ ನೆರವೇರಿಸಿ, ಮಹಾ ಮಂಗಳಾರತಿ ಬಳಿಕ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

ಚೂರ್ಣೋತ್ಸವ ಪೂರ್ವಕ ಅವಭೃತ ತೀರ್ಥ ಸ್ನಾನದ ಪ್ರಯುಕ್ತ ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಸಾವಿರಾರು ಭಕ್ತರು ಮುಂಜಾನೆಯಿಂದಲೇ ಕಪಿಲಾ ನದಿಯಲ್ಲಿ ತೀರ್ಥಸ್ನಾನ ಮಾಡಿ, ಉರುಳುಸೇವೆ ಧೂಪದೀಪ ಸೇವೆ ಮಾಡಿ, ಬೆಳ್ಳಿ ಹರಕೆ ಪದಾರ್ಥಗಳನ್ನು ಹುಂಡಿಯಲ್ಲಿ ಹಾಕಿ ಉದ್ದನೆಯ ಸರದಿ ಸಾಲಿನಲ್ಲಿ ನಿಂತು ಶ್ರೀಕಂಠೇಶ್ವರನ ದರ್ಶನ ಪಡೆದು ಹರಕೆ ತೀರಿಸಿದರು.

ರಾತ್ರಿ 7 ಗಂಟೆಗೆ ದೇವಾಲಯದಿಂದ ಶ್ರೀಕಂಠೇಶ್ವರಸ್ವಾಮಿ ಉತ್ಸವ ಮೂರ್ತಿಯನ್ನು ಮಂಗಳವಾದ್ಯದೊಡನೆ ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ತಂದು ಕಪಿಲಾ ನದಿ ದಡದಲ್ಲಿರುವ ಶಾಸ್ತ ಮಂಟಪದಲ್ಲಿ ಇರಿಸಲಾಯಿತು. ದೇಗುಲದ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ಹಾಗೂ ಅರ್ಚಕ ವೃಂದ ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ ಮೂರ್ತಿಗೆ ವಿವಿಧ ಧಾರ್ಮಿಕ ವಿಧಿವಿಧಾನ ಪೂರೈಸಿದ ನಂತರ ಕಪಿಲಾ ನದಿಯಲ್ಲಿನ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಯವರನ್ನು ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು.

ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ ಮೂರ್ತಿಯನ್ನು ವಿಶೇಷವಾಗಿ ವಜ್ರ-ವೈಢೂರ್ಯ, ಮುತ್ತು ಹವಳ, ನವರತ್ನಗಳಿಂದ ಶೃಂಗರಿಸಲಾಗಿತ್ತು. ಅಲ್ಲದೆ ನಾನಾ ಬಗೆಯ ವಿಶೇಷ ಹೂಗಳಿಂದ ತೇಲುವ ದೇವಾಲಯವನ್ನು ಅಲಂಕಾರಗೊಳಿಸಲಾಗಿತ್ತು. ಉತ್ಸವ ಮೂರ್ತಿ ಹೊತ್ತ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಯವರನ್ನು 3 ಪ್ರದಕ್ಷಿಣೆ ಹಾಕಲಾಯಿತು. ಒಂದೊಂದು ಪ್ರದಕ್ಷಿಣೆ ಹಾಕುವಾಗಲೂ ಸಹ ನದಿಯ ಎರಡೂ ದಡಯಲ್ಲಿ ನೆರದಿದ್ದ ಭಕ್ತರು ಈ ಮನೋಹರ ಮನಮೋಹಕ ದೃಶ್ಯ ಕಣ್ತುಂಬಿಕೊಂಡು ಕರತಾಡನ, ಜೈಕಾರ ಹಾಕಿ ಸಂಭ್ರಮಿಸಿದರು.

ಇದೇ ವೇಳೆ ಕಪಿಲಾ ನದಿಯ ಹೆಜ್ಜಿಗೆ ಗ್ರಾಮದ ದಡದಲ್ಲಿ ಪಟಾಕಿ ಸಿಡಿಸಿ ಭಕ್ತರು ಸಂಭ್ರಮಾಚರಣೆ ನಡೆಸಿದರು. ಈ ವೇಳೆ ಬಾನಲ್ಲಿ ಮೂಡಿದ ಬೆಳಕಿನ ಚಿತ್ತಾರ ಕಂಡು ಭಕ್ತರು ಹರ್ಷ ವ್ಯಕ್ತಪಡಿಸಿದರು. ತೆಪ್ಪೋತ್ಸವದ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳು ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿದರು.

ತೆಪ್ಪೋತ್ಸವದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಈ ವೇಳೆ ಸುಮಾರು 60 ಸಾವಿರಕ್ಕೂ ಹೆಚ್ಚು ಮಂದಿ ತಪ್ಪೋತ್ಸವಕ್ಕೆ ಸಾಕ್ಷಿಯಾಗಿದ್ದರು.

ಈ ವೇಳೆ ದೇವಾಲಯದ ಜಗದೀಶ್, ಎಇಓ ವೆಂಕಟೇಶ್ ಪ್ರಸಾದ್, ದೇಗುಲದ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ಸೇರಿದಂತೆ ಇತರರಿದ್ದರು.

ಬಿ.ಮಟಕೆರೆಯಲ್ಲಿ ಮಹಾವೀರ ಜಯಂತಿ



ಸರಗೂರು, ಏ.4– ಅಹಿಂಸೆ, ಸತ್ಯ, ಕಳ್ಳತನ ಮಾಡಬಾರದು, ಅವಶ್ಯಕತೆಗಿಂತ ಹೆಚ್ಚಿನ ಸಂಪತ್ತನ್ನು ಹೊಂದಬಾರದು, ಇಂದ್ರೀಯಗಳನ್ನು ನಿಗ್ರಹಿಸುವುದು ಜೈನ ಧರ್ಮದ ತತ್ವಗಳಾಗಿವೆ ಎಂದು ಬಿ.ಮಟಕೆರೆ ಪಾರ್ಶ್ವನಾಥಸ್ವಾಮಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಜಿ.ಕೃಷ್ಣ ತಿಳಿಸಿದರು.

ತಾಲೂಕಿನ ಬಿ.ಮಟಕೆರೆ ಪಾರ್ಶ್ವನಾಥಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ನಡೆದ ಮಹಾವೀರ ಜಯಂತಿಯಲ್ಲಿ ಮಾತನಾಡಿದ ಅವರು, ಜೈನ ಧರ್ಮ ಕಾಲವನ್ನು ಉತ್ಸರ್ಪಿಣಿ, ಅವಸರ್ಪಿಣಿ ಎಂದು 2 ಭಾಗಗಳಾಗಿ ವಿಂಗಡಿಸಿದೆ. ಒಂದೊಂದರಲ್ಲೂ 24 ತೀರ್ಥಂಕರರು ಆವಿರ್ಭವಿಸುವರು ಎಂದು ತಿಳಿಸಿದರು.

ಇದೇ ವೇಳೆ ಜೈನ ಬಂಧುಗಳು ಹಾಗೂ ಶ್ರಾವಕ, ಶ್ರಾವಕಿಯರು ಭಕ್ತಿಭಾವದಿಂದ ಮಹಾವೀರ ಜಯಂತಿ ಆಚರಿಸಿದರು. ಈ ವೇಳೆ ದೇವಸ್ಥಾನ ಟ್ರಸ್ಟ್ ಕಾರ್ಯದರ್ಶಿ ಗುಣಪಾಲ್, ಎಂ.ಬಿ.ಕೆಂಪರಾಜು, ಅಭಿಕುಮಾರ್, ರತ್ನಯ್ಯ, ವರ್ಧಮಾನ ಕುಮಾರ್, ವಿಜಯೇಂದ್ರ, ಆನಂದಕುಮಾರ್, ಚಿಕ್ಕಸ್ವಾಮಿ, ಎಚ್.ಪಿ.ಗೋವಿಂದಪ್ಪ, ಅಜಿತ್ ಕುಮಾರ್, ಎಚ್.ಪಿ.ನಾಗೇಂದ್ರ ಮಹಾವೀರ ಹಾಗೂ ಜೈನ ಸಮಾಜದವರು ಹಾಜರಿದ್ದರು.

ಮಾದಿಗ ಸಮುದಾಯಕ್ಕೆ ಬಿಜೆಪಿ ಟಿಕೆಟ್ ನೀಡಲು ಮನವಿ



ತಿ.ನರಸೀಪುರ, ಏ.4– ಈ ಬಾರಿಯ ಚುನಾವಣೆಯಲ್ಲಿ ಮಾದಿಗ ಸಮುದಾಯಕ್ಕೆ ತಿ.ನರಸೀಪುರ ಕ್ಷೇತ್ರದ ಬಿಜೆಪಿ ಟಿಕೆಟ್ ನೀಡುವಂತೆ ಪಕ್ಷದ ವರಿಷ್ಠರಿಗೆ ತಾಲೂಕು ಬಾಬು ಜಗಜೀವನರಾಂ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ ಮನವಿ ಮಾಡಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ತಿ.ನರಸೀಪುರ, ನಂಜನಗೂಡು ಹಾಗೂ ಕೊಳ್ಳೇಗಾಲ ಮೀಸಲು ಕ್ಷೇತ್ರಗಳಾಗಿವೆ. ಈ ಕ್ಷೇತ್ರಗಳ ಪೈಕಿ ತಿ.ನರಸೀಪುರದಲ್ಲಿ ಮಾದಿಗ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹೀಗಾಗಿ ಪಕ್ಷದ ವರಿಷ್ಠರು ಸಾಮಾಜಿಕ ನ್ಯಾಯದಡಿ ಮಾದಿಗ ಸಮುದಾಯಕ್ಕೆ ಈ ಬಾರಿ ಟಿಕೆಟ್ ನೀಡಿದರೆ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ ಎಂದರು.

ಸಂಘದ ಖಜಾಂಚಿ ಬಿ.ಎಲ್.ಮಹದೇವ್ ಮಾತನಾಡಿ, ಎಡಗೈ ಸಮುದಾಯದವರು ಮಂಡ್ಯ, ಚಾಮರಾಜನಗರ, ಮೈಸೂರಲ್ಲಿ ಬಹುಸಂಖ್ಯಾತರಾಗಿದ್ದು, ನಮಗೆ ಯಾವುದೇ ರಾಜಕೀಯ ಪಕ್ಷಗಳು ಟಿಕೆಟ್ ನೀಡಿಲ್ಲ. ಈ ಹಿಂದೆ ನಡೆದ ಚುನಾವಣೆಯಲ್ಲಿ ಶಂಕರ್ ಹಾಗೂ ಸಿ.ರಮೇಶ್‌ಗೆ ಬಿಜೆಪಿ ಟಿಕೆಟ್ ಕೊಟ್ಟು ಸಹಕಾರ ನೀಡಿದೆ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದಿಂದ ಈಗಾಗಲೇ ಅಭ್ಯರ್ಥಿ ಘೋಷಣೆಯಾಗಿರುವುದರಿಂದ ಬಿಜೆಪಿ ಪಕ್ಷದ ಟಿಕೆಟ್ ನೀಡಿ ನ್ಯಾಯ ದೊರಕಿಸಿಕೊಡಬೇಕು ಎಂದರು.

ಹಾಗೆಯೇ ಮೀಸಲಾತಿ ವರ್ಗೀಕರಣ ಮಾಡುವಂತೆ ಕಳೆದ 25 ವರ್ಷಗಳಿಂದ ನಿರಂತರ ಹೋರಾಟ ಮಾಡಿದ ಫಲವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಶೇ.6ರಷ್ಟು ಮೀಸಲಾತಿ ನೀಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದಕ್ಕೆ ತಾಲೂಕು ಬಾಬು ಜಗಜೀವನರಾಂ ಸಂಘ ಅಭಿನಂದನೆ ಸಲ್ಲಿಸುತ್ತದೆ ಎಂದರು. ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎನ್. ಪುಟ್ಟಸ್ವಾಮಿ, ನಿರ್ದೇಶಕರಾದ ಕೆ.ಸಿ.ಲಿಂಗರಾಜು, ವಿಶ್ವ ಪ್ರುಟ್ಟಿ ಶಂಭುಯ್ಯ, ಎಂ.ಚಿನ್ನಸ್ವಾಮಿ, ಗ್ರಾಪಂ ಸದಸ್ಯ ಶಿವರಾಜ್, ಮಹದೇವ್, ಹುಣಸೂರು ರಾಚಪ್ಪ, ಭೈರಾಪುರ ರಜನಿ ಸುದ್ದಿಗೋಷ್ಠಿಯಲ್ಲಿದ್ದರು.

ಹೆಚ್‌ಡಿಕೆ ಸಮ್ಮುಖದಲ್ಲಿ ಅಚ್ಚುತಾನಂದ ಜೆಡಿಎಸ್‌ಗೆ ಸೇರ್ಪಡೆ




ಕೆ.ಆರ್.ನಗರ, ಏ.4– ಜಿಪಂ ಮಾಜಿ ಸದಸ್ಯ ಅಚ್ಚುತಾನಂದ ಹಾಗೂ ತಾಪಂ ಮಾಜಿ ಸದಸ್ಯ ಹಂಗರಬಾಯನಹಳ್ಳಿ ತಮ್ಮಣ್ಣ ಸೇರಿದಂತೆ ಅನೇಕ ಬೆಂಬಲಿಗರು ರಾಮನಗರ ಜಿಲ್ಲೆ ಕೇತಗಾನಹಳ್ಳಿಯಲ್ಲಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರ ತೋಟದ ನಿವಾಸದಲ್ಲಿ ಶಾಸಕ ಸಾ.ರಾ.ಮಹೇಶ್ ನೇತೃತ್ವದಲ್ಲಿ ಅಧಿಕೃತವಾಗಿ ಜೆಡಿಎಸ್‌ಗೆ ಸೇರ್ಪಡೆಯಾದರು.

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಪಕ್ಷದ ಶಾಲು ಹಾಕಿ ಹಾಗೂ ಭಾರೀ ಗಾತ್ರದ ಹಾರಹಾಕಿ ಸ್ವಾಗತಿಸಿ ಪಕ್ಷಕ್ಕೆ ಬರಮಾಡಿಕೊಂಡರು. ನಂತರ ಮಾತನಾಡಿದ ಕುಮಾರಸ್ವಾಮಿ, ಅಚ್ಚುತಾನಂದ ಅವರು ಕಳೆದ 3 ವರ್ಷಗಳ ಹಿಂದೆಯೇ ಪಕ್ಷಕ್ಕೆ ಸೇರ್ಪಡೆಯಾಗಬೇಕಿತ್ತು. ಆದರೆ ಇಂದು ಸೇರ್ಪಡೆಯಾಗಿದ್ದಾರೆ. ಅವರನ್ನು ಪಕ್ಷದ ಪರವಾಗಿ ಆತ್ಮೀಯವಾಗಿ ಸ್ವಾಗತಿಸುತ್ತೇನೆ. ಪಕ್ಷದಲ್ಲಿ ಇವರಿಗೆ ಉತ್ತಮ ಸ್ಥಾನಮಾನ ನೀಡಿ, ಇವರ ಸಂಪೂರ್ಣ ಜವಾಬ್ದಾರಿ ನಾವೇ ವಹಿಸಿಕೊಳ್ಳುತ್ತೇವೆ ಎಂದರು.

ಜಿಪಂ ಮಾಜಿ ಸದಸ್ಯ ಅಚ್ಚುತಾನಂದ ಮಾತನಾಡಿ, ರಾಜ್ಯದ ರೈತರ 25 ಸಾವಿರ ಕೋಟಿ ಸಾಲ ಮನ್ನಾ ಮಾಡಿರುವ ಪಕ್ಷವೆಂದರೆ ಅದು ಜೆಡಿಎಸ್ ಪಕ್ಷ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು ರೈತರ ಮೇಲೆ ಇಟ್ಟಿರುವಂತ ಕಾಳಜಿ ಹಾಗೂ ಅವರ ಪಂಚರತ್ನ ಯೋಜನೆಗಳು ನನಗೆ ಇಷ್ಟವಾಯಿತು. ಅಲ್ಲದೇ ಶಾಸಕ ಸಾ.ರಾ. ಮಹೇಶ್ ಅವರು ಕೋವಿಡ್ ಸಮಯದಲ್ಲಿ ಬಡವರಿಗೆ ಸುಮಾರು 75 ಸಾವಿರ ಕಿಟ್ ವಿತರಿಸಿದರಲ್ಲದೇ, ಜನರ ಜೀವ ಉಳಿಸಲು ತಮ್ಮ ಸ್ವಂತ ಹಣದಲ್ಲಿ ಕೋವಿಡ್ ಆಸ್ಪತ್ರೆ ತೆರೆದರು. ತಾಲೂಕಿನ ಸಮಗ್ರ ಅಭಿವೃದ್ಧಿಗೆ ಶ್ರಮಿಸಿರುವ ಶಾಸಕ ಸಾ.ರಾ.ಮಹೇಶ್ ಅವರ ಕಾಳಜಿ ಮೆಚ್ಚಿ ಕುಮಾರಸ್ವಾಮಿ ಸಮ್ಮುಖದಲ್ಲಿ ಜೆಡಿಎಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದೇನೆ ಎಂದರು.

ಶಾಸಕ ಸಾ.ರಾ.ಮಹೇಶ್ ಮಾತನಾಡಿದರು. ಈ ವೇಳೆ ತಾಪಂ ಮಾಜಿ ಸದಸ್ಯ ತಮ್ಮಣ್ಣ ಜೆಡಿಎಸ್ ರಾಜ್ಯ ಕಾರ್ಯದರ್ಶಿ ಚಂದ್ರಶೇಖರ್, ದಲಿತ ಮುಖಂಡ ನಾಗರಾಜ್, ಜಿಪಂ ಮಾಜಿ ಸದಸ್ಯ ಎಂ.ಟಿ. ಕುಮಾರ್, ಸಾಲಿಗ್ರಾಮ ಜೆಡಿಎಸ್ ಅಧ್ಯಕ್ಷ ಮೆಡಿಕಲ್ ರಾಜಣ್ಣ, ತಾಲೂಕು ಎಸ್ಸಿ ಘಟಕದ ಅಧ್ಯಕ್ಷ ಶ್ರೀನಿವಾಸ್ ಇತರರಿದ್ದರು.



ಹುಣಸೂರಿನ ನಗರಸಭಾ ಸದಸ್ಯ ಹರೀಶ್ ಅವರು ಮಂಗಳವಾರ ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಬಿಜೆಪಿ ತೊರೆದು ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಟಿಂಬರ್ ಜಗದೀಶ್, ಕಲ್ಲುಣಿಕೆ ಹರೀಶ್, ರವೀಶ್ ಮತ್ತಿತರರಿದ್ದರು.

ಬಸ್‌ನಲ್ಲಿ ಸಿಕ್ಕ ಮಾಂಗಲ್ಯ ಸರ ಹಿಂತಿರುಗಿಸಿ ಪ್ರಾಮಾಣಿಕತೆ ಮೆರೆದ ಬಸ್ ಚಾಲಕ, ನಿರ್ವಾಹಕ



ಹುಣಸೂರು, ಏ.4– ಬಸ್‌ನಲ್ಲಿ ಸಿಕ್ಕ ಮಾಂಗಲ್ಯ ಸರವನ್ನು ವಾರಸುದಾರರಿಗೆ ಒಪ್ಪಿಸುವ ಮೂಲಕ ಸಾರಿಗೆ ಬಸ್ ಚಾಲಕ ಹಾಗೂ ನಿರ್ವಾಹಕ ಪ್ರಾಮಾಣಿಕತೆ ಮೆರೆದಿದ್ದಾರೆ.

ಹುಣಸೂರು ಡಿಪೋಗೆ ಸೇರಿದ ಹುಣಸೂರು-ಕೊಯಮತ್ತೂರು ಮಾರ್ಗದ ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕ ತಾಂಡವಮೂರ್ತಿ, ಚಾಲಕ ಆರ್.ಪಿ.ಶಿವಕುಮಾರ್ ಮಾಂಗಲ್ಯ ಸರ ಹಿಂತಿರುಗಿಸಿ ಪ್ರಾಮಾಣಿಕತೆ ಮೆರೆದು ಸಾರ್ವಜನಿಕರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಸರ ಕಳೆದುಕೊಂಡಿದ್ದ ನಂಜನಗೂಡು ತಾಲೂಕಿನ ಸುತ್ತೂರಿನ ನಿವಾಸಿ ಮಧು ಅವರ ಪತ್ನಿ, ಸುಮಾ ಮತ್ತೆ ಮಾಂಗಲ್ಯ ಸರ ಪಡೆದ ಗೃಹಿಣಿ.

ವಿವರ: ಏ.1ರಂದು ಬೆಳಗ್ಗೆ ಸುಮಾ ಸಾರಿಗೆ ಬಸ್‌ನಲ್ಲಿ ನಂಜನಗೂಡಿನಿಂದ ಚಾಮರಾಜನಗರಕ್ಕೆ ಪ್ರಯಾಣಿಸಿದ್ದರು. ಬಸ್ ಇಳಿದ ನಂತರ ಮಾಂಗಲ್ಯ ಸರ ಇಲ್ಲದನ್ನು ಕಂಡು ಗಾಬರಿಯಾಗಿ ಚಾಮರಾಜನಗರ ಬಸ್ ನಿಲ್ದಾಣದಲ್ಲಿ ಕಂಡಕ್ಟರ್ ನಂಬರ್ ಪಡೆದು ಸಂಪರ್ಕಿಸಿ, ಸರ ಕಳೆದುಕೊಂಡಿರುವ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ ಅದಾಗಲೆ ಬಸ್ ಕೊಯಮತ್ತೂರು ತಲುಪಿತ್ತು. ನಿರ್ವಾಹಕ ತಾಂಡವಮೂರ್ತಿ, ಚಾಲಕ ಶಿವಕುಮಾರ್ ಸುಮಾ ಕುಳಿತಿದ್ದ ಸೀಟ್ ಬಳಿ ಹುಡುಕಲಾಗಿ ಸೀಟ್ ಕೆಳಗೆ ಮಾಂಗಲ್ಯದ ಸರ ಸಿಕ್ಕಿತು. ಬಸ್ ಚಾಮರಾಜನಗರಕ್ಕೆ ವಾಪಸ್ ಬಂದ ನಂತರ ಹುಣಸೂರು ಡಿಪೋ ಮ್ಯಾನೇಜರ್ ಸೂಚನೆಯಂತೆ ಚಾಮರಾಜನಗರ ಡಿಪೋ ಮ್ಯಾನೇಜರ್ ಕುಮಾರನಾಯ್ಕ ಅವರ ಮೂಲಕ ಮಾಂಗಲ್ಯ ಸರ ಒಪ್ಪಿಸಿದರು.

ಕೃತಜ್ಞತೆ: ಸುಮಾ ಅವರು ಚಾಲಕ-ನಿರ್ವಾಹಕರಿಗೆ ಕೃತಜ್ಞತೆ ಸಲ್ಲಿಸಿದರೆ, ಇಲ್ಲಿನ ಡಿಪೋ ಮ್ಯಾನೇಜರ್ ಹಾಗೂ ಅಧಿಕಾರಿಗಳು ಸಿಬ್ಬಂದಿ ಸಹ ಅಭಿನಂದನೆ ಸಲ್ಲಿಸಿದ್ದಾರೆ.

ಪಿರಿಯಾಪಟ್ಟಣ ಕರ್ನಾಟಕ ಪ್ರೆಸ್‌ಕ್ಲಬ್‌ಗೆ ಶಿವದೇವ್ ಅಧ್ಯಕ್ಷ



ಬೆಟ್ಟದಪುರ, ಏ.4– ಕರ್ನಾಟಕ ಪ್ರೆಸ್ ಕ್ಲಬ್ ಪಿರಿಯಾಪಟ್ಟಣ ತಾಲೂಕು ಅಧ್ಯಕ್ಷರಾಗಿ ಬೆಟ್ಟದಪುರದ 'ಮೈಸೂರು ಮಿತ್ರ' ವರದಿಗಾರ ಶಿವದೇವ್ ಆಯ್ಕೆಯಾಗಿದ್ದಾರೆ.

ಉಳಿದಂತೆ ಗೌರವಾಧ್ಯಕ್ಷರಾಗಿ ಡಿ. ದೇವಣ್ಣ ಗೌರು ಸಲಹೆಗಾರರಾಗಿ ಹೆಚ್.ಡಿ. ರಮೇಶ್, ಉಪಾಧ್ಯಕ್ಷರಾಗಿ ಅರುಣ್, ಪ್ರಧಾನ ಕಾರ್ಯದರ್ಶಿಯಾಗಿ ಟಿ.ಸಿ. ಹರೀಶ್, ಸಹ ಕಾರ್ಯದರ್ಶಿಯಾಗಿ ಅಣ್ಣಪ್ಪ, ಖಜಾಂಚಿಯಾಗಿ ನಾರಾಯಣ, ಜಿಲ್ಲೆ ಸಂಚಾಲಕರಾಗಿ ಎನ್.ಪಿ.ಹರೀಶ್, ನಿರ್ದೇಶಕರಾಗಿ ಅನಂತ್‌ಕುಮಾರ್, ಕುಮಾರಸ್ವಾಮಿ, ಮಂಜೇಶ್, ವಿಜೇತ್ ಕುಮಾರ್, ಮಂಜುನಾಥ್, ಗೋವಿಂದ ರಾಜೇಶ್, ಬಸುರಾಜ್, ಆನಂದ್ ಕುಮಾರ್ ಆಯ್ಕೆಯಾಗಿದ್ದಾರೆ ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ದಯಾನಂದ ತಿಳಿಸಿದ್ದಾರೆ.

ಸಿಯುಇಟಿ-ಯುಜಿ: 14 ಲಕ್ಷ ಅರ್ಜಿ ಸಲ್ಲಿಕೆ

ನವದೆಹಲಿ: ಈ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಯುಇಟಿ-ಯುಜಿ) ಸುಮಾರು 14 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಕಳೆದ ಶೈಕ್ಷಣಿಕ ಸಾಲಿನಲ್ಲಿ ಸಲ್ಲಿಕೆಯಾಗಿದ್ದ ಒಟ್ಟು ಅರ್ಜಿಗಳ ಸಂಖ್ಯೆಗೆ ಹೋಲಿಸಿದರೆ ಈ ಬಾರಿ ಶೇ 41ರಷ್ಟು ಅರ್ಜಿಗಳು ಹೆಚ್ಚಾಗಿವೆ ಎಂದು ಯುಜಿಸಿ ಮುಖ್ಯಸ್ಥ ಎಂ. ಜಗದೀಶ್‌ಕುಮಾರ್ ಹೇಳಿದ್ದಾರೆ.

ನನ್ನ ಅಧಿಕಾರವಧಿಯಲ್ಲಿ ಒಂದಿಂಚು ಭೂಮಿ ಸಂಪಾದಿಸಿಲ್ಲ

ಚುನಾವಣಾ ಪ್ರಚಾರ ಸಭೆಯಲ್ಲಿ ಶಾಸಕ ಬಿ.ಹರ್ಷವರ್ಧನ್



ನಂಜನಗೂಡು, ಏ.4– ನಾನು ಹಣ, ಆಸ್ತಿ ಮಾಡಲು ರಾಜಕಾರಣಕ್ಕೆ ಬಂದಿಲ್ಲ. ನನ್ನ ಅಧಿಕಾರವಧಿಯಲ್ಲಿ ಒಂದಿಂಚು ಭೂಮಿ ಸಂಪಾದಿಸಿಲ್ಲ. ಆದರೆ ಕ್ಷೇತ್ರದಲ್ಲಿ ಈ ಹಿಂದಿನ ಯಾವ ಶಾಸಕರೂ ಮಾಡದಷ್ಟು ಅಭಿವೃದ್ಧಿ ಕೆಲಸ ಮಾಡಿರುವ ನನಗೆ ಚುನಾವಣೆಯಲ್ಲಿ ಮತಗಳ ರೂಪದಲ್ಲಿ ಕೂಲಿ ಕೊಟ್ಟು ನಿಮ್ಮ ಸೇವೆ ಮಾಡಲು ಮತ್ತೊಂದು ಅವಕಾಶ ಮಾಡಿಕೊಡುವಂತೆ ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ತಾಲೂಕಿನ ಹೆಮ್ಮರಗಾಲದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಉಪ್ಪಾರ ಸಮುದಾಯದ ಅಭಿವೃದ್ಧಿಗೆ ವಿ.ಶ್ರೀನಿವಾಸ ಪ್ರಸಾದ್ ಸಾಕಷ್ಟು ಶ್ರಮಿಸಿದ್ದಾರೆ. ವಿ.ಶ್ರೀನಿವಾಸ ಪ್ರಸಾದ್, ಪುಟ್ಟರಂಗಶೆಟ್ಟಿ ನಡುವೆ ಗುರುಶಿಷ್ಯರ ಸಂಬಂಧವಿದ್ದು, ಪುಟ್ಟರಂಗಶೆಟ್ಟಿ ಅವರಿಗೆ ಜಿಪಂ, ವಿಧಾನಸಭಾ ಟಿಕೆಟ್ ಕೊಡಿಸಿದವರು ಪ್ರಸಾದ್, ತಾಲೂಕಿನಲ್ಲಿ ಸುಸಜ್ಜಿತ ಸಮುದಾಯ ಭವನ ನಿರ್ಮಿಸಲು 20 ಗುಂಟೆ ಜಾಗ ನೀಡಿ 2 ಕೋಟಿ ಅನುದಾನ ನೀಡಿದ್ದಾರೆ. ಅಲ್ಲದೆ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಹುಂಡಿ ಹಣದಿಂದ 13 ಸಮುದಾಯ ಭವನಗಳಿಗೂ ಹಣ ನೀಡಲಾಗಿದೆ ಎಂದ ಅವರು, ನಾನು ಶಾಸಕನಾದ ಮೇಲೆ ಹೆಮ್ಮರಗಾಲಕ್ಕೆ 5 ಕೋಟಿ ಅನುದಾನ ನೀಡಿ ಚರಂಡಿ, ಸಿಸಿ ರಸ್ತೆ ನಿರ್ಮಿಸಿದ್ದೇನೆ. ಮುಖ್ಯರಸ್ತೆ ಅಭಿವೃದ್ಧಿ ಪಡಿಸಿದ್ದೇನೆ ಎಂದರು.

ನಾನು ಹಣ, ಆಸ್ತಿ ಮಾಡಲು ರಾಜಕಾರಣ ಮಾಡುತ್ತಿಲ್ಲ. ನಮಗೆ ನಮ್ಮದೇ ಆದ ರಾಜಕೀಯ ಹಿನ್ನೆಲೆ ಇದೆ. ಬಸವಲಿಂಗಪ್ಪ ಮತ್ತು ವಿ.ಶ್ರೀನಿವಾಸಪ್ರಸಾದ್ ಅವರಿಗೆ ಜನರೇ ದೊಡ್ಡ ಆಸ್ತಿ. ಅವರ ಆಸ್ತಿ ಮೇಲೆ ದೊಡ್ಡ ಕಣ್ಣಿದೆ. ಕಳೆದ 5 ವರ್ಷಗಳಲ್ಲಿ ಎಲ್ಲೂ ಹುಸಿ ಭರವಸೆಗಳನ್ನು ನೀಡಿಲ್ಲ. ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇನೆ. ಕ್ಷೇತ್ರದಲ್ಲಿ ನಾನು ಮಾಡಿರುವ ಅಭಿವೃದ್ಧಿ ಕೆಲಸಗಳು ಕಣ್ಮುಂದೆ ಕಾಣುತ್ತಿವೆ. ಆದ್ದರಿಂದಲೇ ನಿಮ್ಮಲ್ಲಿ ಮತ ಕೇಳುತ್ತಿದ್ದೇನೆ ಎಂದ ಅವರು, ಈ ಚುನಾವಣೆ ವಿ.ಶ್ರೀನಿವಾಸಪ್ರಸಾದ್ ಕೊನೆ ಚುನಾವಣೆಯಾಗಿದ್ದು ಅವರಿಗೆ ಗೆಲುವಿನ ಉಡುಗೊರೆಯಾಗಿ ನನಗೆ ಮತ್ತೊಮ್ಮೆ ಆಶೀರ್ವಾದ ಮಾಡುವಂತೆ ಮನವಿ ಮಾಡಿದರು.

ಬಿಜೆಪಿ ಹಿಂದುಳಿದ ವರ್ಗಗಳ ಪ್ರಧಾನ ಕಾರ್ಯದರ್ಶಿ ಸೋಮಣ್ಣ ಮಾತನಾಡಿದರು. ಈ ವೇಳೆ ತಾಲೂಕಿನ ನೇರಳೆ, ಹಂಪಾಪುರ, ಹಳೇಪುರ, ಭುಜಂಗಯ್ಯನಹುಂಡಿ, ಬಸವಟ್ಟಿಗೆ, ಬದನವಾಳು, ವೀರದೇವನಪುರ, ಚಿನ್ನದಗುಡಿ ಹುಂಡಿ, ಮಹದೇವನಗರ ಗ್ರಾಮಗಳಲ್ಲಿ ಶಾಸಕ ಹರ್ಷವರ್ಧನ್ ಪ್ರಚಾರ ನಡೆಸಿದರು.

ಈ ಸಂದರ್ಭ ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್. ಮಹದೇವಪ್ಪ, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ತಾಪಂ ಮಾಜಿ ಸದಸ್ಯ ಶಿವಣ್ಣ, ಬಿ.ಎಸ್.ರಾಮು, ಮುಖಂಡರಾದ ರಂಗನಾಥ್, ಮಂಜು, ಮಂಜುನಾಥ್, ಮಹದೇವು, ಸಿದ್ದರಾಜು, ಮಹದೇವಸ್ವಾಮಿ, ಗಂಗಾಧರ್, ನವೀನ್‌ರಾಜ್, ಪ್ರಜ್ವಲ್ ಶಶಿ ಸೇರಿದಂತೆ ಇತರರಿದ್ದರು.

ತಂದೆ ಕನಸು ನನಸು ಮಾಡಲು ಆಶೀರ್ವದಿಸಿ: ದರ್ಶನ್ ಧ್ರುವ



ಮಲ್ಲುಂಡಿ, ಏ.4– ನನ್ನ ತಂದೆ, ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರು ನಂಜನಗೂಡನ್ನು ರಾಜ್ಯದಲ್ಲೇ ಮಾದರಿ ಕ್ಷೇತ್ರವನ್ನಾಗಿ ಮಾಡುವ ಕನಸು ಕಂಡಿದ್ದರು. ಅವರ ಕನಸ್ಸನ್ನು ನನಸು ಮಾಡುವ ಜವಾಬ್ದಾರಿ ನನ್ನ ಮೇಲಿದೆ. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ನನಗೆ ಆಶೀರ್ವದಿಸಿ ಎಂದು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ಮನವಿ ಮಾಡಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಕುರಿಹುಂಡಿ, ತರಗನಹಳ್ಳಿ, ಕಪ್ಪಸೋಗೆ, ಚಂದ್ರವಾಡಿ, ನೆಲ್ಲಿತಾಳಪುರ, ರಾಜೂರು, ಕಡಬೂರು ಗ್ರಾಮಗಳಲ್ಲಿ ಚುನಾವಣಾ ಪ್ರಚಾರ ಕೈಗೊಂಡು ಮಾತನಾಡಿದ ಅವರು, ರಾಜ್ಯ ಬಿಜೆಪಿ ಸರ್ಕಾರ ಬಡವರ ಪರ ಯಾವುದೇ ಯೋಜನೆ ಜಾರಿಗೊಳಿಸಿಲ್ಲ. ಬರೀ ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದು ಪೆಟ್ರೋಲ್, ಡೀಸೆಲ್ ಸೇರಿದಂತೆ ದಿನಬಳಕೆಯ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿದೆ. ನನ್ನ ತಂದೆ ಧ್ರುವನಾರಾಯಣ್ ಸಂಸದರಾಗಿದ್ದ ವೇಳೆ ಕ್ಷೇತ್ರದಲ್ಲಿ ಹಲವು ಜನಪರ ಹಾಗೂ ಬಡವರ ಪರ ಕೆಲಸ ಮಾಡಿದ್ದಾರೆ. ಇದೀಗ ನಾನೂ ಸಹ ಅವರ ಹಾದಿಯಲ್ಲೇ ಸಾಗಿ ನಿಮ್ಮ ಸೇವೆ ಮಾಡಲು ಒಂದು ಅವಕಾಶ ಮಾಡಿಕೊಡಿ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ದಿ.ಆರ್.ಧ್ರುವನಾರಾಯಣ್ ಅವರ ಸಾವು ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಧ್ರುವನಾರಾಯಣ್ ಅವರು ಬಡವರು, ರೈತರು ಸೇರಿದಂತೆ ಎಲ್ಲಾ ವರ್ಗದವರ ಪರ ಕೆಲಸ ಮಾಡಿದ್ದರು. ಕ್ಷೇತ್ರದ ಜನತೆ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರು ನಂಜನಗೂಡನ್ನು ರಾಜ್ಯದಲ್ಲೇ ಮಾದರಿ ಕ್ಷೇತ್ರ ಮಾಡುವ ಕನಸು ಕಂಡಿದ್ದರು. ಆದರೆ ದೇವರು ಅವರನ್ನು ನಮ್ಮಿಂದ ದೂರ ಮಾಡಿದರು. ಹೀಗಾಗಿ ಅವರ ಆಸೆಯನ್ನ ಈಡೇರಿಸಲು ಅವರ ಪುತ್ರ ದರ್ಶನ್ ಆಗಮಿಸಿದ್ದು, ಈ ಬಾರಿಯ ಚುನಾವಣೆಯಲ್ಲಿ ಅವರನ್ನು ಆಯ್ಕೆ ಮಾಡಿ ಕಳುಹಿಸುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದ ಅವರು, ದರ್ಶನ್ ಧ್ರುವನಾರಾಯಣ್ ಅವರ ಮಗನಲ್ಲ. ಕ್ಷೇತ್ರದ ಪ್ರತಿಯೊಬ್ಬರ ಮನೆ ಮಗನಾಗಿದ್ದಾನೆ. ಧ್ರುವನಾರಾಯಣ್ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಈ ಬಾರಿ ದರ್ಶನ್ ಅವರನ್ನು ಆಯ್ಕೆ ಮಾಡಲು ಶ್ರಮಿಸುವಂತೆ ಕಣ್ಣೀರಿಟ್ಟು ಭಾವುಕರಾದರು.

ಈ ವೇಳೆ ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಶ್ರೀಕಂಠು, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಎಸ್ಸಿ ಘಟಕದ ಜಿಲ್ಲಾ ಉಪಾಧ್ಯಕ್ಷ ಮಹದೇವು, ಕಾರ್ಮಿಕರ ವಿಭಾಗದ ಅಧ್ಯಕ್ಷ ಗೋವಿಂದರಾಜು, ಎಸ್ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜ್, ಯುವ ಘಟಕದ ಅಧ್ಯಕ್ಷ ಅಶೋಕ್, ಜಿಪಂ ಮಾಜಿ ಅಧ್ಯಕ್ಷೆ ಲತಾ, ಮುಖಂಡರಾದ ಶಿವಪ್ಪದೇವರು, ರಾಜು, ಸೋಮೇಶ್, ಸೂರ್ಯಕುಮಾರ್, ರಂಗಸ್ವಾಮಿ, ಸಂಗರಾಜು, ಅಭಿನಂದನ್ ಪಟೇಲ್, ಜಗದೀಶ್ ಸೇರಿದಂತೆ ಇತರರಿದ್ದರು.


ಕೆ.ಪಿ.ಸಿ.ಸಿ. ಕಾರ್ಯದರ್ಶಿ ಹಾಗೂ ನಾಗವಾಲ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಬಡವರ ಬಂಧು, ಯುವಕರ ಕಣ್ಮಣಿ, ಸ್ನೇಹಜೀವಿ ಸದಾ ಹಸನ್ಮುಖಿಯಾದ
ಸನ್ಮಾನ್ಯ ಶ್ರೀ ಸಿ. ನರೇಂದ್ರಣ್ಣ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಚೇತನ್
ಯುವ ಮುಖಂಡರು
ಅವಿನಾಶ್
ಯುವ ಮುಖಂಡರು
ಹಿನಕಲ್ ಮಂಜು
ಬಿಳಿಕೆರೆ ಸ್ವಾಮಿ
ವಿನೋದ್ ಎಸ್.ಆರ್.ಎಸ್.
ಪೈ. ನವೀನ್ ಕುಮಾರ್
ಹೊಸಕೋಟೆ ಗಿರೀಶ್
ಸಂತೋಷ್ ಕುಮಾರ್
ಮಹದೇವಸ್ವಾಮಿ
ಹುರುವಾರಹಳ್ಳಿ ಹರೀಶ್
ಕೋಟೆ ಸುರೇಶ್
ಪ್ರದೀಪ್ ನಂಜನಗೂಡು
ಮಂಜು ಬೆಳವಾಡಿ
ಧನಗಳ್ಳಿ ಪ್ರವೀಣ್
ಪ್ರಧಾನ ಕಾರ್ಯದರ್ಶಿ
ಮೈಸೂರು ಜಿಲ್ಲಾ ಗ್ರಾಮಾಂತರ
ಯುವ ಕಾಂಗ್ರೆಸ್ ಸಮಿತಿ
ಪ್ರಕಟಣೆ : ಸಿ.ನರೇಂದ್ರಣ್ಣರವರ ಅಭಿಮಾನಿಗಳ ಬಳಗ, ಮೈಸೂರು
GRAPHIC WORLD
9535370787